ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ

(ಆರಂಭದಿಂದ ಕ್ರಿ.ಶ. ೮೦೦ರವರೆಗೆ)

ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

೨೦೦೭-೨೦೦೮

ಮಾರ್ಗದರ್ಶಕರು

ಡಾ || ಎಸ್. ಡಿ. ಶಶಿಕಲಾ

ಉಪನ್ಯಾಸಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು – ೦೪

ಸಂಶೋಧನಾ ವಿದ್ಯಾರ್ಥಿ

ವಿ. ಜಯರಾಮಯ್ಯ

ಶ್ರೀ ಕುವೆಂಪು ಸ್ನಾತಕೋತ್ತರ ಕೇಂದ್ರ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿ ಪುರಂ, ಮೈಸೂರು – ೧೨

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಹೊಸಪೇಟೆ ತಾಲ್ಲೂಕು

ಬಳ್ಳಾರಿ ಜಿಲ್ಲೆ

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ ವಿ. ಜಯರಾಮಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ "ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ (ಆರಂಭದಿಂದ ಕ್ರಿ.ಶ. ೮೦೦ ರ ವರೆಗೆ)" ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾನಿಲಯಕ್ಕೆ, ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೮/೦೮/೦೮

ಸ್ಥಳ : ಮೈಸೂರು

ಎಸ್.ಡಿ. [signature]

ಮಾರ್ಗದರ್ಶಕರು

ಡಾ॥ ಎಸ್. ಡಿ. ಶಶಿಕಲಾ

ಉಪನ್ಯಾಸಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು – ೦೬

ಅಭ್ಯರ್ಥಿಯ ಘೋಷಣಾ ಪತ್ರ

ಡಾ॥ ಎಸ್. ಡಿ. ಶಶಿಕಲಾ – ಉಪನ್ಯಾಸಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಾರ್ಗದರ್ಶನದಲ್ಲಿ "ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ (ಆರಂಭದಿಂದ ಕ್ರಿ.ಶ. ೮೦೦ರವರೆಗೆ)" ಎಂಬ ವಿಷಯದ ಬಗ್ಗೆ ನಡೆಸಿದ ಅಧ್ಯಯನದ ಫಲವೇ ಈ ನಿಬಂಧ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 18/08/08

ಸ್ಥಳ : ಮೈಸೂರು

ನಿಬಂಧಕಾರರು

ಕನ್ನಡ ಎಂ.ಫಿಲ್

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿ ಪುರಂ, ಮೈಸೂರು.

ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ

(ಆರಂಭದಿಂದ ಕ್ರಿ.ಶ. ೮೦೦ರ ವರೆಗೆ)

ಪರಿವಿಡಿ

ಅಧ್ಯಾಯ – ಒಂದು

ಪೀಠಿಕೆ

ಅಧ್ಯಾಯ – ಎರಡು

ಆರಂಭ ಕಾಲಘಟ್ಟದ ಶಾಸನಗಳು

ಅಧ್ಯಾಯ – ಮೂರು

ಸಾಹಿತ್ಯಕ ಅಧ್ಯಯನ

ಅಧ್ಯಾಯ – ನಾಲ್ಕು

ಶಾಸ್ತ್ರೀಯ ಅಧ್ಯಯನ

ಅಧ್ಯಾಯ – ಐದು

ಅಧ್ಯಾಯ – ಆರು

ಅನುಬಂಧ

ಅಧ್ಯಾಯ – ಒಂದು

ಪೀಠಿಕೆ

ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಇದುವರೆವಿಗೂ ಈ ವಿಷಯದ ಬಗ್ಗೆ ನಡೆದಿರುವ ಅಧ್ಯಯನದ ಸ್ಥೂಲ ಸಮೀಕ್ಷೆ ಆಕರ ಸಾಮಗ್ರಿಗಳು, ಪ್ರಸ್ತುತ ಅಧ್ಯಯನದ ರೂಪುರೇಷೆ

ಪೀಠಿಕೆ

ಬಹುಕಾಲ ಉಳಿಯುವಂತಹ ವಸ್ತುವಿನ ಮೇಲೆ ಬಹುಕಾಲ ಉಳಿಯುವಂತೆ ಕೊರೆಯಲ್ಪಟ್ಟ ಬರಹಗಳನ್ನು ಶಾಸನ ಎಂದು ಕರೆಯುತ್ತಾರೆ. ಶಾಸನಗಳನ್ನು ಬರೆಯುವ ಪದ್ಧತಿಯು ಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಕ್ರಿ.ಪೂ. ೩ನೆಯ ಶತಮಾನದಲ್ಲಿ ರಚಿತವಾದ ಮೌರ್ಯವಂಶದ ಚಕ್ರವರ್ತಿ ದೇವನಾಂಪ್ರಿಯ ಪ್ರಿಯದರ್ಶಿ ಅಶೋಕನ ಶಾಸನಗಳಿಂದ ಹಿಡಿದು ಹತ್ತಾರು ಸಾವಿರ ಶಾಸನಗಳು ಕರ್ನಾಟಕದಾದ್ಯಂತ ದೊರೆತಿವೆ. ಈ ಶಾಸನಗಳನ್ನು ಎಪಿಗ್ರಾಫಿಯಾ ಕರ್ನಾಟಕ ಮಾಲಿಕೆಯಲ್ಲಿ ಸಂಪಾದಿಸಿ ಪ್ರಕಟಿಸುವ ಕೆಲಸ ನಡೆಯುತ್ತಿದೆ.

ಬಿ.ಎಲ್. ರೈಸ್‌ರವರ ಸಂಪಾದಕತ್ವದಲ್ಲಿ ೧೮೮೬ರಿಂದ ೧೯೦೬ರ ಅವಧಿಯಲ್ಲಿ ಎಪಿಗ್ರಾಫಿಯಾ ಕರ್ನಾಟಕದ ಹನ್ನೆರಡು ಸಂಪುಟಗಳು ಪ್ರಕಟವಾದವು. ಆರ್. ನರಸಿಂಹಾಚಾರ್‌ರವರ ಸಂಪಾದಕತ್ವದಲ್ಲಿ ಎಪಿಗ್ರಾಫಿಯಾ ೧೨ರಿಂದ ೧೬ರ ವರೆಗೆ ಮುಂದುವರೆದ ನಾಲ್ಕು ಸಂಪುಟಗಳು ಪ್ರಕಟವಾದವು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ೧೯೭೧ರಿಂದ ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳ ಪರಿಷ್ಕೃತ ಆವೃತಿಗಳು ಪ್ರಕಟವಾಗುತ್ತಿದ್ದು ಇದುವರೆಗೂ ೧೩ ಸಂಪುಟಗಳು ಪ್ರಕಟವಾಗಿವೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಉತ್ತರ ಕರ್ನಾಟಕದ ಶಾಸನಗಳು ಸಂಪಾದಿತವಾಗಿ ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್ ಎಂಬ ಹೆಸರಿನಲ್ಲಿ ೭ ಸಂಪುಟಗಳು ಪ್ರಕಟವಾಗಿವೆ. ಭಾರತ ಸರ್ಕಾರದ ಶಾಸನ ಇಲಾಖೆಯಿಂದ ಪ್ರಕಟವಾಗುತ್ತಿರುವ ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ (SII) ಸಂಪುಟಗಳಲ್ಲಿಯೂ ಸಹ ಕರ್ನಾಟಕದ ಹಲವಾರು ಶಾಸನಗಳು ಪ್ರಕಟವಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ವತಿಯಿಂದ ಹಲವಾರು ಶಾಸನ ಸಂಪುಟಗಳು ಪ್ರಕಟವಾಗಿವೆ.

ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ಸಾಧನೆ, ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಇತಿಹಾಸ ದರ್ಶನ, ಲೋಚನ, ಶಾಸನ ಅಧ್ಯಯನ, ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ಕ್ವಾರ್ಟರ್ಲೀ ಜರ್ನಲ್ ಆಫ್ ಮಿಥಿಕ್ ಸೊಸೈಟಿ (Q.J.M.S), ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನ ವಿಭಾಗದಿಂದ ಶಾಸನ ಅಧ್ಯಯನ ಎಂಬ ಅರ್ಧ ವಾರ್ಷಿಕ ಸಂಚಿಕೆ ಮುಂತಾದ ನಿಯತ ಕಾಲಿಕೆಗಳಲ್ಲಿಯೂ ಸಹ ಶಾಸನಗಳು ಸಂಪಾದಿತವಾಗಿ ಪ್ರಕಟವಾಗುತ್ತಿವೆ. ಈ ರೀತಿ ಕರ್ನಾಟಕದಾದ್ಯಂತ ಶಾಸನಗಳ ಸಂಪಾದನೆ ಹಾಗೂ ಪ್ರಕಟಣಾ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ ಶಾಸನಗಳನ್ನು ಕುರಿತಂತಹ ಸಂಶೋಧನೆಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದಿಲ್ಲವೆಂದು ಹೇಳಬಹುದು.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಶಾಸನಗಳು ಯಾವ ವಿಷಯಗಳನ್ನು ಪ್ರಧಾನವಾಗಿ ನಿರೂಪಿಸಲು ಹೊರಟಿರುತ್ತವೆಯೋ ಅವುಗಳಿಗಿಂತ ಅನುದ್ದೇಶಪೂರ್ವಕವಾಗಿಯೋ, ಪ್ರಾಸಂಗಿಕವಾಗಿಯೋ ಅವು ಕೊಡುವ ವಿವರಗಳು ನಮಗೆ ಬಹು ಅಮೂಲ್ಯವಾಗಿರುತ್ತವೆ. ಇಂತಹ ಅಮೂಲ್ಯವಾದ ಮಾಹಿತಿಗಳ ಆಗರವಾದ ಶಾಸನಗಳನ್ನು ಕುರಿತಂತಹ ವಿಶ್ಲೇಷಣಾ ರೂಪದ ಅಧ್ಯಯನಗಳು ಕೇವಲ ಬೆರಳೆಣಿಕೆಯಷ್ಟು ನಡೆದಿವೆ.

ಅವುಗಳಲ್ಲಿ ಅತ್ಯಂತ ಪ್ರಮುಖವಾದವುಗಳೆಂದರೆ ಡಾ|| ಎ.ಎನ್. ನರಸಿಂಹಯ್ಯ ನವರ 'A Grammar of oldest kanarese inscriptions', ಡಾ|| ಜಿ.ಎಸ್. ಗಾಯಿ ಅವರ 'Historical Grammar of Old Kannada Inscriptions', ಡಾ|| ಎಂ. ಚಿದಾನಂದ ಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ|| ಆರ್. ಶೇಷಶಾಸ್ತ್ರಿಯವರ 'ಕರ್ನಾಟಕದ ವೀರಗಲ್ಲುಗಳು, ಡಾ|| ಚೆನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಮುಂತಾದ ಪಿಎಚ್.ಡಿ. ಮಹಾ ಪ್ರಬಂಧಗಳನ್ನು ಗಮನಿಸಬಹುದು.

ಈ ಅಧ್ಯಯನಗಳೆಲ್ಲವೂ ಶಾಸನಗಳನ್ನು ಮೂಲ ಆಕರವಾಗಿಟ್ಟುಕೊಂಡು ನಡೆಸಿದ ಪಿಎಚ್.ಡಿ. ಸಂಶೋಧನೆಗಳು. ಇವುಗಳ ಜೊತೆಗೆ ಡಾ|| ಕರಮಕರ್ ಅವರ 'Cultural History of Karnataka', ಡಾ|| ರಂ.ಶ್ರೀ. ಮುಗಳಿಯವರ 'The Heritage of Karnataka', ಡಾ|| ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಕೃತಿಗಳನ್ನು ಹೆಸರಿಸಬಹುದು. ಈ ಕೃತಿಗಳು ಪಿಎಚ್.ಡಿ. ಮಹಾ ಪ್ರಬಂಧಗಳಲ್ಲದಿದ್ದರೂ ಅಷ್ಟೇ ಮಹತ್ವವನ್ನು ಪಡೆದಿರುವ ಸಂಶೋಧನ ಗ್ರಂಥಗಳಾಗಿವೆ. ಈ ರೀತಿಯಲ್ಲಿ ಶಾಸನಗಳ ವಿವಿಧ ಆಯಾಮಗಳ ಬಗ್ಗೆ ಹಲವು ಸಂಶೋಧನೆಗಳು ನಡೆದಿವೆ.

ಇದುವರೆವಿಗೂ ಶಾಸನಗಳನ್ನು ಪ್ರಮುಖ ಆಕರವಾಗಿ ಬಳಸಿಕೊಂಡು ರಾಜಕೀಯ ಚರಿತ್ರೆ, ಸಾಮಾಜಿಕ ಚರಿತ್ರೆ, ಧಾರ್ಮಿಕ ಚರಿತ್ರೆ, ಭಾಷಿಕ ಚರಿತ್ರೆ ಮುಂತಾದ ಅಧ್ಯಯನಗಳು ನಡೆದಿವೆಯೇ ಹೊರತು ಶಾಸನಗಳ ಸಾಹಿತ್ಯಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಮಗ್ರ ಸಂಶೋಧನೆ ನಡೆದಿಲ್ಲವೆಂದು ಹೇಳಬಹುದು. ಈ ದೃಷ್ಟಿಯಿಂದ ನಾನು ಈ ವಿಷಯವನ್ನು ಎಂ.ಫಿಲ್ ಪದವಿಯ ಸಂಶೋಧನೆಗೆ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

'ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ' ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಆರಂಭದಿಂದ ಕ್ರಿ.ಶ. ೮೦೦ರ ವರೆಗೆ ಬರುವ ಸಾಹಿತ್ಯಕ ಅಂಶವುಳ್ಳ ಕನ್ನಡ ಶಾಸನಗಳನ್ನು ಆಯ್ದುಕೊಂಡು ಅವುಗಳ ಅಧ್ಯಯನ ಮಾಡಲಾಗುತ್ತದೆ. ಅಂದರೆ ಅಶೋಕನ ಶಾಸನದಿಂದ ಹಿಡಿದು ಕ್ರಿ.ಶ. ೮೦೦ರ ವರೆಗೆ ಅಧ್ಯಯನ ಮಾಡಲಾಗುತ್ತದೆ. ಕನ್ನಡ ಶಾಸನಗಳಲ್ಲಿ ಸಾಹಿತ್ಯಕ ಅಂಶವಿರುವ ಶಾಸನ ಸಿಗುವುದು ಕ್ರಿ.ಶ. ೫೦೦

ರಿಂದ. ಆದ್ದರಿಂದ ಮುಖ್ಯವಾಗಿ ಕ್ರಿ.ಶ. ೫೦೦ ರಿಂದ ಕ್ರಿ.ಶ. ೮೦೦ರ ವರೆಗಿನ ಸಾಹಿತ್ಯಕ ಶಾಸನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಪ್ರಸ್ತುತ ಸಂಶೋಧನ ನಿಬಂಧವನ್ನು ರಚಿಸಲಾಗಿದೆ.

ಇದುವರೆವಿಗೂ ಈ ವಿಷಯದ ಬಗ್ಗೆ ನಡೆದಿರುವ ಅಧ್ಯಯನದ ಸ್ಥೂಲ ಸಮೀಕ್ಷೆ :

ಡಾ॥ ಎಂ.ಎಂ. ಕಲಬುರ್ಗಿಯವರು ರಚಿಸಿರುವ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ 'ಶಾಸನ ಸಾಹಿತ್ಯ' ಎಂಬ ೩೦ ಪುಟಗಳ ಅಧ್ಯಾಯದಲ್ಲಿ ಕವಿರಾಜಮಾರ್ಗಕ್ಕಿಂತಲೂ ಹಿಂದಿನ ಶಾಸನ ಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಆದರೆ ಈ ಅಧ್ಯಯನವು ೬೦ರ ದಶಕದಲ್ಲಿ ನಡೆದಿದೆ. ಆನಂತರದ ಕಾಲಘಟ್ಟದಲ್ಲಿ ಸಾವಿರಾರು ಅಪ್ರಕಟಿತ ಶಾಸನಗಳು ಪ್ರಕಟವಾಗಿವೆ. ಅವುಗಳನ್ನು ಕಲಬುರ್ಗಿಯವರ ಮಹಾಪ್ರಬಂಧದಲ್ಲಿ ಬಳಸಿಕೊಂಡಿಲ್ಲದಿರುವುದು ಗಮನಾರ್ಹ.

ಡಾ॥ ಬಿ.ವಿ. ಶಿರೂರ ಅವರ ಪಿಎಚ್.ಡಿ ಪ್ರಬಂಧವಾದ 'ಶ್ರವಣ ಬೆಳಗೊಳ – ರಾಜಕೀಯ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಮಹತ್ವ' ಎಂಬ ಕೃತಿಯಲ್ಲಿ ಶ್ರವಣಬೆಳಗೊಳದ ಶಾಸನಗಳ ಸಾಹಿತ್ಯಕ ಮಹತ್ವವನ್ನು ಮಾತ್ರ ಅಧ್ಯಯನಕ್ಕೊಳಪಡಿಸಲಾಗಿದೆ. ಡಾ॥ ಎಂ.ಬಿ. ನೇಗಿನಹಾಳ ಅವರ ಪಿಎಚ್.ಡಿ. ಪ್ರಬಂಧವಾದ 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಕ ಅಧ್ಯಯನ' ಕೃತಿಯಲ್ಲಿ ಪ್ರಾಚೀನ ಶಾಸನಗಳ ಭಾಷಿಕ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ ಹಾಗೂ ಈ ಮಹಾಪ್ರಬಂಧ ರಚನೆಯಾದ ನಂತರದ ಕಾಲಘಟ್ಟದಲ್ಲಿ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದ ಸಾವಿರಾರು ಶಾಸನಗಳು ಪ್ರಕಟವಾಗಿವೆ. ಇವುಗಳನ್ನು ಕುರಿತು ಅಧ್ಯಯನ ನಡೆಸುವ ಅವಶ್ಯಕತೆಯಿದೆ.

ಆರ್. ನರಸಿಂಹಚಾರ್ ಅವರ 'ಶಾಸನ ಪದ್ಯ ಮಂಜರಿ' ಒಂದು ಸಂಕಲನ ಗ್ರಂಥ. ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾಗಿರುವ ಶಾಸನ ಪದ್ಯಗಳ ಸಂಕಲನ ಈ ಗ್ರಂಥದಲ್ಲಿ ಶಾಸನ ಪದ್ಯಗಳ ಬಗ್ಗೆ ಯಾವ ರೀತಿಯ ವಿಶ್ಲೇಷಣಾ ಕಾರ್ಯವೂ ನಡೆದಿಲ್ಲರುವುದು ಗಮನಾರ್ಹ. ಡಾ॥ ಎಂ. ಚಿದಾನಂದ ಮೂರ್ತಿಯವರ ಸಂಶೋಧನ ಲೇಖನಗಳನ್ನೊಳಗೊಂಡ 'ಸಂಶೋಧನ ತರಂಗ – ೦೨' ಗ್ರಂಥದಲ್ಲಿರುವ 'ಶಾಸನಗಳು ಮತ್ತು ಕನ್ನಡ ಸಾಹಿತ್ಯ' ಎಂಬ ಪುಟ್ಟ ಲೇಖನದಲ್ಲಿ ಶಾಸನಗಳ ಸಾಹಿತ್ಯಕ ಮಹತ್ವದ ಬಗ್ಗೆ ಚರ್ಚಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ಸಾಹಿತ್ಯ ಚರಿತ್ರೆ – ಸಂಪುಟ ೦೨' ಗ್ರಂಥದಲ್ಲಿ 'ಶಾಸನ ಸಾಹಿತ್ಯ' ಎಂಬ ಲೇಖನವೊಂದಿದೆ. ಈ ಲೇಖನದಲ್ಲಿ ಶಾಸನೋಕ್ತ ಪದ್ಯಗಳ ಪ್ರಮುಖವಾದ ನಾಲ್ಕೈದು ಶಾಸನಗಳ ಸಾಹಿತ್ಯಕ ಮತ್ತು ಛಂದಸ್ಸಿನ ಬಗ್ಗೆ ವಿಶ್ಲೇಷಣೆ ನಡೆಸಲಾಗಿದೆ. ಎ.ಎಂ. ಅಣ್ಣೀಗೇರಿ ಮತ್ತು ಮೇವುಂಡಿ ಮಲ್ಲಾರಿಯವರು 'ಶಾಸನ ಸಾಹಿತ್ಯ ಸಂಚಯ' ಎಂಬ ಗ್ರಂಥದಲ್ಲಿ ವಿಶೇಷವಾಗಿ ಉತ್ತರ

ಕರ್ನಾಟಕ ಶಾಸನ ಪದ್ಯಗಳನ್ನು ಆರಿಸಿ ಸಂಪಾದಿಸಿದ್ದಾರೆ. ಆದರೆ ಈ ಗ್ರಂಥದಲ್ಲಿ ಕ್ರಿ.ಶ. ೮೦೦ ರ ನಂತರ ಬರುವ ಶಾಸನ ಪದ್ಯಗಳನ್ನು ಸಂಕಲಿಸಿದ್ದಾರೆ. ಹಾಗೂ ಇಲ್ಲಿಯೂ ಸಹ ಈ ಶಾಸನಗಳ ವಿಶ್ಲೇಷಣೆ ನಡೆದಿಲ್ಲ.

ಈ ಮೇಲಿನ ಎಲ್ಲಾ ಗ್ರಂಥಗಳು ೭೦ರ ದಶಕದಲ್ಲಿ ಪ್ರಕಟವಾಗಿರುವ ಗ್ರಂಥಗಳೆಂಬುದು ಗಮನಾರ್ಹ ಅಂಶ. ಆನಂತರದ ಕಾಲಘಟ್ಟದಲ್ಲಿ ಹಲವಾರು ಶಾಸನ ಸಂಪುಟದಲ್ಲಿ ಸಾವಿರಾರು ಅಪ್ರಕಟಿತ ಶಾಸನಗಳು ಪ್ರಕಟವಾಗಿವೆ. ಅವುಗಳನ್ನು ಸಾಹಿತ್ಯದ ದೃಷ್ಟಿಯಿಂದ ಸರಿಯಾಗಿ ಅಧ್ಯಯನ ನಡೆಸಿಲ್ಲವೆಂದು ಹೇಳಬಹುದು. ಈ ರೀತಿ ಶಾಸನಸಾಹಿತ್ಯದ ಮಹತ್ವದ ಕೆಲಸ ಅಲ್ಪ-ಸ್ವಲ್ಪ ನಡೆದಿದೆಯಾದರೂ ಸಮಗ್ರವಾಗಿ ನಡೆದಿಲ್ಲ. ಆದ್ದರಿಂದ ಕನ್ನಡ ಶಾಸನ ಸಾಹಿತ್ಯದ ಸಮಗ್ರ ಅಧ್ಯಯನದ ಅಗತ್ಯವಿದೆ.

ಆಕರ ಸಾಮಗ್ರಿಗಳು :

"ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ" ಈ ನನ್ನ ಅಧ್ಯಯನಕ್ಕೆ ಎಪಿಗ್ರಾಪಿಯ ಕರ್ನಾಟಕ ಶಾಸನ ಸಂಪುಟಗಳೂ ಹಾಗೂ ಹಂಪಿ ವಿಶ್ವವಿದ್ಯಾನಿಲಯದ ಶಾಸನ ಸಂಪುಟಗಳನ್ನು ಮುಖ್ಯವಾಗಿ ಬಳಸಿಕೊಳ್ಳಲಾಗಿದೆ. ಕರ್ನಾಟಕದ ಶಾಸನಗಳಲ್ಲದೆ ಕರ್ನಾಟಕದ ಹೊರಗಡೆ ಅಂದರೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕೇರಳ ಮುಂತಾದ ರಾಜ್ಯಗಳಲ್ಲಿ ಪ್ರಕಟವಾಗಿರುವ ಕನ್ನಡ ಶಾಸನ ಸಂಪುಟದಲ್ಲಿರುವ ಶಾಸನ ಸಾಹಿತ್ಯವನ್ನು ಬಳಸಿಕೊಳ್ಳಲಾಗಿದೆ. ಅದೇ ರೀತಿ ಇತಿಹಾಸದರ್ಶನ, ಲೋಚನ, ಸಾಧನೆ, ಮಾನವಿಕ ಕರ್ನಾಟಕ, ಜಯಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ನಾಟಕ, ಶಾಸನ ಅಧ್ಯಯನ, ಇತ್ಯಾದಿ ನಿಯತಕಾಲಿಕೆಯಲ್ಲಿ ಪ್ರಕಟವಾಗಿರುವ ಶಾಸನಗಳನ್ನು ಆಕರ ಸಾಮಗ್ರಿಯಾಗಿ ಬಳಸಿಕೊಳ್ಳಲಾಗುತ್ತದೆ.

ಪ್ರಸ್ತುತ ಅಧ್ಯಯನದ ರೂಪುರೇಷೆ :

ಪ್ರಸ್ತುತ ಅಧ್ಯಯನದಲ್ಲಿ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಕ್ರಿ.ಶ. ೮೦೦ರ ವರೆಗಿ ಸಾಹಿತ್ಯ ದೃಷ್ಟಿಯಿಂದ ಮಹತ್ವವನ್ನು ಪಡೆದಿರುವ ಎಲ್ಲ ಶಾಸನಗಳನ್ನು ಸಮಗ್ರವಾಗಿ ಅಧ್ಯಯನ ಇಲ್ಲಿ ಮಾಡಲಾಗುತ್ತದೆ. ಈ ಸಂಪ್ರಬಂಧದಲ್ಲಿ ಅಧ್ಯಯನ ಅನುಕೂಲಕ್ಕಾಗಿ ಒಟ್ಟು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಅಧ್ಯಾಯ ಒಂದರಲ್ಲಿ ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಹಾಗೂ ಶಾಸನಸಾಹಿತ್ಯಕದ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆವಿಗೂ ನಡೆದಿರುವ ಅಧ್ಯಯನವನ್ನು ನಿರೂಪಿಸಲಾಗುತ್ತದೆ. ಆಕರ ಸಾಮಗ್ರಿಗಳಿಗಾಗಿ ಯಾವ ಯಾವ ಆಕರಗಳನ್ನು ಬಳಸಿಕೊಳ್ಳಲಾಗುತ್ತದೆ ಎಂಬುದನ್ನು ಒಂದನೇ ಅಧ್ಯಾಯದಲ್ಲಿ ನಡೆಸಲಾಗುತ್ತದೆ.

ಅಧ್ಯಾಯ ಎರಡರಲ್ಲಿ ಕನ್ನಡ ಶಾಸನಗಳ ಆರಂಭ ಕಾಲವನ್ನು ವಿವರಿಸುತ್ತಾ ಕ್ರಿಪೂ. ೩ನೆಯ ಶತಮಾನದಿಂದ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದವರೆಗೆ ವಿವರಿಸಲಾಗುತ್ತದೆ. ಅಂದರೆ ಕರ್ನಾಟಕದಲ್ಲಿ ಶಾಸನಗಳ ರಚನೆಯ ಕಾಲ ಎಲ್ಲಿಂದ ಆರಂಭವಾಯಿತು ? ಶಾಸನಗಳಲ್ಲಿ ಎಲ್ಲಿಂದ ಕನ್ನಡ ಶಬ್ದಗಳು ಕಾಣಿಸಿಕೊಂಡವು ? ಇವುಗಳ ಜೊತೆಗೆ ಪ್ರಾಚೀನ ಶಾಸನಗಳಾದ ಹಲ್ಮಿಡಿಶಾಸನ, ಶ್ರವಣಬೆಳಗೊಳದ ಗುಣ ಭೂಷಿತ ಮುನಿಯ ಶಾಸನ, ಗದ್ದೆಮನೆ ಶಾಸನ, ಮಂಗಳೇಶನ ಬಾದಾಮಿ ಶಾಸನ, ಜಲಗಾರ ದಿಬ್ಬದ ಶಾಸನ ಇತ್ಯಾದಿ ಪ್ರಮುಖ ಶಾಸನಗಳನ್ನು ಕುರಿತು ಕೂಲಂಕಶವಾಗಿ ಚರ್ಚಿಸಲಾಗುತ್ತದೆ.

ಮೂರನೇ ಅಧ್ಯಾಯದಲ್ಲಿ ಕನ್ನಡ ಶಾಸನಗಳ ಸಾಹಿತ್ಯಕ ಆರಂಭಕಾಲದಿಂದ ಹಿಡಿದು ಕ್ರಿ.ಶ. ೮೦೦ರ ವರೆಗೆ ದೊರೆಯುವ ಸಾಹಿತ್ಯಕ ಅಂಶವಿರುವ ಶಾಸನಗಳ ಮಹತ್ವವನ್ನು ಚರ್ಚಿಸಲಾಗುವುದು. ಪ್ರಮುಖವಾಗಿ ಕನ್ನಡದ ಸಾಹಿತ್ಯಕ ಅಂಶವಿರುವ ಮೊಟ್ಟ ಮೊದಲ ಶಾಸನವಾದ ತಮಟಕಲ್ಲು ಶಾಸನವನ್ನು ಸಮಗ್ರವಾಗಿ ಚರ್ಚಿಸಲಾಗುತ್ತದೆ. ಅದೇ ರೀತಿ ಗುಣಭೂಷಿತ ಮುನಿಯ ಶಾಸನ, ಬಾದಾಮಿ ಶಾಸನ, ಹೊಂಬುಜ ಶಾಸನ, ಸೊರಬದ ಶಾಸನ ಮುಂತಾದ ಪ್ರಮುಖ ಶಾಸನಗಳ ಸಾಹಿತ್ಯಕ ಮಹತ್ವವನ್ನು ಚರ್ಚಿಸಲಾಗುತ್ತದೆ.

ಅಧ್ಯಾಯ ನಾಲ್ಕರಲ್ಲಿ ಕ್ರಿ.ಶ. ೪೫೦ರಿಂದ ೮೦೦ರ ವರೆಗೆ ದೊರೆತಿರುವ ಪ್ರಮುಖ ಶಾಸನಗಳನ್ನು ಛಂದಸ್ಸು – ಅಲಂಕಾರ ಶಾಸ್ತ್ರದ ಹಿನ್ನಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಐದನೇ ಅಧ್ಯಾಯದಲ್ಲಿ ಈ ಸಂಪ್ರಬಂಧದಲ್ಲಿನ ನಾಲ್ಕೂ ಅಧ್ಯಾಯಗಳಲ್ಲಿನ ಫಲಿತವನ್ನು ಸಮಾರೋಪಗೊಳಿಸಲಾಗುವುದು. ಅಧ್ಯಯನದ ಕೊನೆಯಲ್ಲಿ ಅನುಬಂಧ ರೂಪದಲ್ಲಿ ಕೆಲವು ಪ್ರಮುಖ ಶಾಸನಗಳ ಛಾಯಾಚಿತ್ರಗಳು ಹಾಗೂ ಪ್ರಸ್ತುತ ಅಧ್ಯಯನಕ್ಕೆ ಸಹಾಯಕವಾಗಿ ಬಳಸಿಕೊಂಡಿರುವ ಗ್ರಂಥಋಣವನ್ನು ಕೊಡಲಾಗುತ್ತದೆ.

ಅಧ್ಯಾಯ – ಎರಡು

ಆರಂಭ ಕಾಲಘಟ್ಟದ ಶಾಸನಗಳು

ಕರ್ನಾಟಕದಲ್ಲಿ ಪ್ರಾಚೀನತೆ,

ಶಾಸನೋಕ್ತ ಪ್ರಾಚೀನ ಕನ್ನಡ ಶಬ್ದಗಳು

ಪ್ರಾಚೀನ ಕನ್ನಡ ಶಾಸನಗಳು: ಹಲ್ಮಿಡಿ ಶಾಸನ,

ಶ್ರವಣಬೆಳಗೊಳದ ಗುಣಭೂಷಿತಮುನಿಯ ಶಾಸನ, ಮಂಗಳೇಶನ

ಬಾದಾಮಿ ಶಾಸನ, ಜಲಗಾರ ದಿಬ್ಬದ ಶಾಸನ,

ಮುಂತಾದ ಶಾಸನಗಳು, ಗದ್ದೆಮನೆ ಶಾಸನ

ಆರಂಭ ಕಾಲಘಟ್ಟದ ಶಾಸನಗಳು

ಕರ್ನಾಟಕದಲ್ಲಿ ಶಾಸನಗಳ ಪ್ರಾಚೀನತೆ : 'ಕರ್ನಾಟಕದಲ್ಲಿ ಶಾಸನಗಳ ಪ್ರಾಚೀನತೆ' ಈ ಅಧ್ಯಾಯದಲ್ಲಿ ಕ್ರಿ.ಪೂ. ೩ನೆಯ ಶತಮಾನದಿಂದ ಹಿಡಿದು ಕ್ರಿ.ಶ. ೪೫೦ರ ವರೆಗೆ ಬರುವ ಶಾಸನಗಳನ್ನು ಚರ್ಚಿಸಲಾಗಿದೆ. ಕರ್ನಾಟಕದಲ್ಲಿ ಕ್ರಿ.ಪೂ. ೩ನೆಯ ಶತಮಾನದಿಂದಲೂ ಶಾಸನಗಳನ್ನು ಬರೆಯಿಸಿದ್ದ ಉಲ್ಲೇಖ ದೊರೆಯುತ್ತದೆ. ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೪೫೦ರ ಈ ೭೫೦ ವರ್ಷಗಳಲ್ಲಿ ಕರ್ನಾಟಕದಲ್ಲಿ ನೂರಾರು ಶಾಸನಗಳು ದೊರೆತಿದ್ದು ಇವುಗಳನ್ನು ಮೌರ್ಯರು, ಶಾತವಾಹನರು, ಕದಂಬರು ಹಾಕಿಸಿದರೆಂದು ತಿಳಿದುಬರುತ್ತದೆ. ಈ ಅವಧಿಯಲ್ಲಿ ಬ್ರಾಹ್ಮೀಲಿಪಿಯ ಪ್ರಾಕೃತ ಶಾಸನಗಳೂ ಮಾತ್ರ ಲಭಿಸುತ್ತಿದ್ದು. ಅಶೋಕನ ಪ್ರಾಕೃತ ಶಾಸನಗಳು ೧೪, ಶಾತವಾಹನರ ಪ್ರಾಕೃತ ಭಾಷೆಯ ಸುಮಾರು ೧೦೦ ಶಾಸನಗಳು ದೊರೆಯುತ್ತವೆಂದು ಡಾ॥ ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ.[೧] ಆದರೆ ಇತ್ತೀಚಿಗೆ ಗುಲ್ಬರ್ಗಾ ಜಿಲ್ಲೆಯ ಸನ್ನತಿಯ ಹತ್ತಿರದಲ್ಲಿನ ಕಣಗನಹಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿ ಶಾತವಾಹನರ ಕಾಲದ ಸುಮಾರು ೨೦೦ ಶಿಲಾಶಾಸನಗಳು ಪತ್ತೆಯಾಗಿವೆ.

ಮೌರ್ಯವಂಶದ ಅಶೋಕನ ಶಾಸನಗಳು ಕರ್ನಾಟಕದ ಕೊಪ್ಪಳ ಜಿಲ್ಲೆಯ ಫಾಲ್ಕಿಗುಂಡು, ಗವಿಮಠ, ಮಸ್ಕಿ, ಚಿತ್ರದುರ್ಗ ಜಿಲ್ಲೆಯ ಜಟಿಂಗ ರಾಮೇಶ್ವರ, ಬ್ರಹ್ಮಗಿರಿ, ಬಳ್ಳಾರಿ ಜಿಲ್ಲೆಯ ಸಿದ್ದಾಪುರ, ಉದೆಗೋಳಂ, ಗುಲ್ಬರ್ಗಾ ಜಿಲ್ಲೆಯ ಸನ್ನತಿ, ಮುಂತಾದ ಕಡೆ ಒಟ್ಟು ೧೪ ಶಾಸನಗಳು ದೊರೆತಿವೆ. ಅವುಗಳಲ್ಲಿ ಬ್ರಹ್ಮಗಿರಿಶಾಸನ, ನಿಟ್ಟೂರು ಶಾಸನ, ಸನ್ನತಿ ಶಾಸನ ಪ್ರಮುಖವಾಗಿವೆ. ಈ ಶಾಸನಗಳು ಬದುಕಿನ ಮೂಲಭೂತ ಮೌಲ್ಯಗಳನ್ನು ನಿರಾಡಂಬರ ಶೈಲಿಯಲ್ಲಿ ಸಾರುವ ಇವು ಪ್ರಾಚೀನ ಕರ್ನಾಟಕದ ಪ್ರಥಮ ನೀತಿ ಪಾಠಗಳಾಗಿವೆ ಎಂದು ಹೇಳಬಹುದು. ಅಶೋಕನ ಶಾಸನಗಳು ಕನ್ನಡ ಬರವಣಿಗೆಯ ದೃಷ್ಟಿಯಿಂದ ಮಾತೃಸ್ಥಾನದಲ್ಲಿ ನಿಲುತ್ತವೆ ಎಂದು ಕಲಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ.[೨]

ಕರ್ನಾಟಕದಲ್ಲಿ ದೊರೆಯುವ ಕೆಲವು ಪ್ರಮುಖ ಪ್ರಾಚೀನ ಶಾಸನಗಳು :

ಬ್ರಹ್ಮಗಿರಿಶಾಸನ : ಈ ಶಾಸನದ ಮೊದಲ ಸಾಲಿನಲ್ಲಿ ಕನ್ನಡದ 'ಇಸಿಲ' ಎಂಬ ಪದವಿದೆ. ಈ ಶಾಸನದ ಸಾರಾಂಶ ಈ ರೀತಿಯಿದೆ.

ದೇವಾನಾಂಪ್ರಿಯನ ಅಪ್ಪಣೆ (ಏನೆಂದರೆ)

ನಾನು ಉಪಾಸಕನಾಗಿ ಎರಡೂವರೆ ವರ್ಷಗಳಿಗಿಂತ ಹೆಚ್ಚಾಯಿತು. ಆದರೆ ಒಂದು ವರ್ಷದವರೆವಿಗೂ ಹೆಚ್ಚು ಪ್ರಯತ್ನ ಮಾಡಲಿಲ್ಲ. ನಾನು (ಬೌದ್ಧ) ಸಂಘವನ್ನು ದರ್ಶಿಸಿ ಈಗ್ಗೆ ಒಂದು ವರ್ಷದ ಮೇಲಾಯಿತು. ಆಗಿನಿಂದಲೂ ಅತಿಶಯ ಶ್ರದ್ಧೆಯನ್ನು ವಹಿಸಿದ್ದೇನೆ. ಇದುವರೆಗೆ ದೇವತೆಗಳೊಡನೆ ಬೆರೆಯದೆ ಇದ್ದ ಜಂಬ ದ್ವೀಪದ ಜನಗೂ ಈಗ ಅವರೊಂದಿಗೆ ಕಲೆತಿದ್ದಾರೆ. ಇವೆಲ್ಲವೂ ಶ್ರದ್ಧೆಯ ಫಲ.

೧ ಡಾ॥ ಎಂ.ಎಂ. ಕಲಬುರ್ಗಿ: ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ. ಪು : ೧೨೮

೨ ಡಾ॥ ಎಂ.ಎಂ. ಕಲಬುರ್ಗಿ. ಪೂರ್ವೋಕ್ತ. ಪುಟ : ೧೨೮

ಇದು ಸತ್ಯವಾಗಿಯೂ ಮಹಾತ್ಮರಿಗೆ ಮಾತ್ರ ಲಭ್ಯವಲ್ಲ. ಸಾಮಾನ್ಯ ಮನುಷ್ಯನಿಗೂ ಪ್ರಯತ್ನದಿಂದ ವಿಪುಲವಾದ ಪದವಿಯನ್ನು (ಸ್ವರ್ಗವನ್ನು) ಹೊಂದಲು ಸಾಧ್ಯ. ಸಾಮಾನ್ಯರೂ ಮಹಾತ್ಮರೂ ಈ ರೀತಿಯಾಗಿ ಪ್ರಯತ್ನಪಡಬೇಕೆಂದು, ನನ್ನ ರಾಜ್ಯದ ಗಡಿಗಳ ಜನರೂ ಇದನ್ನು ತಿಳಿಯಬೇಕೆಂದು, ಈ ಶ್ರದ್ಧೆಯು ಚಿರಸ್ಥಾಯಿಯಾಗಿರಬೇಕೆಂಬ ಈ ಪ್ರಕಟಣೆಯನ್ನು ಪ್ರಸಿದ್ಧಿಪಡಿಸಲಾಗಿದೆ. ಈ ವಿಷಯವನ್ನು ಇನ್ನೂ ವೃದ್ಧಿ ಮಾಡುತ್ತೇನೆ, ಅಧಿಕವಾಗಿ ವಿಸ್ತರಿಸುತ್ತೇನೆ. ಈಗಿರುವುದಕ್ಕಿಂತ ಒಂದೂವರೆಯಷ್ಟಾದರೂ ಹೆಚ್ಚಿಸುತ್ತೇನೆ. ಈ ಪ್ರಕಟಣೆಯು ನನ್ನ ಸಂಚಾರದಲ್ಲಿ ೨೫೬ ರಾತ್ರಿಗಳು ಕಳೆದ ನಂತರ ಹೊರಡಿಸಲಾಗಿದೆ.

ದೇವನಾಂಪ್ರಿಯನು ಹೀಗೆಂದು ಹೇಳಿರುವನು :

ತಾಯಿ ತಂದೆಗಳಲ್ಲಿ ಹಾಗೂ ಹಿರಿಯರಲ್ಲಿ ವಿನಯದಿಂದ ನಡೆದುಕೊಳ್ಳಬೇಕು. ಪ್ರಾಣಿಗಳಲ್ಲಿ ದಯೆ ಇಡಬೇಕು. ಸತ್ಯವನ್ನು/ನುಡಿಯಬೇಕು. ಹೀಗೆಯೇ ಶಿಷ್ಯರು ಆಚಾರ್ಯರನ್ನು ಗೌರವಿಸಬೇಕು. ನೆಂಟರಲ್ಲಿ ಸರಿಯಾಗಿ ನಡೆದುಕೊಳ್ಳಬೇಕು. ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಧರ್ಮ. ಇದರಿಂದಲೇ ದೀರ್ಘ ಆಯಸ್ಸು ಸಿದ್ದಿಸುತ್ತದೆ. (ಆದ್ದರಿಂದ) ಪ್ರತಿಯೊಬ್ಬನೂ ಹೀಗೆಯೇ ನಡೆದುಕೊಳ್ಳಬೇಕು. ಲಿಪಿಕಾರನಾದ ಚಪಡನು ಬರೆದುದು.

ನಿಟ್ಟೂರು ಶಾಸನ

ರಾಜನಾದ ಅಶೋಕ ಹೇಳುತ್ತಾನೆ. ನೀವು (ಕುಮಾರ ಮತ್ತು ಅವನ ಮಹಾ ಮಾತ್ರರು) ರಜ್ಜುಕರ ಮೇಲೆ ಆಜ್ಞೆ ಹೊರಡಿಸತಕ್ಕದ್ದು. ಆನಂತರ ಅವನು ಹಳ್ಳಿ ಮತ್ತು ಪಟ್ಟಣಗಳ ನಾಗರೀಕರಿಗೆ ಆಜ್ಞಾಪಿಸುತ್ತಾನೆ. ಪ್ರತಿಯೊಬ್ಬನೂ ತಂದೆ ತಾಯಿಗಳಿಗೆ ವಿಧೇಯನಾಗಿರತಕ್ಕದ್ದು. ಅದೇ ರೀತಿ ಪ್ರತಿಯೊಬ್ಬನೂ ಹಿರಿಯರಿಗೆ ಗೌರವ ತೋರಿಸತಕ್ಕದ್ದು. ಜೀವಿಗಳಿಗೆ ಕರುಣೆ ತೋರಿಸತಕ್ಕದ್ದು. ಪ್ರತಿಯೊಬ್ಬ ಪ್ರಜೆಯೂ ಧರ್ಮ ಗುಣಗಳನ್ನು ರೂಢಿಸಿಕೊಳ್ಳಬೇಕು. ಬಂಧು ಬಳಗದವರಲ್ಲಿ ಆದರವಿರಬೇಕು. ಇದೇ ಎಂದಿನಿಂದಲೂ ನಡೆದು ಬಂದ ಪದ್ಧತಿ. ಗುರುಗಳನ್ನು ಗೌರವಿಸಬೇಕು ಮತ್ತು ಅವರಿಗೆ ವಿಧೇಯರಾಗಿರಬೇಕು. ಇದೇ ರೀತಿಯ ಆಜ್ಞೆಯನ್ನು ಬ್ರಾಹ್ಮಣ ಗುರುಗಳು, ಮಾವುತರು, ಕುದುರೆ ಸವಾರರು ಮತ್ತು ಕಾರಕೂನರ ಮೇಲೂ ಹೊರಡಿಸಬೇಕು.

ಇವುಗಳ ನಂತರ ನೂರಾರು ಪ್ರಾಕೃತ ಶಾಸನಗಳು ಕರ್ನಾಟಕದಲ್ಲಿ ದೊರೆಯುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ –

ಕ್ರಿ.ಶ. ೧೫೦ರ ಮಳವಳ್ಳಿ – ಚುಟುವಂಶದ ಸಾತಕಣ್ಣಿ ಶಾಸನ (E.C. VII. ಶಿಕಾರಿಪುರ ೨೬೩)

ಕ್ರಿ.ಶ. ೨೫೦ ರ ಮಳವಳ್ಳಿ – ಕದಂಬ ವಂಶದ ಶಿವಸ್ಕಂಧವರ್ಮನ ಶಾಸನ (E.C. VII. ಶಿಕಾರಿಪುರ ೨೬೪)

ಮ್ಯಾಕದೋನಿ – ಶಾತವಾಹನ ಸಿರಿಪುಳುವಾಯಿಯ ಶಾಸನ (E.I. Xiv. ಪುಟ : ೧೫೨)

ಬನವಾಸಿ – ಶಾತಶಿವಖಡ ನಾಗಸಿರಿ ಶಾಸನ (S.I.I. XX ನಂ. ೧)

ಚಂದ್ರವಳ್ಳಿ – ಕದಂಬ ಮಯೂರ ವರ್ಮನ ಶಾಸನ (M.A.R. ೧೯೨೯, ಪು : ೫೦)

ಹಿಡೇಹಡಗಲಿ – ಪಲ್ಲವ ಶಿವಸ್ಕಂದ ವರ್ಮನ ಶಾಸನ

ಇನ್ನೂ ಅನೇಕ ಶಾಸನಗಳು ದುರೆಯುತ್ತವೆ.

ಅಶೋಕನ ಶಾಸನಗಳಲ್ಲಿ ಒಬ್ಬನೇ ವ್ಯಕ್ತಿ, ಒಂದೇ ಧರ್ಮ, ಒಂದೇ ಉದ್ದೇಶವಿದ್ದರೆ ಮಿಕ್ಕ ಪ್ರಾಕೃತ ಶಾಸನಗಳಲ್ಲಿ ಹಲವು ವ್ಯಕ್ತಿಗಳು, ಹಲವು ಧರ್ಮ, ಹಲವು ಉದ್ದೇಶಗಳು ಕಂಡುಬರುವುದು, ಕರ್ನಾಟಕದ ಶಾಸನ ವಾಹಿನಿ ಕವಲೊಡೆಯುತ್ತಿರುವುದರ ನಿದರ್ಶನ. ಒಟ್ಟಿನಲ್ಲಿ ಕನ್ನಡ ಬರವಣಿಗೆಯ ದಾರಿ ತೋರಿಸಿದ ಕನ್ನಡ ಶಬ್ದ ಭಂಡಾರ ವಿಸ್ತಾರವಾಗಲು ದಾರಿ ಮಾಡಿಕೊಟ್ಟ ಮೊದಲ ಉಪಕಾರ ಈ ಪ್ರಾಕೃತ ಬರವಣಿಗೆ ಮತ್ತು ಪ್ರಾಕೃತ ಭಾಷೆಗಳಿಗೆ ಸಲ್ಲುತ್ತವೆ ಎಂದು ಡಾ॥ ಎಂ.ಎಂ. ಕಲ್ಬುರ್ಗಿಯವರು ಸರಿಯಾಗಿಯೇ ಗುರ್ತಿಸಿದ್ದಾರೆ.[೩]

ಶಾಸನೋಕ್ತ ಪ್ರಾಚೀನ ಕನ್ನಡ ಶಬ್ದಗಳು

ಶಾಸನೋಕ್ತ ಪ್ರಾಚೀನ ಕನ್ನಡ ಶಬ್ದಗಳು ಎಂಬ ಅಧ್ಯಯನದಲ್ಲಿ ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದವರೆಗೆ ಸಿಗುವ ಶಾಸನಗಳಲ್ಲಿ ಬಳಕೆಯಾಗಿರುವ ಕನ್ನಡ ಶಬ್ದಗಳನ್ನು ಚರ್ಚಿಸಲಾಗುತ್ತದೆ. ಈ ೭೫೦ ವರ್ಷಗಳ ಅವಧಿಯಲ್ಲಿ ನೂರಾರು ಶಾಸನಗಳು ದೊರೆತ್ತಿದ್ದು ಅವೆಲ್ಲ ಹೆಚ್ಚಾಗಿ ಪ್ರಾಕೃತ ಶಾಸನಗಳಾಗಿವೆ ಎನ್ನಬಹುದು. ಮೊದಲಿಗೆ, ಕ್ರಿ.ಪೂ. ೩ನೆಯ ಶತಮಾನದ ಶಾಸನಗಳೆಂದರೆ ಅಶೋಕನ ಶಾಸನಗಳೇ ಆಗಿವೆ. ಕರ್ನಾಟಕದಲ್ಲಿ ಇದುವರೆವಿಗೂ ಅಶೋಕನ ೧೪ ಶಾಸನಗಳು ದೊರೆತಿವೆ. ಇವುಗಳು ಬ್ರಾಹ್ಮೀಲಿಪಿಯಲ್ಲಿದ್ದು ಭಾಷೆಯು ಪ್ರಾಕೃತವಾಗಿವೆ. ಅಶೋಕನ ಶಾಸನಗಳ ಕಾಲವು ಸುಮಾರು ಕ್ರಿ.ಪೂ. ೨೫೯–೫೮ ಆಗಿವೆ. ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೪]

೩ ಡಾ॥ ಎಂ.ಎಂ. ಕಲಬುರ್ಗಿ: ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ. ಪು : ೧೨೯

೪ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ – ೦೧, ಪು : ೨೬

ಈ ಕೆಲವು ಶಾಸನಗಳಲ್ಲಿ ಕನ್ನಡ ಶಬ್ದಗಳು ಬಳಕೆಯಾಗಿರುವುದು ಕಂಡು ಬರುತ್ತವೆ. ಮೊದಲಿಗೆ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಶಾಸನದ ಮೊದಲನೆಯ ಸಾಲಿನಲ್ಲಿ 'ಇಸಿಲ' ಎಂಬ ಕನ್ನಡ ಪದ ದೊರೆತಿರುವುದನ್ನು ವಿದ್ವಾಂಸರು ಗುರ್ತಿಸಿದ್ದಾರೆ. 'ಇಸಿಲ' ಎಂಬ ಸ್ಥಳನಾಮವು 'ಎಸಿಲ್' ಎಂಬ ಕನ್ನಡ ಪದದ ಪ್ರಾಕೃತ ರೂಪವೆಂಬುದಾಗಿಯೂ ೩ನೇ ಶತಮಾನದ ಕಾಲದಲ್ಲಿ ಕನ್ನಡ ಭಾಷೆ ಅಸ್ತಿತ್ವದಲ್ಲಿತ್ತು ಎಂದು ಡಿ.ಎಲ್. ನರಸಿಂಹಚಾರ್ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧]

'ಇಸಿಲ' ಎಂಬುದು ಒಂದು ಸ್ಥಳನಾಮವಾಗಿದ್ದು 'ಇಸಿಲ' ಎಂದರೆ ಕೋಟೆ ಅಥವಾ ಕೋಟೆಯಿಂದ ಬಳಸಿದ ಊರು ಆಗಿದೆ. ಈ ಶಾಸನದಲ್ಲಿ ಕರ್ನಾಟಕದ ಪಟ್ಟಣದಲ್ಲಿ ಒಬ್ಬ ಮಹಾಮಾತ್ರನಿದ್ದಾನೆಂಬ ಸಂಗತಿ ತಿಳಿಯುತ್ತದೆ.

ಅದೇ ರೀತಿ ಕ್ರಿ.ಪೂ. ೩ನೆಯ ಶತಮಾನದ ಮಸ್ಕಿ ಶಾಸನದಲ್ಲಿ 'ಸುವರ್ಣಗಿರಿ' ಯೆಂಬ ಕರ್ನಾಟಕ ನಗರದ ಉಲ್ಲೇಖವಿದ್ದು ಅಲ್ಲಿ ಒಬ್ಬ ಮೌರ್ಯರ ಮಹಾಮಾತ್ರನೆಂಬ ಅಧಿಕಾರಿಯಿದ್ದುದ್ದು ತಿಳಿಯುತ್ತದೆ ಅಶೋಕನ ಶಾಸನಗಳಿಗೂ ಮೊದಲು ಮೆಹೆಂಜೊದಾರೊ – ಹರಪ್ಪಗಳಲ್ಲಿ ದೊರೆತ ಮುದ್ರೆಗಳಲ್ಲಿನ (ಸು. ೫೦೦೦) ಬರಹ ಕನ್ನಡ ಎಂದು ಡಾ ॥ ಹೆಉಸರ ಮಾತಿಗೂ ವಿಶೇಷ ಬೆಂಬಲ ದೊರಕಿಲ್ಲ.[೫]

ಇದಾದ ನಂತರ ಶಾತವಾಹನರು (ಕ್ರಿ.ಪೂ. ೨೦೦ ಅಥವಾ ಕ್ರಿ.ಪೂ. ೩೦)ರ ನಡುವಣ ಕಾಲದಲ್ಲಿ ಹಲವಾರು ಶಾಸನಗಳನ್ನು ಹಾಕಿಸಿದರು. ಇವರ ಕೆಲವು ಶಾಸನಗಳಲ್ಲಿ ನಾಣ್ಯಗಳಲ್ಲಿ ಕನ್ನಡ ಶಬ್ದಗಳು ಬಳಕೆಯಾಗಿರುವುದನ್ನು ಕಾಣಬಹುದು. 'ಪುಲುಮಾಯಿ', 'ವಿಲಿವಾಯಕುರ' ಎಂಬ ಪದಗಳನ್ನು ತೆಲುಗು ಅಥವಾ ಕನ್ನಡವಾಗಿರಬಹುದು ಎಂದು ವಿದ್ವಾಂಸರು ಗುರ್ತಿಸಿದ್ದಾರೆ.[೬] (ಡಿ.ಎಲ್.ಎನ್. Religion and society of karnataka under the satavahanas, ಪು: ೧೦೯–೧೦).

ವಿನ್ಸೆಂಟ್ ಎ ಸ್ಮಿತ್ ಅವರು 'ವಿಲಿವಾಯಕುರ' ಎಂಬ ಶಬ್ದ ಪ್ರಶಸ್ತಿ ಸೂಚಕವೇ ಅಂಕಿತನಾಮವೇ ಎಂಬ ಸಂದೇಹವನ್ನೆತ್ತುವಾಗ ಆ ಶಬ್ದ ಪ್ರಾಯಶಃ ತೆಲುಗು ಅಥವಾ ಕನ್ನಡ ಭಾಷೆಗೆ ಸೇರಿರಬಹುದಾದ್ದು ಎಂದು ಪ್ರಾಸಂಗಿಕವಾಗಿ ಭಾವಿಸುತ್ತಾರೆ. ಇದು ಇವರ ಊಹೆ. ಸ್ಮಿತ್ ಅವರ ಸಲಹೆಯ ಅಂಶ ವಿದ್ವಾಂಸರ ಪರಿಶೀಲನೆಗೆ ಅಷ್ಟು ಒಳಗಾಗಿರುವಂತೆ ತೋರುವುದಿಲ್ಲ. ಪ್ರಿನ್ಸ್‌ಲಸ್ಕಿ ಅವರು 'ಉಳಿವಯ' ಎಂದರೆ 'ಕುದುರೆ', ಮತ್ತು 'ಕುರ' ಎಂದರೆ 'ಪಟ್ಟಣ' ಎಂಬರ್ಥವನ್ನು ಸೂಚಿಸುತ್ತಾರೆ. ಗೋವಿಂದ ಪೈ ಅವರು 'ಕುರ' ಎಂದರೆ 'ಕುಮಾರ' ಎಂಬ ಸಂಸ್ಕೃತ ಪದದ ಪ್ರಾಕೃತ ರೂಪವೆಂದು (ಕುಮಾರ – ಕುಮರ – ಕುಂವರ – ಕುಂಅರ – ಕುಂರ – ಕುರ) ಎಂದು ಅಭಿಪ್ರಾಯಪಟ್ಟಿದ್ದಾರೆ.

ಗೋಪಾಲಾಚಾರಿಯವರು 'ಪುಳುಮಾಯಿ' ಎಂಬ ಪದ ಪುಳುಮಾವಿ, ಪುಳುಮಾ ಈ ಎಂಬ ರೂಪಗಳಲ್ಲಿಯೂ ಉಚ್ಚರಿಸಲ್ಪಡುತ್ತದೆಯೆಂದೂ ವಿಳಿವಾಯಕುರ, ಅಡವಿ, ಎಹುವುಳ ಈ ಕೆಲವು ಶಬ್ದಗಳಂತೆ ದ್ರಾವಿಡ ಮೂಲದ್ದು ಎಂದು ತೋರುವುದೆಂದು ಭಾವಿಸಿದ್ದಾರೆ. ಆದರೆ ಈ ಕೆಲವು ಶಬ್ದಗಳ ಅರ್ಥ

---

೫ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ–೦೧, ಪು : ೨೫–೨೬

೬ ಡಿ.ಎಲ್.ಎನ್. Religion and society of Karnataka under the satavahanas, P- 109

೧ ಡಾ. ಡಿ.ಎಲ್. ನರಸಿಂಹಾಚಾರ್ : ಕನ.ಡ ಗಂಥ ಸಂಪಾದನೆ. ಪುಟ – ೧

ನಿಷ್ಪತ್ತಿಗಳು ಕನ್ನಡ ಭಾಷೆಯವು ಎಂದು ಖಚಿತ ಪಡಿಸುವುದು ಸುಲಭವಲ್ಲ (ಕ.ಸಾ.ಚ. ೦೨, ಮೈ.ವಿ.ವಿ. ಪು : ೪೬೦) ಒಟ್ಟಿನಲ್ಲಿ ಪುಲುಮಾಯಿ, ವಿಲಿವಾಯಕುರ ಎಂಬ ಶಬ್ದಗಳು ಕನ್ನಡ ಪದಗಳು ಎಂದು ಸಂಪೂರ್ಣವಾಗಿ ಖಚಿತಪಡಿಸಲು ಸಾಧ್ಯವಾಗಿಲ್ಲ. ಈ ಶಬ್ದಗಳ ಬಗ್ಗೆ ಇನ್ನು ಚರ್ಚೆ ನಡೆಯಬೇಕಿದೆ.

ಗೋವಿಂದ ಪೈಗಳು ಕ್ರಿ.ಶ. ೧ನೆಯ ಶತಮಾನದ ಹಿಂದಿನಿಂದಲೂ ಕನ್ನಡ ಶಾಸನಗಳು ದೊರೆಯುತ್ತವೆ ಎಂದು ಹೇಳಿ ಕೆಲವು ಶಾಸನಗಳನ್ನು ಆಧಾರವಾಗಿ ಕೊಡುತ್ತಾರೆ.

ನಂಜನಗೂಡು ತಾಲ್ಲೂಕಿನ ಗಟ್ಟವಾಡಿ ಗ್ರಾಮದ ಶಿಲಾಶಾಸನವು ಕ್ರಿ.ಶ. ೧೯೨-೧೯೩ ರ ಕಾಲದ್ದೆಂದು ಎಂ. ಗೋವಿಂದ ಪೈಗಳು ಗುರ್ತಿಸಿದ್ದಾರೆ.[2] ಈ ಶಾಸನದಲ್ಲಿ ಕೆಲವು ಮಂದಿ ಹಳ್ಳಿಗರು ಒಂದು ಕೆರೆಯನ್ನು ಕಟ್ಟಿಸಿ ಆ ಬಗ್ಗೆ ಸಾಕ್ಷಿಗಳನ್ನಿಟ್ಟು ಕೊರೆಸಿದ ಶಿಲಾಶಾಸನ. ಇದರಲ್ಲಿ ಕೆಲವು ಕನ್ನಡ ಪದಗಳಿವೆಂದು ಅವರು ಊಹಿಸಿದ್ದಾರೆ.

ಶಾಸನ ಪಾಠ ಈ ರೀತಿಯಿದೆ

ಸ್ವಸ್ತಿ ಶ್ರೀ ಸಕವರಿಷ
ನೂಱಪನ್ನೊದ್ದನೆಯ ೧೧೧
ಆಂಗ್ಯಿರಸಂವತ್ಸರ
ದ ಎಱೆಹವೆಮ್ಮಡಿ
ಯ ರಾಜ್ಯದನ್ನು ಗೊ
ಟ್ಟೆ ವಾಡಿಯ ಗಾಮಣ್ದು
ಗಳಂ ಸೆಲಾಂಭ್ಯೆಯರುಂ
ಆನೆಯರು ಕುಡಿಗಾಮು
ಣ್ದುಗೆಯ್ವೆವದಕ್ಕ ಇವರ ಕೊ
ಡಗ್ಯೆ ಸೆಲಭ್ಯೆಯರ ಕೊಡಗ್ಯೆ
ಎಱೆಹಂಬಾಳಿಂ ಆನೆಯರ ಕೊ
ಡಗ್ಯೆ ಕೊಡೆಕೆ ಎಡೆ ನಟ್ಟ ಕ್ಲಂಕ
ಟ್ರಿಸಿದಾ ಕೆಱೆ ತಗಡುರ ಕುರು
ಳ ಕೊರಗುಣ್ಣೆ ಎಡತಲೆಯ
ಕೊತದ ಪುಳ್ಳ ಗನುಂ
ಕೆನ್ನೆಟ್ಟಿಯ ಬದ್ರ
ಷೆ ಐಯನೂಂ ನಿಟ್ಟರೆ
ಯ ಬೋರೆ ಅಚ್ಚಗಣ್ದನುಂನ
ಲ್ಲೆಯವರು ಸಕ್ಷಿ ಉರ ಎ
ಪ್ಪಿದಿಂಬರು ಸಕ್ಷಿತ
ಣಾಪತ್ತಿ ಬೆಯಳಜೀಯ
ನುರ ಊರಪುರವಂನು
ಸಕ್ಷಿ ಕಮ್ಮಱ ಸತಿ
ಗಂ ಬಡಗಿ ಮರಾಚರಿ ಜ
ಲನಾಗಂ ಕೆರಗಾ ಬಿಟಿಗನು
ಮಿಸಗರ ಭೀಮನುಂ ಹೊಲೆ
ಅಷ ವಂ ಇವರ ಸಕ್ಷಿ
ಯಂಗ ..... ಭರಾ .... ತಪ್ಪೆ
...... ದೇವರ ಬಿದಿರಿನಿಯ .....
...... ಇದ್ದುರ್ ಕೆಡ ......

೭ ಡಾ॥ ಬಾ.ರಾ. ಗೋಪಾಲ್. (ಸಂ) E.C. ಸಂಪುಟ ೩, ಶಾಸನ ಸಂಖ್ಯೆ ೧೯

ಕ್ರಿ.ಶ. ೨೬೭ರ ಗಂಗರಾಜ ಹರಿವರ್ಮನೆಂದು ಹೇಳಲಾದ ನಂಜನಗೂಡಿನ ತಾಮ್ರಶಾಸನದಲ್ಲಿ[೮] ಕೆಲವು ಕನ್ನಡ ಪದಗಳಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ E.C. ಪರಿಷ್ಕೃತ ಆವೃತ್ತಿಯ ಸಂಪಾದಕರು ಈ ಶಾಸನವನ್ನು ಲಿಪಿದೃಷ್ಟಿಯಿಂದ ಕ್ರಿ.ಶ. ೯ನೇ ಶತಮಾನದೆಂದು ಗುರ್ತಿಸಿದ್ದಾರೆ.[೯]

ಕ್ರಿ.ಶ. ೩೪೯ರ ತಲಕಾಡಿನ ಅರಸು ತಡಂಗಾಲ ॥ನೇ ಮಾದವನ ತಾಗರ್ತಿಯ ತಾಮ್ರಶಾಸನ[೧೦] ಮುಂತಾದ ಶಾಸನಗಳು ಕನ್ನಡ ಶಾಸನಗಳಾಗಿದ್ದು ಈ ಶಾಸನಗಳಲ್ಲಿ ಕನ್ನಡ ಶಬ್ದಗಳಿವೆಯೆಂದು ಅವರು ವಾದಿಸುತ್ತಾರೆ. ಆದರೆ ಇವರ ಅಭಿಪ್ರಾಯವನ್ನು ಎಲ್ಲ ವಿದ್ವಾಂಸರು ಒಪ್ಪಿಕೊಂಡಿಲ್ಲ.

ಡಾ॥ ಎಂ.ಎಂ. ಕಲಬುರ್ಗಿಯವರು ಅಶೋಕನ ಶಾಸನದ ನಂತರ ಕ್ರಿ.ಶ. ೪೫೦ರ ವರೆಗೆ ಕೆಲವು ಶಾಸನಗಳಲ್ಲಿ ಕನ್ನಡ ಪದಗಳಿವೆ ಎಂಬುದನ್ನು ತಮ್ಮ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಕೃತಿಯಲ್ಲಿ ಹೇಳಿದ್ದಾರೆ. ಅವರು ಕೊಡುವ ಕೆಲವು ಶಾಸನಗಳೆಂದರೆ

೧. ಬೆಳಗಾಂ ಜಿಲ್ಲೆಯ ವಡಗಾಂವ ಮಾಧವಪುರ ಕ್ರಿ.ಶ. ೧ನೇ ಶತಮಾನದ ಶಾಸನ.[೧೧]

೨. ಮ್ಯಾಕದೋನಿ – ಶಾತವಾಹನ ಸಿರಿಪುಳುಮಾಯಿಯ ಕ್ರಿ.ಶ. ೧೩೫ರ ಶಾಸನ.[೧೨]

೩. ಮಳವಳಿ – ಚುಟುವಂಶದ ಸಾತಕಣ್ಣಿಯ ಕ್ರಿ.ಶ. ೧೫೦ರ ಶಾಸನ.[೧೩]

೪. ಬನವಾಸಿ ಚುಟುವಂಶದ ಸಾತಕಣ್ಣಿ ಕ್ರಿ.ಶ. ೩೦೦ರ ಶಾಸನ.[೧೪]

೫. ಹಿರೇಹಡಗಲಿ, ಪಲ್ಲವ ಶಿವಸ್ಕಂದ ವರ್ಮನ ಕ್ರಿ.ಶ. ೩೦೦ರ ತಾಮ್ರ ಶಾಸನ.[೧೫]

೬. ಚಂದ್ರವಳ್ಳಿ – ಕದಂಬ ಮಯೂರವರ್ಮನ ಕ್ರಿ.ಶ. ಸು : ೩೨೫ರ ಶಾಸನ.[೧೬]

೭. ಮಳವಳ್ಳಿ – ಕದಂಬ ಶಿವಸ್ಕಂದ ವರ್ಮನ ಕ್ರಿ.ಶ. ೨೫೦ರ ಶಾಸನ.[೧೭]

ಈ ಮೇಲಿನ ಶಾಸನಗಳಲ್ಲಿ ಸಿರಿ, ದೇಶಕಾಲ, ಶಾಸನ, ತಪ ಮೊದಲಾದ ತದ್ಭವ, ಸಮ ಸಂಸ್ಕೃತ ಪದಗಳನ್ನು ಗಮನಿಸಿದಂತೆ ಪ್ರಾಕೃತದ ಪ್ರವೇಶ, ಸಂಸ್ಕೃತಮಯ ಕನ್ನಡಗಳ ಮಧ್ಯೆ ಸಂದಿ ವಿಗ್ರಹಿ ಪರಿಣಮಿಸಿತೆಂದೂ ಸಂಸ್ಕೃತವನ್ನು ಕನ್ನಡಕ್ಕೆ ಹಿತವಾಗಿ ಬಳಸಿಕೊಳ್ಳುವ ಒಂದು ಅನುಕೂವನ್ನು ತೆರೆದು ಕೊಟ್ಟಿತೆಂದು ಸ್ಪಷ್ಟವಾಗುತ್ತದೆಂದು ಕಲಬುರ್ಗಿ ಹೇಳುತ್ತಾರೆ. ಈ ದೃಷ್ಟಿಯಿಂದ ಮೇಲಿನ ಶಾಸನಗಳಲ್ಲಿ ಕೆಲವು ಕಡೆ ಕನ್ನಡ ಪದಗಳು ಬಳಕೆಯಾಗಿರುವುದನ್ನು ಕಾಣಬಹುದು.

ರಂ.ಶ್ರೀ. ಮುಗಳಿಯವರು[೧೮] ಕ್ರಿ.ಶ. ೨, ೩, ೪ ನೆಯ ಶತಮಾನಗಳಲ್ಲಿ ನಿರ್ದಿಷ್ಟ ಶಕವನ್ನು ಹೇಳಿದ ೩–೪ ಕನ್ನಡದ ಶಾಸನಗಳು ಇವೆ. ಅವುಗಳೆಂದರೆ

---

೮ ಡಾ॥ ಬಾ.ರಾ. ಗೋಪಾಲ್ (ಸಂ) **E.C.03** ನಂಜನಗೂಡು, ಶಾಸನ ಸಂಖ್ಯೆ : ೧೨೨

೯ ಡಾ॥ ಬಾ.ರಾ. ಗೋಪಾಲ್ (ಸಂ) **E.C.05** ನಂಜನಗೂಡು ೩೨೫ ಪು : ೩೭೯

೧೦ ಬಿ.ಎಲ್.ರೈಸ್ (ಸಂ). **E.C.VII** ಶಿಕಾರಿಪುರ ಶಾ.ಸ. ೫೨

೧೧ **R.S.** ಪಂಚಮುಖಿ: ಮುಂಬೈ ರಾಜ್ಯದಲ್ಲಿ ಕನ್ನಡ ಸಂಶೋಧನೆ ೧೯೫೩ ಪು : ೨–೩

೧೨ ಬಿ.ಎಲ್.ರೈಸ್ (ಸಂ). **E.I. XVI,** ಪುಟ : ೧೫೩

೧೩ **E.C.VII** ಶಿಕಾರಿಪುರ

೧೪ **SII X.X.** ನಂ – ೧.

೧೫ **E.I.I.** ಪು : ೨

೧೬ **M.A.R.** ೧೯೨೯ ಪು : ೫೦.

೧೭ **E.C.VII** ಶಿಕಾರಿಪುರ

೧೮ ರಂ.ಶ್ರೀ ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ ಪು : ೬

ಕ್ರಿ.ಶ. ೧೮೯ N.J. ನಂ. ೧೯೯ ಶಾಸನ

ಕ್ರಿ.ಶ. ೨೬೬ N.J. ನಂ. ೧೨೨ ರ ಶಾಸನ

ಕ್ರಿ.ಶ. ೩೫೭ E.C. VII ಶಿಕಾರಿಪುರ ಶಾ.ಸ. ೫೨ ಶಾಸನ

ಆದರೆ ಈ ಶಾಸನಗಳನ್ನು ವಿದ್ವಾಂಸರು ಕೃತಕವೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಮೇಲಿನ ಶಾಸನಗಳನ್ನು ಗೋವಿಂದ ಪೈಗಳು ಮೊದಲೇ ಗುರ್ತಿಸಿದ್ದರು ಆದರೆ ಶಾಸನ ಕಾಲವನ್ನು ಭಿನ್ನವಾಗಿ ಹೇಳಿದ್ದಾರೆ.

ರಂ.ಶ್ರೀ. ಮುಗಳಿಯವರು "ಹಲ್ಮಿಡಿ ಶಾಸನದಿಂದ ೧,೨ನೆಯ ಶತಮಾನದ ಹಿಂದಿನಿಂದ ಕನ್ನಡವು ಗ್ರಾಂಥಿಕ ಭಾಷೆಯಾಗಿ ಬೆಳೆಯತೊಡಗಿತು ಎಂದು ಹೇಳಬಹುದೇ ಹೊರತು ಬಹಳ ಹಿಂದಿನಿಂದ ಮೊದಲಾಗಿ ಚೆನ್ನಾಗಿ ಬಲಿತ ಭಾಷೆಯಾಗಿದೆ ಎನ್ನುವಂತಿಲ್ಲ"[೧೯] ಎಂದಿದ್ದಾರೆ.

ಮೇಲಿನ ಎಲ್ಲಾ ವಿದ್ವಾಂಸರು ಕೆಲವು ಶಾಸನಗಳಲ್ಲಿ ಕನ್ನಡ ಶಬ್ದಗಳನ್ನು ಗುರ್ತಿಸಿದ್ದರೂ ಯಾರು ಒಮ್ಮತದಿಂದ ಒಪ್ಪಿಕೊಂಡಿಲ್ಲ. ಆದ್ದರಿಂದ ಶಾಸನೋಕ್ತ ಪ್ರಾಚೀನ ಕನ್ನಡ ಶಬ್ದಗಳನ್ನು ಗುರ್ತಿಸುವ ಕಾರ್ಯವು ನಡೆಯಬೇಕಿದೆ.

ಡಾ॥ ಎಂ.ಜಿ. ಮಂಜುನಾಥ ಅವರು ಇತ್ತೀಚಿಗೆ ಶ್ರವಣಬೆಳಗೊಳದ ಗುಣಭೂಷಿತ ಮುನಿಯ ಶಾಸನದಲ್ಲಿ ೬ ಕನ್ನಡ ಪದಗಳನ್ನು ಗುರ್ತಿಸಿದ್ದಾರೆ. ಈ ಶಾಸನದ ಲಿಪಿಯು ಶಾತವಾಹನರ ಬ್ರಾಹ್ಮೀ ಲಿಪಿಯ ಪ್ರಭಾವವನ್ನು ಹೊಂದಿರುವ ಆದಿ ಕದಂಬರ ಲಿಪಿ ಎಂದು ಗುರ್ತಿಸಿದ್ದಾರೆ. ಈ ಶಾಸನದಲ್ಲಿ ಬಳಕೆಯಾಗಿರುವ 'ಸ' ಕಾರಗಳಲ್ಲಿ ಆರು ಕಡೆ ಹಾಗೂ 'ನ' ಕಾರಗಳಲ್ಲಿ ತ್ರಿಕೋನಾಕಾರದ ತಲೆ ಕಟ್ಟುಗಳನ್ನು ಸ್ಪಷ್ಟವಾಗಿ ಗುರ್ತಿಸಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಶಾಸನವು ಕ್ರಿ.ಶ. ೪೦೦ರ ಕಾಲಘಟ್ಟದೆಂದು ಗುರ್ತಿಸಿದ್ದಾರೆ. ಅವರು ಗುರ್ತಿಸಿರುವ ಕನ್ನಡ ಪದಗಳೆಂದರೆ ಏರಿಸಿದ್ದ ತಾನು, ಮೇಲೆ, ಕೆಳಗೆ, ಕೇಳಿ, ನೆಲ.

ಈ ರೀತಿಯಾಗಿ ಹಲ್ಮಿಡಿ ಶಾಸನ ಪೂರ್ವದಲ್ಲಿ ಅಂದರೆ ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೪೫೦ರ ವರೆಗಿನ ಶಾಸನಗಳಲ್ಲಿ ಕನ್ನಡ ಶಬ್ದಗಳು ಬಳಕೆಯಾಗಿರುವುದನ್ನು ಗಮನಿಸಬಹುದು. ಆದರೆ ವಿದ್ವಾಂಸರಲ್ಲಿ ಕೆಲವು ಶಾಸನಗಳ ಕಾಲದ ಬಗ್ಗೆ ಒಮ್ಮತ ಅಭಿಪ್ರಾಯವಿಲ್ಲದ ಕಾರಣ ಈ ವಿಷಯವು ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

---

೧೯ ರಂ.ಶ್ರೀ. ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ ಪುಟ : ೦೯

ಪ್ರಾಚೀನ ಕನ್ನಡ ಶಾಸನಗಳು

ಹಲ್ಮಿಡಿ ಶಾಸನ

ಕನ್ನಡ ಲಿಪಿ ಹಾಗೂ ಕನ್ನಡ ಭಾಷೆಯಲ್ಲಿ ಬರೆಯಲಾಗಿರುವ ಅತ್ಯಂತ ಪ್ರಾಚೀನ ಉಪಲಬ್ದ ಶಾಸನವೆಂಬ ಹೊಗಳಿಕೆಯನ್ನು ಹೊಂದಿರುವ ಹಲ್ಮಿಡಿ ಶಾಸನವು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತಿದೆ. ಈ ಗ್ರಾಮವು ಯಗಚಿ ನದಿಯ ದಡದಲ್ಲಿದೆ. ಹಲ್ಮಿಡಿ ಗ್ರಾಮದ ವೀರಭದ್ರ ದೇವಾಲಯದ ಬಳಿ ದೊರೆತ ಈ ಶಾಸವನ್ನು ಕ್ರಿ.ಶ. ೧೯೩೬ರಲ್ಲಿ ಡಾ॥ ಎಂ.ಎಚ್. ಕೃಷ್ಣ ಅವರು ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್‌ನಲ್ಲಿ (M.A.R) ಮೊಟ್ಟ ಮೊದಲಿಗೆ ಪ್ರಕಟಿಸಿದರು.

ಈ ಶಾಸನವು ಪ್ರಕಟವಾಗುವವರೆಗೆ ಬಾದಾಮಿ ಚಾಲುಕ್ಯರ (ಕ್ರಿ.ಶ. ೫೭೮) ಕೀರ್ತಿವರ್ಮ ಮತ್ತು ಮಂಗಳೇಶನ ಬಾದಾಮಿ ಶಾಸನಗಳು ಕನ್ನಡದ ಅತ್ಯಂತ ಪ್ರಾಚೀನ ಶಾಸನಗಳೆಂಬ ಕೀರ್ತಿಯನ್ನು ಹೊಂದಿದ್ದವು. ಕ್ರಿ.ಶ. ೧೯೩೯ರಲ್ಲಿ ಎಂ.ಎಂ. ಕೃಷ್ಣ ಅವರೇ ಮತ್ತೊಮ್ಮೆ ಹಲ್ಮಿಡಿ ಶಾಸನವನ್ನು ವಿವರವಾದ ಪೀಠಿಕೆಯೊಡನೆ ಪ್ರಬುದ್ಧ ಕರ್ನಾಟಕದ ೨೦ನೇ ಸಂಪುಟದ ೩ನೇ ಸಂಚಿಕೆಯಲ್ಲಿ ಪ್ರಕಟಿಸಿದರು.

ಈ ಶಾಸನವು ಎರಡೂವರೆ ಅಡಿ ಎತ್ತರ, ಒಂದು ಅಡಿ ಅಗಲ, ಒಂಬತ್ತು ಅಂಗುಲ ಮಂದವಾಗಿರುವ ಬಳಪದ ಕಲ್ಲಿನ (ಕ್ಲೋರೈಟಿಕ್ ಶಿಸ್ಟ್) ಸ್ತಂಭದ ಮೇಲೆ ಬರೆಯಲ್ಪಟ್ಟಿದೆ. ಸ್ಥಂಭದ ಮೇಲ್ಭಾಗದಲ್ಲಿ ಹತ್ತು ಅಂಗುಲಗಳಷ್ಟು ಎತ್ತರದ ಕಮಾನಿನಾಕಾರವ ರಚನೆಯಿದೆ. ಅದರ ಮಧ್ಯಭಾಗದಲ್ಲಿ ಶ್ರೀ ಮನ್ಮಹಾವಿಷ್ಣುವಿನ ಸುದರ್ಶನ ಚಕ್ರವನ್ನು ಹೋಲುವ ಚಕ್ರದ ರೇಖಾಚಿತ್ರವಿದೆ.

ಪ್ರಸ್ತುತ ಶಾಸನದಲ್ಲಿ ಒಟ್ಟು ೧೬ ಸಾಲುಗಳಿವೆ. ಮೊದಲನೆಯ ಸಾಲನ್ನು ಶಾಸನ ಸ್ತಂಭದ ಮೇಲ್ಭಾಗದಲ್ಲಿರುವ ಚಕ್ರದ ಸುತ್ತಲೂ ಕೊರೆಯಲಾಗಿದೆ. ನಂತರದ ಹದಿನಾಲ್ಕು ಸಾಲುಗಳನ್ನು ಸ್ತಂಭದ ಮುಂಭಾಗದಲ್ಲಿ ಕಂಡರಿಸಲಾಗಿದೆ. ೧೬ನೆಯ ಸಾಲನ್ನು ಸ್ತಂಭದ ಬಲಭಾಗದಲ್ಲಿ ಮೇಲಿನಿಂದ ಕೆಳಕ್ಕೆ ಕೊರೆಯಲಾಗಿದೆ.

ಹಲ್ಮಿಡಿ ಶಾಸನದ ಪಾಠ

೧. ಜಯತಿ ಶ್ರೀ ಪರಿಷ್ವಙ್ಗಶ್ಶಾರ್ಙ್ಗ[ಮಾನ್ಯತಿ]ರಚ್ಯುತಃ ದಾನವಾ–
ಕ್ಷೋಯರ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ

೨. ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ[ನಾ] ಅರಿ ಕ

೩. ಕುಸ್ಥಭಟ್ಟೋರನಾಳೆ ನರಿದಾವಿ[ಳೆ] ನಾಡುಳ್ ಮೃಗೇಶನಾ–

೪. ಗೇನ್ದ್ರಾಭೀಳರ್ಭ್ಬಟಹರಪ್ಪೋಗ್ ಶ್ರೀಮೃಗೇಶನಾಗಾಹ್ವಯ

೫. ರಿರ್ವ್ವರಾ ಬಟರಿಕುಲಾಮಲವ್ಯೋಮತಾರಧಿನಾಥನ್ನಳಪ–

೬. ಗಣಪಶುಪತಿ ಮಾದಕ್ಷಿಣಾಪಥಬಹುಶತಹವನಾ-

೭. ಹವದು[ಳ್] ಪಶುಪ್ರದಾನ ಶೌರ್ಯ್ಯೋದ್ಯಮಭರಿತೋ[ನ್ಸಾದಾನ]ಪ-

೮. ಶುಪತಿಯೆನ್ದು ಪೊಗೞೆಪ್ಪೊಟ್ಟಣ ಪಶುಪತಿ

೯. ನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲಯ

೧೦. ಸುತನ್ಗೆ ಸೇನ್ದ್ರಕಬಣೋಭಯದೇಶದಾ ವೀರಾಪುರುಷ ಸಮಕ್ಷ-

೧೧. ದೆ ಕೇಕಯಪ ಲ್ಲವರಂ ಕಾದೆಱುದು ಪೆತ್ತಜಯನಾ ವಿಜ

೧೨. ಅರಸನ್ಗೆ ಬಾಳ್ಗಟ್ಟು ಪಲ್ಮಿಡಿಉಂ ಮೂೞೆವಳ್ಳಿಉಂ ಕೊ-

೧೩. ಟ್ಟಾರ್ ಬಟಾರಿಕುಲದೊನಳುಕದಮ್ಬನ್ಕಳ್ದೋನ್ ಮಹಾಪಾತಕನ್

೧೪. ಇರ್ವ್ವರುಂ ಸಟ್ಬಙ್ಗದರ್ ವಿಜಾರಸರುಂ ಪಲ್ಮಡಿಗೆ ಕುಱು

೧೫. ಮ್ಬಿಡಿಮಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕಮ್ ಸ್ವಸ್ತಿ

(ಇದೇ ಕಲ್ಲಿನ ಎಡಪಕ್ಕದಲ್ಲಿ ಬರೆದಿರುವುದು)

೧೬. ಭಟ್ಟರ್ಗ್ಗೀಗಟ್ಟಿ ಒಡ್ಡಲಿ ಆಪತ್ತೊನ್ದಿವಿಟ್ಟಾರಕರ

ಶಾಸನದ ಪ್ರಾರಂಭದಲ್ಲಿ ಸಂಸ್ಕೃತ ಭಾಷೆಯ ಅನುಷ್ಟುಪ್ ಛಂದಸ್ಸಿನ ಸುಂದರವಾದ ಒಂದು ಶ್ಲೋಕವಿದೆ. ನಂತರದ ಭಾಗದಲ್ಲಿ ಸಂಸ್ಕೃತ ಭೂಯಿಷ್ಟವಾದ ಪೂರ್ವದ ಹಳಗನ್ನಡ ಭಾಷೆಯ ಬರಹವಿದೆ. ಕದಂಬರ ಪೇಟಿಕಾ ಶಿರಸ್ಸಿನ ಲಿಪಿಯಲ್ಲಿ ರಚಿತವಾದ ಈ ಶಾಸನದಲ್ಲಿ ಒಟ್ಟು ೨೫ ಕನ್ನಡ ಶಬ್ದಗಳಿವೆಯೆಂದು ಡಾ॥ ಎಂ.ಎಚ್. ಕೃಷ್ಣ ಅಭಿಪ್ರಾಯ ಪಟ್ಟಿದ್ದಾರೆ.

ಶಾಸನದ ಸಾರಾಂಶ : ಲಕ್ಷ್ಮಿಯಿಂದ ಆಲಂಗಿತನಾದ, ಶಾರ್ಙ್ಗವೆಂಬ ಧನಸ್ಸನ್ನು ಹೆದೆಯೇರಿಸಿ ಹಿಡಿದಿರುವವನೂ, ಅಚ್ಯುತನೂ, ಅಸುರರ ಕಣ್ಣುಗಳಿಗೆ ಪ್ರಳಯ ಕಾಲದ ಅಗ್ನಿಯಾಗಿರುವವನೂ, ಸತ್ಪುರುಷರಿಗೆ ಒಳ್ಳೆಯ ದರ್ಶನವನ್ನು ನೀಡುವ ಸುದರ್ಶನ ಚಕ್ರವನ್ನು ಹಿಡಿದು ಕಾಪಾಡುವವನಿಗೆ ಜಯವಾಗಲಿ.

ನಮಸ್ಕಾರ ಶ್ರೀಮತ್ ಕದಂಬ ವಂಶದವನೂ, ತ್ಯಾಗ ಸಂಪನ್ನನೂ, ಕಳಭರ ಶತ್ರುಘ್ನ ಆಗಿರುವ ಕಕುಸ್ಥ ಭಟ್ಟಾರನು ಆಳುತ್ತಿರಲು, ನರಿದಾ ಎಳೆನಾಡಿನಲ್ಲಿ ಮಹಾ ಪರಾಕ್ರಮಿಗಳಾದ ಮೃಗರಾಜಸಿಂಹ ಮತ್ತು ಸರ್ಪರಾಜ ವಾಸುಕಿಯರಂತೆ (ಮೃಗರಾಜ – ಪಶುಪತಿ, ಈಶ್ವರ, ನಾಗ, ಆದಿಶೇಷ, ನಾಗ) ಶೂರರಾಗಿರುವ ಮೃಗೇಶ ಮತ್ತು ನಾಗ ಎಂಬ ಹೆಸರಿನ ಇಬ್ಬರು ಅಧಿಕಾರಿಗಳಿದ್ದರು.

ಬಟರಿಕುಲವೆಂಬ ನಿರ್ಮಲವಾದ ಆಕಾಶದಲ್ಲಿ ನಕ್ಷತ್ರಗಳ ಅಧಿಪತಿಯಾದ ಚಂದ್ರನಂತೆ, ಆಳುಪ ವಂಶದ ಅಧಿಪತಿಯಾದ ಪ್ರಸಿದ್ಧವಾದ ದಕ್ಷಿಣಾಪಥದಲ್ಲಿ ಹಲವು ನೂರು ಯಜ್ಞಗಳಲ್ಲಿ ಪಶುಗಳನ್ನು (ದಾನ

ಮಾಡುವ) ಬಲಿಕೊಡುವ (ಯುದ್ಧಗಳೆಂಬ ಯಜ್ಞಗಳಲ್ಲಿ ಶತ್ರುಗಳೆಂಬ ಪಶುಗಳನ್ನು ಬಲಿಕೊಡುವ) ಪರಾಕ್ರಮವಾದ ಕೆಲಸದಲ್ಲಿ ತೊಡಗಿದವನೂ ಆದ ದಾನ ಪಶುಪತಿ ಎಂದು ಹೊಗಳಲ್ಪಟ್ಟ ಪಶುಪತಿ ಎಂಬುವನ ಆಜ್ಞೆಯಂತೆ ಎಲ್ಲ ಬಟರಿಂಪ ಪ್ರಿಯಪುತ್ರನಾದ ವಿಜ ಅರಸನು ಕೇಕೆಯ ಪಲ್ಲಟರೊಂದಿಗೆ ಯುದ್ಧ ಮಾಡಿ ಜಯಶಾಲಿಯಾಗಲು ಆತನಿಗೆ ಸೇಂದ್ರಕ ಮತ್ತು ಬಾಣ ಈ ಎರಡೂ ದೇಶಗಳ ವೀರಪುರುಷರ ಎದುರಿನಲ್ಲಿ ಪಲ್ಮಡಿಯನ್ನೂ ಮೂಟಿವಳ್ಳಿಯನ್ನೂ ಬಾಳ್ಗಪ್ಪಾಗಿ ಕೊಟ್ಟನು. ಬಟರಿ ಕುಲದವನಾದ ಅಳಕದಂಬನು ಈ ಶಾಸನವನ್ನು ಹಾಕಿಸಿದನು. ಈ ದಾನವನ್ನು ಅಪಹರಿಸಿದವನು ಮಹಾಪಾತಕಿ, ಈ ಇಬ್ಬರು ಸಜ್ಜಿಜ್ಗದವರೂ ವಿಜ ಅರಸರೂ ಪಲ್ಮಡಿಗೆ ಕುಱುಮ್ಬಿಡಿಯನ್ನು ಬಿಟ್ಟರು (ರದ್ದು ಪಡಿಸಿದರು) ಅದನ್ನು ಹಾಳು ಮಾಡುವವನಿಗೆ ಮಹಾ ಪಾತಕವು ಬರುತ್ತದೆ. ಮಂಗಳವಾಗಲಿ.

ಭಟ್ಟರಿಗೆ (ವೇದ ಪಾರಂಗತರಾದ ಬ್ರಾಹ್ಮಣರಿಗೆ) ಈ ಗದ್ದೆಯ ಉತ್ಪನ್ನದಲ್ಲಿ ಹತ್ತನೆಯ ಒಂದು ಭಾಗವನ್ನು ತೆರಿಗೆಯಿಲ್ಲದೆ ಬಿಟ್ಟರು.

ಈ ಶಾಸನವು ಕದಂಬ ವಂಶದ ಕಾಕುಸ್ಥವರ್ಮನ ಆಳ್ವಿಕೆಯ ಕಾಲದಲ್ಲಿ ರಚಿತವಾಗಿದೆ. ಪ್ರಸ್ತುತ ಶಾಸನೋಕ್ತವಾದ ಮೃಗೇಶವರ್ಮನು ಕಾಕುಸ್ಥವರ್ಮನ ಮಗನಾದ ಶಾಂತಿವರ್ಮನಮಗ. ಇವನು ಪಲ್ಲವರೊಡನೆ ನಡೆದ ಹಲವು ಯುದ್ಧಗಳಲ್ಲಿ ಭಾಗವಹಿಸಿ ಪಲ್ಲವರ ಮಂಜಿನ ಸಮೂಹಕ್ಕೆ ಸೂರ್ಯನಂತಿದ್ದ ಎಂದು ಹಲವು ಶಾಸನಗಳಲ್ಲಿ ದಾಖಲಾಗಿದೆ. ಆದರೆ ಹಲ್ಮಿಡಿ ಶಾಸನದಲ್ಲಿನ ನಾಗನ ಬಗ್ಗೆ ಹೆಚ್ಚಿನ ವಿವರಗಳು ಉಪಲಬ್ಧವಿಲ್ಲ. ಬಟರಿ ಕುಲದ ಅಳಪಗಣ ಪಶುಪತಿಯು ಕಾಕುಸ್ಥವರ್ಮನ ಅಳಿಯ. ಇವನು ದಕ್ಷಿಣಾಪಥದಲ್ಲಿ ಅನೇಕ ಯುದ್ಧಗಳನ್ನು ಮಾಡಿದನೆಂದು ತಾಳಗುಂದದ ಪ್ರಣವೇಶ್ವರ ದೇವಸ್ಥಾನದ ಬಾಗಿಲು ವಾಡದ ಶಾಸನದಲ್ಲಿದೆ.

ಹಲ್ಮಡಿ ಶಾಸನದಲ್ಲಿ ತಿಳಿಸಿರುವ ದಾನಕ್ಕೆ ಆಜ್ಞೆ ಮಾಡಿರುವವನು ಆಳುಕದಂಬ. ಈತನು ಕದಂಬರ ಕಾಕುಸ್ಥವರ್ಮನ ಮಗಳಾದ ಲಕ್ಷ್ಮಿ ಹಾಗೂ ಅಳುಪರ ಅರಸನಾದ ಪಶುಪತಿಯರ ಪುತ್ರ.

ಪಲ್ಮಡಿ ಮತ್ತು ಮೂಟಿವಳ್ಳಿಗಳನ್ನು ಬಾಳ್ಗಟ್ಚಾಗಿ ಪಡೆದ ವಿಜ ಅರಸನನ್ನು ಕುರಿತಂತೆಯೂ ಹೆಚ್ಚಿನ ವಿವರಗಳು ಉಪಲಬ್ದವಿಲ್ಲ. ಈತನನ್ನು ಎಲ್ಲ ಭಟರಿಯ ಪ್ರೇಮಾಲಯ ಸುತ ಎಂದು ಶಾಸನದಲ್ಲಿ ಕರೆಯಲಾಗಿದೆ. ಅಂದರೆ ವಿಜಅರಸನು ಎಲ್ಲ ಭಟರಿಯ ಪ್ರೀತಿ ಪಾತ್ರನಾದ ಮಗ ಎಂಬುದಾಗಿ ಹೇಳಬಹುದಾದರೂ ಡಾ॥ ಎಂ.ಎಂ. ಕಲಬುರ್ಗಿಯವರು ಪ್ರೇಮಾಲಯ ಸುತನ್ ಎಂಬ ಶಬ್ದಕ್ಕೆ ಮನೆಮಗ ಅಂದರೆ ವೇಳೆವಾಳಿ ಎಂಬ ಅರ್ಥವನ್ನು ನೀಡಿದ್ದಾರೆ. ಸಾಮಾನ್ಯವಾಗಿ ಕದಂಬರು ತಮಿಳುನಾಡಿನ ಪಲ್ಲವರ ಮೇಲೆ ಮಾಡಿದ ಯುದ್ಧಗಳಲ್ಲಿ ಜಯಿಸಿದುದು ತೀರಾ ಅಪರೂಪ ಅಂತಹ ಒಂದು ಜಯದ ಉಲ್ಲೇಖ ಈ ಹಲ್ಮಿಡಿ ಶಾಸನದಲ್ಲಿದೆ.

ಹಲ್ಮಿಡಿಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಆದರೆ ಈ ಶಾಸನದಲ್ಲಿ ಕಾಕುತ್ಥವರ್ಮನು ಆಳ್ವಿಕೆಯಲ್ಲಿದ್ದ ಕಾಲದಲ್ಲಿ ರಚನೆಯಾಗಿರುವುದರಿಂದ ಈ ಶಾಸನದ ಕಾಲವನ್ನು ಕ್ರಿ.ಶ. ೪೫೦ ಎಂದು ಹೇಳಬಹುದು. ಲಿಪಿಶಾಸ್ತ್ರದ ದೃಷ್ಟಿಯಿಂದಲೂ ಈ ಶಾಸನದ ಕಾಲವನ್ನು ಕ್ರಿ.ಶ. ಸು. ೪೫೦ರಂದು ಹೇಳಬಹುದು. ಕ್ರಿ.ಶ. ಸು. ೪೫೦ರ ತಾಳಗುಂದದ ಸ್ಥಂಭಶಾಸನ ಹಲಸಿಯ ತಾಮ್ರ ಪಟಗಳು ವಸ್ತಾರೆಯ ಅಣಜಿಯ ತಾಮ್ರ ಶಾಸನ ಮುಂತಾದ ಶಾಸನಗಳಲ್ಲಿನ ಲಿಪಿಯನ್ನು ಹಲ್ಮಿಡಿ ಶಾಸನದ ಲಿಪಿಯು ಹೋಲುತ್ತದೆ.

ಶಾಸನ ತಜ್ಞರಾದ ಶ್ರೀ ಎನ್. ಲಕ್ಷ್ಮೀನಾರಾಯಣರಾಯರು ಹಲ್ಮಿಡಿ ಶಾಸನವನ್ನು ಲಿಪಿಯ ಆಧಾರದ ಮೇಲೆ ಬಾದಾಮಿಯ ಮಂಗಳೇಶನ ಕ್ರಿ.ಶ. ೫೭೮ ರ ಶಾಸನಕ್ಕಿಂತಲೂ ಈಚಿನದೆಂದು ಅಭಿಪ್ರಾಯಪಟ್ಟಿದ್ದಾರೆ. ಗೋವಿಂದ ಪೈ ಅವರು ಕ್ರಿ.ಶ. ೩ನೆಯ ಶತಮಾನವೆಂದು ಗ್ರಹಿಸಿದ್ದಾರೆ. ಡಾ॥ ಜಿ.ಎಸ್. ಗಾಯಿಯವರು ೬ನೆಯ ಶತಮಾನದ ಕೊನೆಯ ಕಾಲದೆಂದು ಊಹಿಸಿದರೂ ಸಹ ಡಾ॥ ಎಂ.ಎಚ್. ಕೃಷ್ಣ ಅವರು ನಿರ್ಧರಿಸಿರುವ ಕ್ರಿ.ಶ. ೪೫೦ ಎಂಬ ಕಾಲವೇ ಹಲ್ಮಿಡಿಶಾಸನದ ಕಾಲವೆಂದು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಹಲ್ಮಿಡಿಶಾಸನದಲ್ಲಿ ಬಳಕೆಯಾಗಿರುವ ಭಾಷೆ ಸಂಸ್ಕೃತ ಭೂಯಿಷ್ಟವಾದ ಹಳಗನ್ನಡ ಗದ್ಯ. ಈ ಶಾಸನದ ಪಾಠವನ್ನು ಮಹಾ ಪಂಡಿತರೊಬ್ಬರು ರಚಿಸಿರುವಂತೆ ಕಾಣುತ್ತದೆ. ಪೂರ್ವದ ಹಳಗನ್ನಡ ಭಾಷೆಯ ಲಕ್ಷಣಗಳೆಂದು ವಿದ್ವಾಂಸರು ಗುರ್ತಿಸಿರುವ ಎಲ್ಲ ಲಕ್ಷಣಗಳು ಹಲ್ಮಿಡಿ ಶಾಸನದಲ್ಲಿ ಕಂಡುಬರುತ್ತದೆ.

ಕದಂಬಪನ್, ಕಲಭೋರನ್, ತ್ಯಾಗಸಂಪನ್ನನ್ ಮುಂತಾದ ಶಬ್ದಗಳಲ್ಲಿ ವ್ಯಂಜನ 'ನ' ಕಾರಾಂತವುಳ್ಳ ಪ್ರಥಮಾ ವಿಭಕ್ತಿಯ ರೂಪವಿದೆ. ನಾಮಧೇಯೆನಾ, ಭಟಾರಿಯಾ, ದೇಶದಾ ಮುಂತಾದ ಶಬ್ದಗಳಲ್ಲಿ ಷಷ್ಠಿ ವಿಭಕ್ತಿಯ ಪ್ರತ್ಯಯದಲ್ಲಿ ದೀರ್ಘವಿದೆ. 'ಆ' ಹಳಗನ್ನಡದಲ್ಲಿ ಇದು 'ಅ' ಹ್ರಸ್ವವಾಗಿರುತ್ತದೆ. ಆಹವದುಳ್, ನಾಡುಳ್ ಎಂಬಲ್ಲಿ ಸಪ್ತಮೀ ವಿಭಕ್ತಿಯ ಪ್ರತ್ಯಯ 'ಉಳ್' ಎಂದಿದೆ. ಇದು ಹಳಗನ್ನಡದಲ್ಲಿ 'ಒಳ್' ಎಂದು ಕಂಡು ಬರುತ್ತದೆ. 'ಪೆತ್ತಜಯನ್' ಎಂಬ ಅರಿಸಮಾಸ ಶಬ್ದವು ಕನ್ನಡ ಮತ್ತು ಸಂಸ್ಕೃತ ಶಬ್ದಗಳ ಮುಕ್ತವಾದ ಬಳಕೆಗೆ ಸಾಕ್ಷಿಯಾಗಿದೆ.

ಕೊಟ್ಟಾರ್, ವಿಟ್ಟಾರ್ ಎಂಬಲ್ಲಿ 'ಅರ್' ಪ್ರತ್ಯಯದ ಬದಲಿಗೆ 'ಆರ್' ಎಂಬ ಪ್ರಯೋಗವಿದೆ. ಕಳ್ದೋನ್, ಭಟ್ಟೋರನ್, ಅಪ್ಪೋರ್ ಎಂಬ ಶಬ್ದಗಳಲ್ಲಿ 'ಓ' ದಿಂದ ಕೂಡಿದ ರೂಪವಿದೆ. ಹಳಗನ್ನಡದಲ್ಲಿ ಇದು 'ಅ' ಕಾರವಾಗಿ ಕಂಡು ಬರುತ್ತದೆ. 'ಮೊಗಟಿಪೊಟ್ಟಣ' ಎಂಬಲ್ಲಿ ಕರ್ಮಣಿ ಪ್ರಯೋಗವಿದೆ. ಪಲ್ಮಡಿಉಂ, ಮೂಟಿವಳುಉಂ ಎಂಬ ಶಬ್ದಗಳಲ್ಲಿ ಸಮುಚ್ಚಯಾರ್ಥಕ ಪ್ರತ್ಯಯಗಳಿವೆ. ಸುತನ್ಗೆ, ಅರಸನ್ಗೆ, ಸೇನ್ದ್ರಕ, ಪಶುಪತಿಯೆನ್ದು, ಅಟಿವೊನ್ಗೆ ಮುಂತಾದೆಡೆಗಳಲ್ಲಿ ಅನುಸ್ವಾರಕ್ಕೆ ಬದಲಾಗಿ 'ನ' ಕಾರವನ್ನು ಅನುನಾಸಿಕವನ್ನು ಬಳಸಲಾಗಿದೆ. ಪಲ್ಲವರಂ ಎಂಬಲ್ಲಿ ಮಾತ್ರ ಅನುಸ್ವಾರವನ್ನು ಬಳಸಲಾಗಿದೆ. ಇಜೆದು

ಎಂಬ ಶಬ್ದಕ್ಕೆ 'ಎಜೆದು' ಎಂಬ ರೂಪವನ್ನು ಬಳಸಲಾಗಿದೆ. ಈ ಶಾಸನದ ಭಾಷಾ ಪ್ರಯೋಗವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ವಿದ್ವಾಂಸರು ಈ ಕೆಳಗಿನ ನಿರ್ಧಾರಕ್ಕೆ ಬಂದಿದ್ದಾರೆ.

ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಸಂಬಂಧವು ಕ್ರಿ.ಶ. ಸು. ೪೦೦ರ ವೇಳೆಗಾಗಲೇ ಆರಂಭವಾಗಿತ್ತು. ಸಂಸ್ಕೃತ ಸಮಾಸ ಪದಗಳಿಂದ ಕೂಡಿದ ಬಿಗಿಯಾದ ಕನ್ನಡ ೫ನೆಯ ಶತಮಾನದ ವೇಳೆಗೆ ಬಳಕೆಗೆ ಬಂದಿತ್ತು. ಜನಸಾಮಾನ್ಯರಲ್ಲಿ ಅಚ್ಚಗನ್ನಡ ಹಾಗೂ ಪಂಡಿತರಲ್ಲಿ ಸಂಸ್ಕೃತ ಮಾನ್ಯತೆ ಪಡೆದಿತ್ತು. ಡಾ॥ ಎಂ. ಚಿದಾನಂದಮೂರ್ತಿಯವರು 'ಈ ಶಾಸನದ ಭಾಷೆಯನ್ನು ನೋಡಿದರೆ ಕನ್ನಡವನ್ನು ಬರಹಕ್ಕೆ ಪಳಗಿಸುತ್ತಿದ್ದ ಪ್ರಯತ್ನಗಳಲ್ಲಿ ಈ ಶಾಸನವೂ ಒಂದು' ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಪ್ರಸ್ತುತ ಹಲ್ಮಿಡಿ ಶಾಸನದ ಆಧಾರದಿಂದ ಕ್ರಿ.ಶ. ೫ನೆಯ ಶತಮಾನಕ್ಕೆ ಒಂದೆರಡು ಶತಮಾನಗಳ ಹಿಂದಿನಿಂದ ಕನ್ನಡ ಗ್ರಾಂಥಿಕ ಭಾಷೆಯಾಗಿ ಬಳಕೆಯಾಗುತ್ತಿತ್ತು, ಬೆಳಯುತ್ತಿತ್ತು ಎಂಬುದಾಗಿ ಊಹಿಸಬಹುದು.

ಒಟ್ಟಾರೆ ಹಲ್ಮಿಡಿ ಶಾಸನವು ಕನ್ನಡ ಭಾಷೆ ಹಾಗೂ ಲಿಪಿಯಲ್ಲಿ ರಚಿತವಾಗಿದ್ದು ಉಪಲಬ್ದವಾದ ಅತ್ಯಂತ ಪ್ರಾಚೀನ ಶಾಸನವೆಂದು ಹೇಳಬಹುದು ಇದು ಕನ್ನಡ ಭಾಷೆಯ ಪ್ರಾಚೀನತೆಯನ್ನು ನಿರ್ಧರಿಸುವ ಅತ್ಯಂತ ಪ್ರಮುಖವಾದ ದಾಖಲೆಯಾಗಿದೆ.

ಈ ಶಾಸನದ ಪ್ರಾರಂಭದಲ್ಲಿ ರೂಢಿಯ ಮಂಗಳ ವಾಚನ ಶಬ್ದಗಳನ್ನು ಬಳಸದೆ ವಿಷ್ಣುವನ್ನು ಸ್ತುತಿಸುವ ಸುಂದರವಾದ ಪ್ರಾರ್ಥನಾ ಶ್ಲೋಕವೊಂದನ್ನು ಬಳಸಲಾಗಿದೆ.

ಬಾಳ್ಗಟ್ಟು : ಈ ಶಾಸನದಲ್ಲಿ ಬರುವ 'ಬಾಳ್ಗಟ್ಟು' ಎಂಬ ಪದವು ಯುದ್ಧದಲ್ಲಿ ಹೋರಾಡಿ ಗೆದ್ದು ಬಂದ ವೀರನ ಖಡ್ಗವನ್ನು ತೊಳೆಯುವ ಸಮಾರಂಭವನ್ನು ಸೂಚಿಸುತ್ತದೆ. ಇದು ಯುದ್ಧದಲ್ಲಿ ಹೋರಾಡಿ ಗೆದ್ದು ಬಂದವರಿಗೆ ಸಲ್ಲುವ ವಿಶಿಷ್ಟ ರೀತಿಯ ಮರ್ಯಾದೆ. ಬಾಳಂ + ಕಟ್ಟು ಎಂದರೆ ಕತ್ತಿಯನ್ನು ತೊಳೆ ಎಂದರ್ಥ ಸಂಸ್ಕೃತ ಶಾಸನಗಳಲ್ಲಿ ಇದನ್ನು 'ಖಡ್ಗದಾರಂಭಸ್' ಎಂದು ಕರೆಯಲಾಗಿದೆ. ಯುದ್ಧದ ನಂತರ ಆಯುಧಗಳನ್ನು ತೊಳೆದು ಪೂಜಿಸುವ ಪದ್ಧತಿ ೧೦ನೇ ಶತಮಾನದಲ್ಲಿಯೂ ಅಸ್ತಿತ್ವದಲ್ಲಿತ್ತು. ಭೀಮನು ದುರ್ಯೋಧನನನ್ನು ಕೊಂದ ಮೇಲೆ ಆತನ ತೋಳುಗಳನ್ನು ತೀರ್ಥ ಜಲದಿಂದ ತೊಳೆದು ಪೂಜಿಸುವ ವಿಷಯವು ರನ್ನನ ಗದಾಯುದ್ಧದಲ್ಲಿ ಚಿತ್ರಿತವಾಗಿದೆ. ಯುದ್ಧದಲ್ಲಿ ಹೋರಾಡಿ ಮಡಿದ ವೀರನ ಬಂಧುಗಳಿಗೆ ಕೊಟ್ಟ ದಾನಗಳನ್ನು ಸಹ ಬಾಳ್ಗಟ್ಟು ಎಂಬುದಾಗಿ ಕರೆದಿರುವುದನ್ನು ಕೆಲವು ಶಾಸನಗಳಲ್ಲಿ ಗಮನಿಸಬಹುದು.

ಸಟ್ಬಿಂಗದರ್ : ಈ ಶಾಸನದಲ್ಲಿ ಬರುವ 'ಸಟ್ಬಿಂಗದರ್' ಈ ಶಬ್ದಕ್ಕೆ ಎಂ.ಎಚ್. ಕೃಷ್ಣ ಅವರು 'ಸವಳಂಗ ಎಂಬ ಊರಿನವರು' ಎಂದು ಅರ್ಥವನ್ನು ಕೊಟ್ಟಿದ್ದಾರೆ. ಚಿದಾನಂದ ಮೂರ್ತಿಯವರು 'ಷಡ್ಭಾಗ' ಎಂಬ ಶಬ್ದದಿಂದ 'ಸಳ್ಬಂಗ' ಶಬ್ದದ ನಿಷ್ಪತ್ತಿಯನ್ನು ಸೂಚಿಸಿದ್ದಾರೆ. ಅವರ ಪ್ರಕಾರ '೧/೬ ಭಾಗ ತೆರಿಗೆಯನ್ನು ವಸೂಲಿಮಾಡುವ ಅಧಿಕಾರಿಗಳಿಗೆ ಸಳ್ಬಂಗದವರು' ಡಾ॥ ಎಸ್. ನಾಗರಾಜು ಅವರ ಪ್ರಕಾರ 'ಸರ್ಭಂಗ್' ಎಂದರೆ ದಳಪತಿ, ಸೇನಾಪತಿ ಎಂಬ ಶಬ್ದದಿಂದ ನಿಷ್ಪನ್ನವಾಗಿದೆ. ಶರಭಂಗ, ಸರಭಂಗ,

ಮುಂತಾದ ಶಬ್ದಗಳ ಉಲ್ಲೇಖವೂ ಶಾಸನಗಳಲ್ಲಿವೆ. ಡಾ॥ ಕೆ.ವಿ. ರಮೇಶ್ ಅವರು 'ಸವಳಂಗ' ಎಂಬ ಊರಿನವರು ಎಂಬುದೇ ಸರಿ ಎಂದಿದ್ದಾರೆ. 'ಸಳ್ಬಂಗ' ಶಬ್ದ ಸವೆದು 'ಸವಗ' ಎಂದಾದರೆ ಸವಗ ಎಂದರೆ 'ರಕ್ಷಣೆಯ ಕವಚ' ಎಂದರ್ಥ. ಸಳ್ಬಂಗದರ್ ಎಂದರೆ ಪಡೆಯ ಮುಂಚೂಣಿಯಲ್ಲಿದ್ದು ಸೇನಾಪಡೆಯನ್ನು ರಕ್ಷಿಸುವ ಸೈನಿಕರು' ಎಂಬುದಾಗಿ ಶ್ರೀ ಎಸ್. ಹನುಮಂತರಾಯರು ಅಭಿಪ್ರಾಯ ಪಟ್ಟಿದ್ದಾರೆ.

ಕುಱುಮ್ಬಿಡಿ

ಈ ಶಾಸನದಲ್ಲಿ ಬರುವ ಮತ್ತೊಂದು ಶಬ್ದವಾದ 'ಕುಱುಮ್ಬಿಡಿ' ಎಂದರೆ ಯಾವುದೋ ಒಂದು ಸಣ್ಣ ತೆರಿಗೆ ಇರಬಹುದೆಂದು ಎಂ.ಎಚ್. ಕೃಷ್ಣ ಅಭಿಪ್ರಾಯ ಪಟ್ಟಿದ್ದಾರೆ. ಬಹುಶಃ ನೀರಿನ ತೆರಿಗೆ ಇರಬಹುದೆಂದು ಡಾ॥ ದೇವರ ಕೊಂಡಾರೆಡ್ಡಿ ಅಭಿಪ್ರಾಯ ಪಟ್ಟಿದ್ದಾರೆ. 'ಕುಱುಂಬ' ಎಂದರೆ ದುರ್ಗದ (ಕೋಟೆಯ) ರಕ್ಷಕ ಎಂದರ್ಥ. ಆದ್ದರಿಂದ ಕುಱುಂಬಿಡಿ ಎಂದರೆ ಕೋಟೆಯ ರಕ್ಷಕರಿಗೆ ಸಲ್ಲಬೇಕಾದ ತೆರಿಗೆ ಎಂಬುದಾಗಿ ಡಾ॥ ಎಂ.ಜಿ. ಮಂಜುನಾಥ ಅಭಿಪ್ರಾಯ ಪಟ್ಟಿದ್ದಾರೆ.

ಶ್ರವಣಬೆಳಗೊಳದ ಗುಣಭೂಷಿತ ಮುನಿಯ ಶಾಸನ

ಶ್ರವಣಬೆಳಗೊಳದ ಚಿಕ್ಕ ಬೆಟ್ಟದಲ್ಲಿರುವ 'ಗುಣಭೂಷಿತ' ಮುನಿಯ ನಿಸಿದಿ ಶಾಸನವನ್ನು ಬಿ.ಎಲ್. ರೈಸ್ ಅವರು ೧೮೯೮ರಲ್ಲಿ ಪ್ರಕಟಿಸಿ ಇದರ ಕಾಲವನ್ನು ಕ್ರಿ.ಶ. ೭೦೦ ಎಂದು ಗುರ್ತಿಸಿ. ಅದೇ ರೀತಿ ಆರ್. ನರಸಿಂಹಚಾರ್ ಮತ್ತು ಬಾ.ರಾ. ಗೋಪಾಲ್ ಅವರೂ ಕೂಡ ಇದರ ಕಾಲವನ್ನು ಕ್ರಿ.ಶ. ೭೦೦ ಎಂದು ಗುರ್ತಿಸಿದ್ದಾರೆ. ಆದರೆ ಇತ್ತೀಚೆಗೆ ಡಾ॥ ಎಂ.ಜಿ. ಮಂಜುನಾಥ ಅವರು ತಮ್ಮ ಸಂಶೋಧನೆಯಿಂದ ಈ ಶಾಸನದ ಕಾಲವನ್ನು ಕ್ರಿ.ಶ. ೪೦೦ ಎಂದು ಗುರ್ತಿಸಿದ್ದಾರೆ. ಹಾಗಾಗಿ ಈ ಶಾಸನವು ಹಲ್ಮಿಡಿ ಶಾಸನಕ್ಕಿಂತಲೂ ಹಿಂದಿನ ಶಾಸನವೆಂದೂ ಕನ್ನಡದ ಅತ್ಯಂತ ಪ್ರಾಚೀನ ಉಪಲಬ್ದ ಶಾಸನವೆಂದೂ ಅಭಿಪ್ರಾಯಪಟ್ಟಿದ್ದಾರೆ.

ಈ ಶಾಸನದ ಪಾಠ ಈ ರೀತಿಯಿದೆ.

ಸ್ವಸ್ತಿಶ್ರೀ ಗುಣಭೂಷಿತಮಾದಿ ಉಳಾಡಗ್ದೇರಿಸಿದಾನಿಸಿದಿಗೆ
ಸದ್ದಮ್ಮ ಗುರು ಸಂತಾನಾನ್ ಸಂದ್ವಿಗ ಗಣತಾನಯಾನ್
ಗಿರಿತಲದಾ ಮೇಲತಿ ಕೆಳಗೆ ಮಾನದಾನ್ ತೀರದಾಣಮಾ ಕೇಳಿಯಾ ನೆಲದಿ ಮಾನದಾನ್
ಸದ್ದಮ್ಮದಾ ಗೇಟಿಸಸಾನದಿಪತಾತ್[೨೦]

೨೦. ಡಾ॥ ಬಾ.ರಾ. ಗೋಪಾಲ್ ಸಂ. E.C. 2. ಶಾ.ಸ. ೩೨ (೨೯) ಪು. ೧೩

ಶಾಸನ ಸಾರಾಂಶ

ಸ್ವಸ್ತಿಶ್ರೀ ಗುಣಭೂಷಿತನ ನಿಸಿದಿಯನ್ನು ಉಳಾಡನು ನಿರ್ಮಿಸಿದನು. ಆತನು (ಉಳಾಡನು) ಒಳ್ಳೆಯ ಧರ್ಮ ಮತ್ತು ಗುರುವಿನ ಶಿಷ್ಯ. ಸಂಧ್ವಿಗ ಗಣಕ್ಕೆ ಸೇರಿದವನು. ಬೆಟ್ಟದ ಮೇಲಿನ ಸ್ಥಳದಲ್ಲಿ ಒಳ್ಳೆಯ ಧರ್ಮವನ್ನು ಕೇಳಿ (ಈತನು ನಿಸಿದಿಯನ್ನು ನಿರ್ಮಿಸಿದನು). ಅವನು ಆ ಬೆಟ್ಟದ ತಪ್ಪಲಿನ (ಇಂದಿನ ಶ್ರವಣಬೆಳಗೊಳದ ಬೆಟ್ಟದ ತಪ್ಪಲಿನ) ಪ್ರದೇಶದ ಅಧಿಪತಿಯಾಗಿದ್ದನು.

ಮೇಲಿನ ಸಾರಾಂಶವನ್ನು ಈ ರೀತಿ ಸಂಗ್ರಹಿಸಬಹುದು. ಶ್ರವಣಬೆಳಗೊಳ ಬೆಟ್ಟದ ತಪ್ಪಲಿನ ಪ್ರದೇಶದ ರಾಜನಾದ ಉಳಾಡನು ಒಳ್ಳೆಯ ಧರ್ಮ ಹಾಗೂ ಒಳ್ಳೆಯ ಗುರುವಿನ ಶಿಷ್ಯನಾಗಿದ್ದನು. ಅವನು ಬೆಟ್ಟದ ಮೇಲೆ ಗುಣ ಭೂಷಿತನ ನಿಸಿದಿಯನ್ನು ನಿರ್ಮಿಸಿದನು.

ಪ್ರಸ್ತುತ ಶಾಸನದಲ್ಲಿ ಕೇವಲ ಆರು ಕನ್ನಡ ಶಬ್ದಗಳು ಮಾತ್ರ ಇವೆ. 'ದಮ್ಮ' ಎಂಬ ಪ್ರಾಕೃತ ಶಬ್ದ ಎರಡು ಸಾರಿ ಬಳಕೆಯಾಗಿದೆ. ಸಸಾನು, ನಿಸಿದಿ ಎಂಬ ಶಬ್ದಗಳು ಸೇರಿ ಒಟ್ಟು ೪ ಪ್ರಾಕೃತ ಶಬ್ದಗಳು ಬಳಕೆಯಾಗಿವೆ. ಈ ಶಾಸನದ ಲಿಪಿಯು ಶಾತವಾಹನರ ಬ್ರಾಹ್ಮೀ ಲಿಪಿಯ ಪ್ರಭಾವವನ್ನು ಹೊಂದಿರುವ ಆದಿ ಕದಂಬರ ಲಿಪಿ ಎಂದು ಗುರುತಿಸಲಾಗಿದೆ. ಈ ಶಾಸನದಲ್ಲಿ ಬಳಕೆಯಾಗಿರುವ 'ಸ' ಕಾರಗಳಲ್ಲಿ ಆರು ಕಡೆ ಹಾಗೂ 'ನ' ಕಾರಗಳಲ್ಲಿ ತ್ರಿಕೋನಾಕಾರದ ತಲೆ ಕಟ್ಟುಗಳನ್ನು ಸ್ಪಷ್ಟವಾಗಿ ಗುರ್ತಿಸಬಹುದು ಎಂದು ಯಾರು? ಅಭಿಪ್ರಾಯ ಪಟ್ಟಿದ್ದಾರೆ.[೨೦]

ಆದರೆ ಡಾ॥ ಎಂ.ಜಿ.ಮಂಜುನಾಥ ಅವರ ಅಭಿಪ್ರಾಯವು ಸಾರ್ವತ್ರಿಕವಾಗಿ ಮಾನ್ಯವಾಗಿಲ್ಲವಾದರೂ ಈ ವಿಷಯದ ಬಗ್ಗೆ ವಿರೋಧ ವ್ಯಕ್ತಪಡಿಸುವ ಲೇಖನಗಳೂ ಇದುವರೆಗೂ ಪ್ರಕಟವಾಗಿಲ್ಲದಿರುವುದು ಗಮನಾರ್ಹ.

ಮಂಗಳೇಶನ ಶಾಸನ

ಹಲ್ಮಿಡಿ ಶಾಸನವು ದೊರಕುವವರೆಗೂ ಬಾದಾಮಿ ಚಾಲುಕ್ಯ ದೊರೆ ಮಂಗಳೇಶನ ಬಾದಾಮಿಯ ೩ನೇ ಗುಹಾಂತರ ದೇವಾಲಯದ ಹೊರಭಿತ್ತಿಯಲ್ಲಿರುವ ಶಾಸನವನ್ನು ಕನ್ನಡದ ಅತ್ಯಂತ ಪ್ರಾಚೀನ ಶಾಸನವೆಂದು ಪರಿಗಣಿಸಲಾಗುತ್ತಿತ್ತು. ಕ್ರಿ.ಶ. ೫೭೮ರ ಈ ಶಾಸನವು ಕೇವಲ ನಾಲ್ಕು ಸಾಲುಗಳನ್ನು ಹೊಂದಿದೆ.

ಸ್ವಸ್ತಿಶ್ರೀಮತ್ ಪೃಥಿವೀ ವಲ್ಲಭ ಮಂಗಲೀಸನಾ
ಕಲ್ಮನೆಗೆ ಇತ್ತೊದು ಲಂಜಿಗೇಸರಂ ದೇವರ್ಕೆ ಘೂನಿಜುವ
ಮಾಲಕಾರರ್ಗ್ಗೆ ಅರ್ದ್ಧವಿಸದಿ ಇತೊದಾನಟಿವೊನ್
ಪಞ್ಚಮಹಾ ಪಾತಕನಕುಂ ಏವಿನೆಯಾ ನರಕದಾಪುಟು ಅಕುಮ್[೨೧]

---

೨೦ ಡಾ॥ ಎಂ.ಜಿ. ಮಂಜುನಾಥ : ವೈಶಿಷ್ಟ್ಯ ಪೂರ್ಣ ಕನ್ನಡ ಶಾಸನಗಳು. ಪು. ೧೨. (**I.A.** ಸಂ **X**; ಪು: ೫೯-೬೦)

೨೧. **I.A.** ಸಂ. **0X.** ಪು. ೫೯

ಬಾದಾಮಿ ಚಾಲುಕ್ಯರ ದೊರೆಯಾದ ಮಂಗಳೇಶನು ಬಾದಾಮಿಯಲ್ಲಿ ಒಂದು ಗುಹಾಂತರ ದೇವಾಲಯವನ್ನು ಕೊರೆಯಿಸಿ ಆ ದೇವಾಲಯಕ್ಕೆ ಲಂಜಿಗೇಸರ ಎಂಬ ಗ್ರಾಮವನ್ನು ಹಾಗೂ ಆ ದೇವಾಲಯದ ದೇವರಿಗೆ ಹೂವನ್ನು ಒದಗಿಸುವ ಮಾಲಕಾರರಿಗೆ ಆ ಗ್ರಾಮದಿಂದ ದೊರೆಯುವ ಅರ್ಧ ವಿಸದಿ ತೆರಿಗೆಯನ್ನು ದಾನವಾಗಿ ನೀಡಿದುದನ್ನು ಈ ಶಾಸನ ದಾಖಲಿಸಿದೆ. ಈ ಶಾಸನದಲ್ಲಿ ಉಕ್ತವಾದ ಲಂಜಿಗೇಸರ ಗ್ರಾಮವನ್ನು ಇಂದಿನ ಬಾದಾಮಿಯ ಸನಿಹದಲ್ಲಿರುವ ನಂದಿಕೇಶ್ವರ ಗ್ರಾಮ ಎಂದು ಗುರುತಿಸಲಾಗಿದೆ.

ಕ್ರಿ.ಶ. ೫೭೮ರ ಶಾಸನವು ಪೂರ್ವದ ಹಳಗನ್ನಡ ಭಾಷೆಯನ್ನು ಹೊಂದಿದೆ. ಇತ್ತೊದು, ಇತ್ತೊದಾನ್, ಅಟುವೋನ್, ನರಕದಾ, ಏಳನೆಯಾ, ಮಂಗಲೀಸನಾ ಮುಂತಾದ ಪೂರ್ವದ ಹಳಗನ್ನಡ ಭಾಷಾ ಪ್ರಯೋಗಗಳು ಆ ಕಾಲ ಘಟ್ಟದ ಕನ್ನಡ ಭಾಷಾ ವೈಶಿಷ್ಟ್ಯತೆಗಳನ್ನು ಬಿಂಬಿಸುತ್ತವೆ.

ಜಲಗಾರ ದಿಬ್ಬದ ಶಾಸನ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಜಲಗಾರ ದಿಬ್ಬ ಎಂಬ ಗ್ರಾಮದಲ್ಲಿ ಡಾ॥ ಎಚ್.ಎಸ್. ಗೋಪಾಲರಾವ್ ಅವರು ಪತ್ತೆ ಹಚ್ಚಿದ ಗಂಗರ ದೊರೆ ಭೂವಿಕ್ರಮನ ಶಾಸನವನ್ನು ಕ್ರಿ.ಶ. ೬೫೦ರ ಕಾಲದ್ದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದರೆ ಆ ಶಾಸನವು ಕ್ರಿ.ಶ. ೭ನೆಯ ಶತಮಾನದೆಂದು ವಿದ್ವಾಂಸರು ನಿರ್ಣಯಿಸಿದರು. ನಂತರ ಡಾ॥ ಎಚ್. ಎಸ್. ಗೋಪಾಲರಾವ್ ಅವರೂ ಸಹ ಈ ಶಾಸನವು ಕ್ರಿ.ಶ. ೭ನೆಯ ಶತಮಾನದ್ದೆಂದು ಒಪ್ಪಿಕೊಂಡರು.

ಶಾಸನದ ಪಾಠ ಈ ರೀತಿಯಿದೆ

ಸ್ವಸ್ತಿಶ್ರೀ ವಿಕ್ರಮರಾಳೆ
ಪೃಥುವೀಯಾನಾ ಮಾಧವ
ಗೆಲ್ಲೆ ಕಮಱುಗ ಈರಿ
ದಾನೋಂ ಪಲ್ಮಡಿಯರ
ಎಮ್ಮೆ ಯರು ಪಡೆದದು ಪೊನ್ನಿ
ಡುಕ್ಕೆ ವಟ್ ಎಪ್ಪಿತ್ತರ್ಕ್ಕಂ
ಮರಿಯಾದಿಪಸಲ್ಕೊಳ್ಳಾದ[೨೨]

೨೨ ಡಾ॥ ಎಚ್.ಎಸ್. ಗೋಪಾಲರಾವ್, ಜಲಗಾರ ದಿಬ್ಬದ ಶಾಸನ : ಒಂದು ಪುನರ್ ಅಧ್ಯಯನ, ಇತಿಹಾಸದರ್ಶನ – ಸಂ – ೧೦, ಪುಟ – ೮೦

ಶಾಸನದ ಸಾರಾಂಶ

ಶ್ರೀ ವಿಕ್ರಮನು ರಾಜ್ಯಭಾರ ಮಾಡುತ್ತಿದ್ದಾಗ ಮಾಧವ ಗೆದ್ದ
ಹೋರಾಟದಲ್ಲಿ ಕಮರುಗ ಎನು / ಏವನು ಇರಿದ
ಪಲ್ಮಿಡಿಯದ ಎಮ್ಮೆಯ ಪೊನ್ನಿಡುಕ್ಕೆ ೭೦ಕ್ಕೆ
ಮರ್ಯಾದೆಯನು / ಪಡೆದರು. ಅದರಲ್ಲಿ ಅಮೆಸುಂಕ ಏನು /
ಹೊರತು ಪಡಿಸಲಾಗಿದೆ ಎಂದು ವಿವರಿಸಲಾಗಿದೆ.

ಗದ್ದೆಮನೆಯ ಶಾಸನ

ಚಾಲುಕ್ಯರ ಇಮ್ಮಡಿ ಪುಲಕೇಶಿಯ ಆಳ್ವಿಕೆಯ ಕಾಲದ ಗದ್ದೆ ಮನೆಯ ಕಾಡಿನಲ್ಲಿ ದೊರೆತ ಶಾಸನ ಒಂದು ವೀರಗಲ್ಲಾಗಿದ್ದು, 'ಪೆಟ್ಟಣಿ' ಎಂಬುವನ ಶೌರ್ಯ ಸಾಹಸಗಳನ್ನು ಸೊಗಸಾಗಿ ವರ್ಣಿಸಿದೆ. ಅವನು ರಣರಂಗದಲ್ಲಿ ಮಹೇಂದ್ರನನ್ನು ಭಯಗೊಳಿಸುವಂತಹ ಶೂರನಾಗಿದ್ದನಂತೆ.

ಶಾಸನ ಪಾಠ ಈ ರೀತಿಯಿದೆ

ಸ್ವಸ್ತಿಶ್ರೀ ಶಿಲ ಆದಿತ್ಯನ್ ದಿಶಾಮ್ಭರ್ಗ್ಗನ್ ಆಕೆವಾಳನ್ ಅಗ್ಗಳಕಣ್ಬಕನ್ ಪೇರಾಳ್ಕವರೆ ಪೆಟ್ಟಣಿ ಸತ್ಯಾಟ್ಕ ನಟ್ಟುಳ್ವ ಭಟನ್ ಬೆದರೆ ಮಹೇಪ್ಪ್ರನ್ ಬೇಡರ ರಾಯರ ಮಲಪ್ಪರ ಕಾಳೆಗದುಳೆವಿಱುದು ಸ್ವರ್ಗ್ಗಾಲಯಕ್ಕೇಱಿದನ್.[೨೩]

ಈ ಶಾಸನದಲ್ಲಿನ ಭಾಷಾ ಪ್ರಯೋಗದ ಆಧಾರದಿಂದ ಇದು ಕ್ರಿ.ಶ. ೭ನೆಯ ಶತಮಾನದ ಮಧ್ಯಕಾಲ ಘಟ್ಟಕ್ಕೆ ಸೇರಿದ್ದೆಂದು ವಿದ್ವಾಂಸರು ನಿರ್ಧರಿಸಿದ್ದಾರೆ.

ಇದೇ ರೀತಿ ೧ ನೇ ಸ್ಕಂದವರ್ಮನ ಬಸವನಪುರದ ಶಾಸನದಲ್ಲಿ ರವಿದತ್ತನ ಪೂರ್ವಿಕನಾದ ೧ನೇ ಸ್ಕಂಧವರ್ಮನ ಉಲ್ಲೇಖವಿರುವದರಿಂದ ಇದರ ಕಾಲವನ್ನು ಕ್ರಿ.ಶ. ೪೧೩ ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ.[೨೪] ಈ ರೀತಿಯಾಗಿ ಆರಂಭದಿಂದ ಕ್ರಿ.ಶ. ೪೫೦ ರ ವರೆಗಿನ ಶಾಸನಗಳ ವಿವರಣೆ ಮತ್ತು ಆ ಶಾಸನಗಳಲ್ಲಿ ಕನ್ನಡ ಶಬ್ದಗಳು ಬಳಕೆಯಾಗಿರುವುದನ್ನು ಕಾಣಬಹುದು.

---

೨೩ ಕನ್ನಡ ಸಾಹಿತ್ಯ ಚರಿತ್ರೆ – ಸಂಪುಟ – ೦೨, ಪು : ೫೦೭
೨೪. (M.A.R.೧೯೩೩, P.೮೩)

ಅಧ್ಯಾಯ – ಮೂರು

ಸಾಹಿತ್ಯಕ ಅಧ್ಯಯನ

ಕನ್ನಡ ಶಾಸನಗಳ ಸಾಹಿತ್ಯಕ ಆರಂಭಕಾಲ

ಅತ್ಯಂತ ಪ್ರಾಚೀನ ಶಾಸನೋಕ್ತ ಪದ್ಯ ಹಾಗೂ

ಕ್ರಿ.ಶ. ೮೦೦ರ ವರೆಗಿನ ಶಾಸನಗಳ ಸಾಹಿತ್ಯಕ ಮಹತ್ವ.

ಕನ್ನಡ ಶಾಸನಗಳ ಸಾಹಿತ್ಯಕ ಆರಂಭ ಕಾಲ

ಬ್ರಾಹ್ಮೀಲಿಪಿ ಕರ್ನಾಟಕದಲ್ಲಿ ವಿಕಾಸಗೊಳ್ಳುತ್ತ ಬಂದ ಇತಿಹಾಸ ಮತ್ತು ಪ್ರಾರಂಭದ ಕನ್ನಡ ಬರವಣಿಗೆಗಳು ಪರಸ್ಪರ ಸಂಧಿಸಿರುವ ಸಾಧ್ಯ ಸಾಧ್ಯತೆಯನ್ನು ಊಹಿಸಿದರೆ ಸುಮಾರು ಕ್ರಿ.ಶ. ೨-೩ ನೇ ಶತಮಾನದಲ್ಲಿ ಕನ್ನಡ ಭಾಷೆ ಲಿಪಿಗಿಳಿಯಲು[೧] ಮೊದಲು ಮಾಡಿದೆ ಎನಿಸುತ್ತದೆ. ಎಂದು ಡಾ॥ ಎಲ್.ನರಸಿಂಹಾಚಾರ್ ಅವರು ಅಭಿಪ್ರಾಯಪಟ್ಟಿದ್ದಾರೆ ಈ ವರೆಗೆ ಬಾಯಿಯಲ್ಲಿ ನುಡಿಯುತ್ತಿದ್ದ ಭಾಷೆ ಸಾಹಿತ್ಯಗಳಿಗೆ ಲಿಪಿ ಬಂದುದು. ಕನ್ನಡಕ್ಕೆ ಕಾಲು ಬಂದತಾಯಿತು. ಈ ಅನುಕೂಲದಿಂದಾಗಿ, ನಾಲಗೆಯಲ್ಲಿ ನೆಯ್ದು ನೆನಪಿನ ಪುಸ್ತಕದಲ್ಲಿ ಬಿಡಿ ಪದ್ಯಗಳನ್ನು ಹಿಡಿದಿಡುತ್ತಿದ್ದ ಕನ್ನಡಿಗರ ಸಾಹಿತ್ಯ ನಿರ್ಮಾಣ, ದೊಡ್ಡ ಕಾವ್ಯ ನಿರ್ಮಾಣದತ್ತ ಮುನ್ನಡೆಯಿತು. ಆದರೆ ಭಾಷೆಯನ್ನು ಬರಹದಲ್ಲಿ ಅಳವಡಿಸಲು, ಕೆಲವೊಂದು ಅವಧಿ ಅವಶ್ಯ. ಈ ಸಮಯದಲ್ಲಿ ಲಿಪಿ ಸಾಮರಸ್ಯಕ್ಕೆ ಹೆಣಗುತ್ತಿರುವ ಕನ್ನಡ ಭಾಷೆಗೆ, ಲಿಪಿಯೊಂದಿಗೆ ನುರಿತ ಸಂಸ್ಕೃತವನ್ನು ಸ್ವೀಕರಿಸುವುದು 'ನೀರಿಳಿಯದ ಗಂಟಲೊಳ್ ಕಡುಬು ತುರಿಕಿದಂತೆ' ಅನಿವಾರ್ಯವಾಯಿತು. ಇದರಿಂದ ಬರವಣಿಗೆಯಲ್ಲಿ ವಿಷಮ ಶೈಲಿ ತಲೆದೋರುವುದು ಸಹಜ. ಇದಕ್ಕೆ ಉತ್ತಮ ಉದಾಹರಣೆ ಹಲ್ಮಿಡಿ ಶಾಸನ ಎಂದು ಕಲ್ಬುರ್ಗಿಯವರು ಸರಿಯಾಗಿ ಗುರ್ತಿಸಿದ್ದಾರೆ.[೨]

ಹೀಗೆ ಕನ್ನಡ ನಾಡಿನಲ್ಲಿ ಕ್ರಿ.ಪೂ. ದಷ್ಟು ಹಿಂದಿನಿಂದಲೂ ಶಾಸನಗಳು ದೊರೆಯುತ್ತವೆಯಾದರೂ ಕನ್ನಡದ ಬಾಯ್ನುಡಿ ಸಾಹಿತ್ಯದ ಗದ್ದುಗೆಯೇರಿ ಬರಹ ರೂಪದಲ್ಲಿ ಮೊಟ್ಟ ಮೊದಲು ನಮಗೆ ಕಾಣಿಸಿಕೊಳ್ಳುವುದು ಹಲ್ಮಿಡಿ ಶಾಸನದಲ್ಲಿ.

ಕನ್ನಡ ಸಾಹಿತ್ಯಕ ಅಂಶಗಳಿರುವ ಶಾಸನಗಳನ್ನು ಹುಡುಕುತ್ತಾ ಹೊರಟರೆ ಕನ್ನಡದ ಮೊಟ್ಟಮೊದಲ ಉಪಲಬ್ದ ಶಾಸನ ಹಲ್ಮಿಡಿ ಶಾಸನದಿಂದಲೇ ಅಧ್ಯಯನ ಮಾಡಬೇಕಾಗಿದೆ. ಇದರ ಕಾಲವನ್ನು ಎಲ್ಲಾ ವಿದ್ವಾಂಸರು ಎಂ.ಎಚ್. ಕೃಷ್ಣ ಅವರು ಗುರ್ತಿಸಿರುವ ಕ್ರಿ.ಶ.೪೫೦ರ ಕಾಲಕ್ಕೆ ಸಹಮತ ಸೂಚಿಸಿದ್ದಾರೆ. ಹಲ್ಮಿಡಿ ಶಾಸನವು ಗದ್ಯದಿಂದ ಕೂಡಿದ್ದು ಇದರಲ್ಲಿ ನಾವು ಸಾಹಿತ್ಯಕ ಅಂಶಗಳನ್ನು ಕಾಣಲು ಸಾಧ್ಯವಿಲ್ಲ. ಏಕೆಂದರೆ ಈ ಶಾಸನದ ಲಿಪಿ ಕನ್ನಡದಲ್ಲೆ ಇದ್ದರೂ ಹೆಚ್ಚು ಸಂಸ್ಕೃತ ಶಬ್ದಗಳನ್ನು ಬಳಸಿದ್ದಾರೆ. ಇಲ್ಲಿ ಕೇವಲ ೨೫ ಕನ್ನಡ ಪದಗಳಿವೆ ಎಂದು ಎಂ.ಎಚ್. ಕೃಷ್ಣ ಗುರ್ತಿಸಿದ್ದಾರೆ.

ಶಾಸನದ ಅಲ್ಲಲ್ಲಿ ಬಳಕೆಯಾಗಿರುವ ಈ ೨೫ ಕನ್ನಡ ಪದಗಳಲ್ಲಿ ಸಾಹಿತ್ಯಕ ಅಂಶಗಳನ್ನು ಗುರ್ತಿಸುವುದು ಸಾಧ್ಯವಿಲ್ಲ. ಆದ್ದರಿಂದ ಹಲ್ಮಿಡಿ ಶಾಸನ ಕನ್ನಡ ಭಾಷೆ ದೃಷ್ಟಿಯಿಂದ ಪ್ರಾಚೀನವೇ ಹೊರತು ಸಾಹಿತ್ಯದ ದೃಷ್ಟಿಯಿಂದಲ್ಲ. ಆದರೆ ಶಾಸನದ ಪ್ರಾರಂಭದಲ್ಲಿ ಸಂಸ್ಕತದ ಅನುಷ್ಟುಪ್ಪು ಛಂದಸ್ಸಿನ "ಜಯತಿಶ್ರೀ ಪರಿಷ್ವಜಶ್ಯಾರ್ಙ್ಗ ವ್ಯಾನತಿ ರಚ್ಯುತಃ ದಾನವಾ ಕ್ಷೋರ್ಯಗಾನ್ನಾಗ್ನಿಃ ಶಿಷ್ಟಾಸಾಸ್ತು ಸುದರ್ಶನಃ" ಎಂಬ ಸುಂದರವಾದ ಒಂದು ಶ್ಲೋಕವಿರುವುದರಿಂದ ಹಲ್ಮಿಡಿ ಶಾಸನದಲ್ಲಿ ಸಾಹಿತ್ಯಕ ಅಂಶವನ್ನು ಗುರ್ತಿಸಬಹುದೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಏಕೆಂದರೆ ಖ್ಯಾತ ಕರ್ಣಾಟಕಗಳು ಸಂಸ್ಕೃತದಿಂದ ಬಂದರೂ ಕನ್ನಡ

---

೧ ಡಿ.ಎಲ್. ನರಸಿಂಹಚಾರ್. ಕನ್ನಡ ಗ್ರಂಥ ಸಂಪಾದನೆ. ಪುಟ ೩೨

೨ ಡಾ॥ ಎಂ.ಎಂ. ಕಲಬುರ್ಗಿ. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ. ಪು. ೧೨೯

ಜಾಯಮಾನಕ್ಕೆ ಹೊಂದಿಕೊಂಡು ಪ್ರಾಚೀನ ಕೃತಿ ಶಾಸನಗಳಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು ಅದೇ ರೀತಿ ಅನುಷ್ಟುಪ್ ಛಂದಸ್ಸು ಕನ್ನಡ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಬಳಕೆಯಾಗಿರಬಹುದು.

ಹಲ್ಮಿಡಿಶಾಸನದ ನಂತರ ಕ್ರಿ.ಶ. ಸು. ೪೮೦ ರ ಗಂಗ ಮನೆತನದ ತೀರ ಹಳೆಯ ಉಲ್ಲೇಖವುಳ್ಳದೆಂದು ರೈಸರು ವರ್ಣಿಸಿದ ಸಿರಗುಂದ ಶಾಸನ.[೩] ಇದು ಪೂರ್ವದ ಹಳಗನ್ನಡ ಭಾಷೆಯಲ್ಲಿದೆ. ಆದರೆ ಈ ಶಾಸನದಲ್ಲಿ ಸಾಹಿತ್ಯಕ ಅಂಶಗಳಿಲ್ಲ.

ಈಚೆಗೆ ದೊರೆತಿರುವ ಕೆಲಗುಂದಿ ಕಲ್ಬರಹವು ಕದಂಬ ದೊರೆ ರವಿವರ್ಮನ ಉಲ್ಲೇಖಮಾಡಿರುವುದರಿಂದ ೫ನೇ ಶತಮಾನದ ಉತ್ತರಾರ್ಧವೆಂಬ ಹಲ್ಮಿಡಿ ಶಾಸನ ಬಿಟ್ಟರೆ ಇದೇ ಕನ್ನಡದ ಮೊದಲ ಶಾಸನವೆಂದು ಇದರಲ್ಲಿ ಅಚ್ಚ ಕನ್ನಡ ಪದಗಳೇ ಹೆಚ್ಚಾಗಿವೆಯೆಂದು ಊಹಿಸಲಾಗಿತ್ತು. ಆದರೆ ಕೆಲವು ವಿದ್ವಾಂಸರು ಈ ಶಾಸನದ ಕಾಲವು ಖಚಿತವಿಲ್ಲವೆಂದು ಹೇಳಿದ್ದಾರೆ. ಈ ಶಾಸನದಲ್ಲಿ ಸಾಹಿತ್ಯ ಅಂಶಗಳು ಕಂಡುಬರುವುದಿಲ್ಲ.

ಗೋವಿಂದ ಪೈಗಳು ಹಲ್ಮಿಡಿ ಶಾಸನಕ್ಕಿಂತ ಹಿಂದೆಯೇ ಅಂದರೆ ಕ್ರಿ.ಶ. ಎರಡನೆ ಶತಮಾನದಷ್ಟು ಹಿಂದಿನಿಂದಲೂ ಕನ್ನಡ ಶಾಸನಗಳು ದೊರೆಯುತ್ತವೆಂದು ಹೇಳಿ. ಅಂತಹ ಶಾಸನಗಳಲ್ಲಿ ಹಲವನ್ನು ತಮ್ಮ 'ಕನ್ನಡ ಸಾಹಿತ್ಯದಲ್ಲಿ ಹಳಮೆ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.[೪]

ಸಾಹಿತ್ಯವಿಲ್ಲದೆ ಶಾಸನಗಳು ಹುಟ್ಟಲಾರವು ಎಂಬುದು ಖಂಡಿತವಿರುವುದರಿಂದ ಕ್ರಿ.ಶ. ೧ನೇ ಶತಮಾನದ ಹಿಂದೆಯೇ ಕನ್ನಡದಲ್ಲಿ ಪ್ರಗಲ್ಭವಾದ ಸಾಹಿತ್ಯವಲ್ಲದಿದ್ದರೆ ಸಾಮಾನ್ಯ ಸಾಹಿತ್ಯವಾದರೂ ಹುಟ್ಟಿರಬೇಕು ಎಂದು ಸಹಜವಾಗಿಯೇ ಅನುಮೋದಿಸಲಾಗುತ್ತದೆ ಎಂದು ಹೇಳಿದ್ದಾರೆ. ಗೋವಿಂದ ಪೈಗಳು ಉದಾಹರಿಸಿರುವ ಕೆಲವು ಶಾಸನಗಳೆಂದರೆ ತಲಕಾಡಿನ ಅರಸು ತಡಂಗಾಲ ॥ ಮಾಧವನ ತಾಗರ್ತಿಯ ಶಾಸನ.[೫] ಕ್ರಿ.ಶ. ೩೪೯ರ ಗಂಗರಾಜ ಹರಿವರ್ಮನ ನಂಜನಗೂಡು ಶಾಸನ.[೬] ಕ್ರಿ.ಶ. ೨೬೭ರ ನಂಜನಗೂಡಿನ ಶಾಸನ.[೭]

ಇಂತಹ ಶಾಸನಗಳ ಆಧಾರದಿಂದ ಕ್ರಿ.ಶ. ೨ನೇ ಶತಮಾನದಷ್ಟು ಹಿಂದೆಯೆ ಕನ್ನಡ ಸಾಹಿತ್ಯದ ಅಸ್ತಿತ್ವವಿತ್ತೆಂಬುದನ್ನು ಒಪ್ಪಬೇಕಾಗುತ್ತದೆ. ಆದರೆ ಈ ಮೇಲೆ ಉಲ್ಲೇಖಿಸಲಾದ ಶಾಸನಗಳ ಕಾಲ ಅನುಮಾನಾಸ್ಪದ. ಇವುಗಳಲ್ಲಿ ಸಾಹಿತ್ಯದ ಗುಣವೇನು ಇಲ್ಲ ಎಂದು ಗೋವಿಂದ ಪೈಗಳೇ ಹೇಳುತ್ತಾರೆ. ಕನ್ನಡದ ಮೊಟ್ಟ ಮೊದಲ ಶಾಸನವೆಂದು ಬಹುಕಾಲದವರೆಗೆ ಸ್ವೀಕರಿಸಲಾಗಿದ್ದ ಬಾದಾಮಿಯ ಮಂಗಳೇಶನ ಶಾಸನ (ಕ್ರಿ.ಶ. ೫೭೮) ವು ಸಾಹಿತ್ಯದ ದೃಷ್ಟಿಯಿಂದ ಕೇವಲ ಶುಷ್ಕವಾದದ್ದು.[೮] ಆದುದರಿಂದ ಪೂರ್ವದ ಹಳಗನ್ನಡದ ಭಾಷೆಯನ್ನು ಒಳಗೊಂಡು ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದ ಶಾಸನವೆಂದರೆ ಚಿತ್ರದುರ್ಗ ಜಿಲ್ಲೆಯ ತಮಟಕಲ್ಲು ಶಾಸನವಾಗಿದೆ.

---

೩ ಬಿ.ಎಲ್. ರೈಸ್ (ಸಂ) E.C.Vol, VI, ಚಿ.ಮ. 50
೪ ಎಂ. ಗೋವಿಂದಪೈ : ಕುಂದಮಾಲೆ ಕನ್ನಡ ಸಾಹಿತ್ಯದಲ್ಲಿ ಹಳಮೆ, ಪುಟ ೩–೮
೫ ಬಿ.ಎಲ್. ರೈಸ್ (ಸಂ)E.C.VII, ಶಿಕಾರಿಪುರ ನಂ. ೫೨
೬ E.C. ನಂ. ೧೨೨
೭ E.C. ನಂ. ೧೯೯
೮ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ೦೧, ಪು : ೪೨ – ೪೩

ತಮಟಕಲ್ಲು ಶಾಸನ (ಕ್ರಿ.ಶ. ೫೦೦)

ಕನ್ನಡದ ಸಾಹಿತ್ಯಕ ಅಂಶವಿರುವ ಮೊಟ್ಟ ಮೊದಲ ಶಾಸನವೆಂದರೆ ಚಿತ್ರದುರ್ಗ ಜಿಲ್ಲೆಯ ತಮಟಕಲ್ಲು ಗ್ರಾಮದಲ್ಲಿರುವ 'ತಮಟಕಲ್ಲುಶಾಸನ'. ಈ ಶಾಸನವು ಲಿಪಿ ಹಾಗೂ ಭಾಷಾ ಸ್ವರೂಪದಿಂದ ಪೂರ್ವದ ಹಳಗನ್ನಡ ಭಾಷೆಯಾಗಿದ್ದು ಇದರ ಕಾಲವನ್ನು ವಿದ್ವಾಂಸರು ಕ್ರಿ.ಶ. ೫೦೦ ಎಂದು ಗುರ್ತಿಸಿದ್ದಾರೆ.

"ಇದು ೫ನೇ ಶತಮಾನದ ಶಾಸನವೆಂಬುದು ನಿಶ್ಚಿತವಾಗಿದ್ದಲ್ಲಿ ಕನ್ನಡ ಶಾಸನ ಸಾಹಿತ್ಯವನ್ನು ಇದರಿಂದ ಆರಂಭಮಾಡಲು ಅಡ್ಡಿಯಿರುತ್ತಿರಲಿಲ್ಲ. ಏಕೆಂದರೆ ಇದರಲ್ಲಿ ಹಲ್ಮಿಡಿಶಾಸನದಲ್ಲಿರುವುದಕ್ಕಿಂತ ಹೆಚ್ಚಿನ ಕಾವ್ಯಗುಣವಿದೆ ಹಾಗೂ ಸಾಹಿತ್ಯ ಗುಣದಿಂದ ಕೂಡಿದ ಚೊಕ್ಕಾದ ಸ್ವಭಾವ ಚಿತ್ರವಾಗಿದೆ".[೯]

ಈ ಶಾಸನವನ್ನು ಅತ್ಯಷ್ಠಿ ಛಂದಸ್ಸಿನ ಕನಕಾಜ್ಜಿನೀ ವೃತ್ತದಲ್ಲಿ ಗುಣಮಧುರ ಎಂಬ ವ್ಯಕ್ತಿಯನ್ನು ವರ್ಣಿಸಲಾಗಿದೆ.

ಶಾಸನಪಾಠ ಈ ರೀತಿಯಿದೆ.

ಫಣಮಣಿ ಅನ್ತು ಭೋಗಿ ಫಣದುಳ್ಮಣಿ ವಿಲ್ಮನದೋನ್
ರಣಮುಖದುಳ್ಳ ಕಾಲನರಿಯರ್ಕ್ಕು ಮನಿನ್ದ್ಯಗುಣನ್
ಪ್ರಣಯಿ ಜನಕ್ಕೆ ಕಾಮನಸಿ ತೋತ್ಪಲ ವರ್ಣ್ಣನವನ್
ಗುಣಮಧುರಾನ್ಕ ದಿವ್ಯಪುರುಷನ್ಪುರುಷ ಪ್ರವರನ್[೧೦]

ಈ ಪದ್ಯದ ಮೊದಲು ಇದೇ ಗುಣಮಧುರನನ್ನು ವರ್ಣಿಸುವ ಸಂಸ್ಕೃತ ಪದ್ಯವೊಂದಿದೆ.[೧೧] ಅದರಲ್ಲಿ ಭಾರದ್ವಾಜ ಗೋತ್ರದ ಧನಾಗಮನ ಮೊಮ್ಮಗನೂ ಮನಾಗಮನ ಮಗನೂ ಆದ ಮಾಸಿಕ್ಕಾ ಪುರಾಧೀಪತಿಯೂ ಆದ ಗುಣಮಧುರನು. 'ತ್ಯಾಗವಾನ್ ಇತಿ ಪ್ರಶಸ್ಥ' ಎಂದು ವರ್ಣಿಸಲ್ಪಟ್ಟಿದ್ದಾರೆ.

ಈ ರೀತಿಯಾಗಿ ಸಂಸ್ಕೃತ ಶಾಸನ ಮತ್ತು ಕನ್ನಡ ಶಾಸನ ಎರಡೂ ಪರಸ್ಪರ ಪೂರಕವಾಗಿವೆ. ಇಷ್ಟು ಪ್ರಾಚೀನ ಕಾಲಾವಧಿಗೆ ಸೇರಿದ ಬೇರೆ ಕನ್ನಡ ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿಲ್ಲ ಎಂದು ಡಾ॥ ಎಂ.ಬಿ. ನೇಗಿನಹಾಳ ಗುರ್ತಿಸಿದ್ದಾರೆ.[೧೨]

ಈ ಪದ್ಯದ ಸಾರಾಂಶ ಈ ರೀತಿಯಿದೆ. ಹಣೆಯಲ್ಲಿ ರತ್ನವನ್ನು ಧರಿಸಿದ ಆದಿಶೇಷನಂತೆ ಮಹಾಭೋಗಿಯಾದ ಹಣೆಯಲ್ಲಿ ರತ್ನವನ್ನು ಧರಿಸಿದುದು ರಾಜನಾದರೂ ಬಿಲ್ಲಿನಂತೆ ಬಾಗುವ ವಿನಯಶಾಲಿ, ರಣರಂಗದಲ್ಲಿ ಯಮನಂತಿರುವವನು, ಶತ್ರುಗಳೂ ಸಹ ನಿಂದಿಸಲು ಸಾಧ್ಯವಿಲ್ಲದಂತಹ ಗುಣವುಳ್ಳವನು. ಪ್ರಣಯಿಗಳಿಗೆ ಮನ್ಮಥನಂತಿರುವವನೂ, ಕಪ್ಪು ಬಣ್ಣದವನೂ ಆದ ಗುಣಮಧುರ ದಿವ್ಯ ಪುರುಷ ಹಾಗೂ ಪುರುಷಶ್ರೇಷ್ಠ ಎಂದು ಶಾಸನದಲ್ಲಿ ಕಾವ್ಯಾತ್ಮಕವಾಗಿ ವರ್ಣಿಸಲಾಗಿದೆ.

---

೯ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ – ೦೨, ಪುಟ – ೪೬೦,

೧೦ ಬಿ.ಎಲ್. ರೈಸ್ (ಸಂ) E.C.XI ಚಿತ್ರದುರ್ಗ, ಶಾಸನಸಂಖ್ಯೆ : ೪೩

೧೧ ಬಿ.ಎಲ್. ರೈಸ್ (ಸಂ) E.C.XI ಶಾಸನ ಸಂಖ್ಯೆ : ೪೨

೧೨ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ ಪುಟ : ೫೩

ಗುಣಮಧುರ ಎಂಬ ರಾಜನ ರೂಪ, ಗುಣ, ಪರಾಕ್ರಮವನ್ನು ವರ್ಣಿಸುವ ಹಾಗೂ ರಣರಂಗದಲ್ಲಿ ಹೋರಾಡಿ ಮಡಿದ ಪ್ರಶಸ್ತಿ ಶಾಸನವಾಗಿದೆ. ಈ ಶಾಸನವು ಕರ್ನಾಟಕದ ಪ್ರಾಚೀನ ಉಪಲಬ್ಧ ವೀರಗಲ್ಲಾಗಿದೆ. ಇದರಲ್ಲಿನ ಸಂಸ್ಕೃತ ಶಬ್ದ ಬಾಹುಳ್ಯವು ಗಮನಾರ್ಹವಾಗಿರುವಂತೆ ಇದರ ಕಾವ್ಯಗುಣವೂ ಮನೋಜ್ಞವಾಗಿದೆ. ಇಂತಹ ಕಾವ್ಯಮಯವಾದ ಶಿಲಾಶಾಸನ ಹುಟ್ಟಬೇಕಾದರೆ ಅದಕ್ಕೂ ಹಿಂದೆ ಸಾಕಷ್ಟು ಕಾವ್ಯ ಸಮೃದ್ಧಿ ಇದ್ದಿರಬೇಕೆಂದು ಊಹಿಸಬಹುದು.

ಕ್ರಿಶ ೫, ೬, ೭ ನೇ ಶತಮಾನಗಳಿಗೆ ಸೇರಿದ ಗಂಗ, ಕದಂಬ, ಚಾಲುಕ್ಯರ ಅನೇಕ ಶಾಸನಗಳನ್ನು ಗೋವಿಂದ ಪೈಗಳು ಉದ್ಧರಿಸಿದ್ದಾರೆ. ಆದರೆ ಅವುಗಳಲ್ಲಿ ಸಾಹಿತ್ಯಕ ಅಂಶಗಳಾವುದೂ ಕಂಡುಬರುವುದಿಲ್ಲ.[೧೩]

ಶ್ರವಣಬೆಳಗೊಳದ ನಂದಿಸೇನ ಮುನಿಯ ಶಾಸನ (ಕ್ರಿ.ಶ. ೬.೫೦)

ಶ್ರವಣಬೆಳಗೊಳದ ಈ ಶಾಸನವು ಶ್ರವಣಬೆಳಗೊಳದಲ್ಲಿರುವ ಶಾಸನಪದ್ಯಗಳಲ್ಲೆಲ್ಲ ಅತ್ಯುತ್ತಮವೂ ಅತ್ಯಂತ ಪ್ರಸಿದ್ಧವೂ ಆಗಿದೆ. ಈ ಶಾಸನವು ನಂದಿಸೇನ ಎಂಬ ಜೈನ ಮುನಿಯು ಸಲ್ಲೇಖನ ವ್ರತದಿಂದ ಉಪವಾಸ ಮಾಡಿ ಸಮಾಧಿ ಮರಣ ಪಡೆದ ವಿವರವನ್ನು ಕಾವ್ಯಾತ್ಮಕವಾಗಿ ಬಿಂಬಿಸಲಾಗಿದೆ. ಇದು ವೈರಾಗ್ಯ ಗೀತೆಯಾಗಿದ್ದು ಈ ಮಾತುಗಳ ಮೋಡಿ, ಜೋಡಣೆಗಳು ಈ ಶಾಸನ ಕರ್ತೃವಿನ ಕವಿ ಹೃದಯವನ್ನು ದಿಗ್ದರ್ಶಿಸುತ್ತವೆ. ಹಾಗೂ ಶಾಸನಕಾರನ ಸೌಂದರ್ಯ ದೃಷ್ಟಿಗೆ ಇದು ಒಳ್ಳೆಯ ಉದಾಹರಣೆಯಾಗಿದೆ.

ಈ ಪದ್ಯವು ಈ ರೀತಿಯಿದೆ.

ಸುರಚಾಪಂ ಬೋಲೆ ವಿದ್ಯುಲ್ಲತೆಗಳ ತೆವಿವೋಲ್ಮಂಜು ವೋಲ್ತೋಱಿಬೇಗಂ
ಪಿರಿಗುಂ ಶ್ರೀ ರೂಪಲೀಲಾಧನ ವಿಭವ ಮಹಾರಾಶಿಗಳಿಲ್ಲ ವಾರ್ಗ್ಗಂ
ಪರಮಾರ್ಥಂ ಮೆಚ್ಚಿನಾ ನೀ ಧರಣಿಯಳಿರವಾಸಿನ್ದು ಸನ್ಯಾಸನಂಗೆ
ಯ್ದುರು ಸತ್ವನ್ನನ್ದಿಸೇವ ಪ್ರವರ ಮುನಿವರನ್ವೇವ ಲೋಕಕ್ಕೆ ಸನ್ದಾನ್[೧೪]

ಈ ಪದ್ಯದ ಸಾರಾಂಶವನ್ನು ಈ ರೀತಿ ಸಂಗ್ರಹಿಸಬಹುದು: "ಕಾಮನ ಬಿಲ್ಲಿನಂತೆ, ಮಿಂಚಿನಂತೆ, ಮಂಜಿನಂತೆ ಬೇಗ ನಾಶವಾಗುವ ಐಶ್ವರ್ಯ, ರೂಪ, ಲೀಲೆ, ಹಣ, ವೈಭವ, ಮುಂತಾದವುಗಳು ಯಾರಿಗೂ ಶಾಶ್ವತವಲ್ಲ. ಇಂತಹ ನಶ್ವರವಾದ ಪ್ರಪಂಚಲ್ಲಿ ನಾನು ಇರುವುದಿಲ್ಲವೆಂದು ನಂದಿಸೇನ ಪ್ರವರ ಮುನಿಯು ಸಲ್ಲೇಖನ ವೃತದಿಂದ ಸಮಾಧಿಮರಣ ಪಡೆದು ದೇವಲೋಕಕ್ಕೆ ಹೋದನು"ದನ್ನು ಒಂದು ಸುಂದರ ಪರಿಪೂರ್ಣ ಚಿತ್ರ, ಕಲೆಯುಂಟು, ಕಾವ್ಯವುಂಟು, ಜೀವವುಂಟು, ಜೀವನ ದರ್ಶನವುಂಟು[೧೫] (ಸಮರ್ಪಣೆ ಪು : ೨೭೭).

೧೩ ಕನ್ನಡ ಸಾಹಿತ್ಯ ಚರಿತ್ರೆ – ೦೨, ಪು : ೪೬೦
೧೪ E.C. 02, ಶ್ರವಣಬೆಳಗೊಳ ಶಾಸನ ಸಂಖ್ಯೆ : ೯೮ ಪುಟ : ೭೦
೧೫ ಸಮರ್ಪಣೆ, ಪುಟ ೨೭೭

ಶ್ರವಣ ಬೆಳಗೊಳದ ಈ ಶಾಸನವು ಇಡೀ ಜೈನ ಧರ್ಮದ ತತ್ವವನ್ನು ಹಿಡಿದಿಟ್ಟಿರುವ ಪದ್ಯವಾಗಿದ್ದು, ನಂದಿಸೇನನ ಇಹವಿರಕ್ತಿಯನ್ನು ಬಹಳ ನಾಟಕೀಯವಾಗಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸುವ ಪದ್ಯವಾಗಿದೆ.

ಶ್ರವಣಬೆಳಗೊಳದ ಈ ಪದ್ಯದಿಂದ ಮುಂದೆ ಬಂದ ಶಿವಕೋಟ್ಯಾಚಾರ್ಯ, ಪಂಪ, ದುರ್ಗಸಿಂಹ, ಜನ್ನ ಮುಂತಾದಂತಹ ಪ್ರಮುಖ ಕವಿಗಳು ಪ್ರಭಾವಿತರಾಗಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಏಕೆಂದರೆ ಇವರ ಕೃತಿಗಳಲ್ಲಿ 'ಸುರಚಾ ಪಂಬೋಲೆ' ಪದ್ಯವನ್ನು ಹೋಲುವ ಅನೇಕ ಪದ್ಯಗಳು ಬರುತ್ತವೆ. ವಡ್ಡಾರಾಧನೆಯ ವೃಷಭಸೇನ ಭಟ್ಟಾರಕರ ಕಥೆಯಲ್ಲಿ ಬರುವ

ಪನಿಪುಲ್ಲ ಮುಗಿಲ ಸಂಜೆಯ
ಕನಸಿನ ಸುರಧನುವ ನೆಗೆದ ನೊರೆಗಳ ತೆಱನಂ
ತನಿತುಂ ನಿಲ್ಲವು ಬಗೆವೊಡೆ
ಮನು ಜರ ಯೌವನ ಮುಮರ್ಥಮುಂ[೧೬]

ಎಂಬ ಕಂದಪದ್ಯ ಸುರಚಾಪಂಬೋಲೆ ಪದ್ಯವನ್ನು ನೆನಪಿಸುತ್ತವೆ. ಆದರೆ ಶಾಸನದಲ್ಲಿರುವ ಓಜಸ್ಸು ಈ ಕಂದ ಪದ್ಯದಲ್ಲಿ ಇಲ್ಲ ಎಂದು ಡಾ॥ ನೇಗಿನಹಾಳ ಗುರ್ತಿಸಿದ್ದಾರೆ.[೧೭]

ಪಂಪನ ಆದಿಪುರಾಣದಲ್ಲಿ ನಾಲ್ಕು ಕಡೆ ಶ್ರವಣಬೆಳಗೊಳದ ಈ ಶಾಸನದ ಉಪಮೆ ಬಳಕೆಯಾಗಿದೆ ಎಂದು ಹೇಳಬಹುದು. ವಜ್ರಜಂಘ ಮಹಾರಾಜನಿಗೆ ಸಂಸಾರದ ಬಗೆಗೆ ವೈರಾಗ್ಯ ಉಂಟಾದ ಸಂದರ್ಭದಲ್ಲಿ

ಪುಣ ಶಿಖರಾದ್ಯು ಷಿತಾಂಭಃ
ಕಣ ಸಂಚಲ ಮಮರಚಾವ ಚಪಲಂ ವಿದ್ಯುತ್
ಕ್ಷಣಿಕಂ ನಿಟ್ಟೆಯೆ ತನು ಭೃ
ದ್ಗುಣ ಯೌವನ ರುಪವಿಭವವಭೋಣಭೋಗಂ[೧೮]

ಎಂಬ ಮಾತು ಅವನ ಬಾಯಿಂದ ಬರುತ್ತದೆ. ಇದು ವಾಸ್ತವವಾಗಿ ಶ್ರವಣಬೆಳಗೊಳದ 'ಸುರಚಾಪಂಬೋಲೆ' ಎಂಬ ಶಾಸನ ಪದ್ಯದ ಪ್ರೌಢವಾದ ರೂಪಾಂತರವೇ ಆಗಿದೆ.

ಮತ್ತೆ ಅದೇ ಕೃತಿಯಲ್ಲಿ ನೀಲಾಂಜನೆಯ ನರ್ತನ ಸಂದರ್ಭದಲ್ಲಿ ಆದಿನಾಥನಿಗೆ ವೈರಾಗ್ಯದ ಪ್ರಸಂಗದಲ್ಲಿ

ತನು ರೂಪ ವಿಭವ ಯೌವನ
ಧನ ಸೌಭಾಗ್ಯಾಯುದಾದಿಗಳ್ಗೆಗೆ ಕುಡುಮಿಂ
ಚಿನ ಪೊಳವು ಮುಗಿಲನೆವಿಲಿಂ
ದ್ರನಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ[೧೯]

೧೬ ಡಿ.ಎಲ್.ಎನ್ (ಸಂ), ವಡ್ಡಾರಾಧನೆ, ಪುಟ : ೧೧೩
೧೭ ಎಂ.ಬಿ. ನೇಗಿನಹಾಳ, ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪು : ೬೨
೧೮ ಆದಿಪುರಾಣ, ೪-೭೫
೧೯. ಎಲ್. ಗುಂಡಪ್ಪ (ಸಂ). ಆದಿಪುರಾಣ ೯-೪೬

ಎಂಬ ಪದ್ಯದಲ್ಲಿ ಹಾಗೂ ಇನ್ನೊಂದು ಪದ್ಯವಾದ

ನರಭೋಗ ಮೆಂಬೀ ಪನಿಪುಲ್ಲನಕ್ಕೆ

ತೃಷ್ಣೆ ಪೇಳ್ ಪೋದಪುದೇ.....[೨೦]

ಎಂಬ ಮಾತುಗಳು ಆದಿನಾಥನಿಂದ ಉಕ್ತವಾಗಿವೆ. ಇಲ್ಲಿಯೂ ಕಾಮನಬಿಲ್ಲು, ಮಿಂಚಿನ ಹೊಳಪು, ಹುಲ್ಲ ಮೇಲಿನ ಹನಿ (ಮಂಜು) ಈ ರೂಪಕಗಳೇ, ಬದುಕಿನ ನಶ್ವರತೆಯನ್ನು ಸೂಚಿಸಲು ಬಳಕೆಯಾಗಿವೆ. ಹಾಗೂ ಕೊನೆಯದಾಗಿ ಈ ಶಾಸನದಲ್ಲಿ ಬರುವ "ಶ್ರೀ ರೂಪ ಲೀಲಾಧನ ವಿವವ ಮಹಾರಾಶಿಗಳ್ ನಿಲ್ಲವಾರ್ಗಂ" ಎಂಬ ಸಾಲು, ಪಂಪನ ಆದಿಪುರಾಣದಲ್ಲಿ ಬರುವ "ಅಮರೇಂದ್ರೋನ್ನತಿ ಖೇಚರೇಂದ್ರ ವಿಭವಂ ಭೋಗಿಂದ್ರ ಭೋಗಂ ಮಹೇಂದ್ರ ಮಹೈಶ್ವರ್ಯಯ ಧೃವಂ" ಎಂಬ ಪದ್ಯದಲ್ಲಿ ವ್ಯಕ್ತವಾಗಿದೆ.

ನಂತರ ಪಂಚತಂತ್ರದಲ್ಲಿ

ಅನಿಮಿಷ ಚಾಪದಂತೆ ಸಿರಿ ಶಾರದ ನೀರದ ಕಾಂತಿಯಂತೆ ಯೌ

ವನದೆಸಕಂ ತೃಣಾಗ್ರಗತವಾಃಕಣಿ ಕಾರಣದಂತೆ ಸಂದ ಜೀ

ವನ ಮದರಿಂ ಭವಪ್ರಭವ ಜೀವಿಗೆ ನಿರ್ಮಲ ಧರ್ಮಮಾರ್ಗದೊಳ್

ಮನಮೊಸೆದಾಗಳುಂ ನಡೆಯವೇಮ್ಬಿದು ವಿಶ್ವಮೃಗೇಂದ್ರವಲ್ಲಭಂ[೨೧]

ಎಂಬ ಮಾತು ಬರುವುದೆ.

ಜನ್ನನ 'ಅನಂತನಾಥಪುರಾಣ'ದಲ್ಲಿ

ಡಿವಿಜ ಚೌಪದಿಂ ಚಾಪಳಂ ಪೊದಳ್ದ ಸಿರಿಯೆಂಬುದು[೨೨]

ಎಂಬ ಪದ್ಯದಲ್ಲಿ ಹಾಗೂ

ಎಯ್ದೆ ತೋರ್ಪ ಮಿಂಚಿನ ಪೊಳಪು

...... ಮಾನಸರ ಮಾನಸವಾಳ್[೨೩]

ಎಂಬ ವರ್ಣನೆ ಬರುತ್ತದೆ. ಮನುಷ್ಯನ ಜೀವನ ಹಾಗೂ ಅದರ ವೈಭವಾದಿಗಳು, ನಶ್ವರವೆಂಬುದನ್ನು ಸಾಂಕೇತಿಸುವ, ಕಾಮನಬಿಲ್ಲು (ಸುರಬಾವ) ಮಿಂಚಿನ ಬಳ್ಳಿ (ವಿದ್ಯಾಲ್ಲತೆ) ಮಂಜಿನ ಹನಿ ಇತ್ಯಾದಿ ರೂಪಕಗಳು, ಶ್ರವಣಬೆಳಗೊಳದ ಶಾಸನದಲ್ಲಿ ಯಾವಾಗ ರಮ್ಯವಾದ ಅಭಿವ್ಯಕ್ತಿಯನ್ನು ಪಡೆದುಕೊಂಡವೋ, ಆ ಅಭಿವ್ಯಕ್ತಿಯ ಸೊಗಸು ಮುಂದಿನ ಕನ್ನಡದ ಪ್ರಮುಖ ಕವಿಗಳಾದ ಶಿವಕೋಟ್ಯಾಚಾರ್ಯ, ಪಂಪ, ದುರ್ಗಸಿಂಹ ಮತ್ತು ಜನ್ನ ಇಂಥ ಕವಿಗಳ ಅಭಿವ್ಯಕ್ತಿಯಲ್ಲೂ ಅನುಕರಣನ ಗೊಂಡಿವೆಯೆಂಬುದನ್ನು ಗಮನಿಸಿದರೆ ಈ ಪ್ರಸ್ತುತ ಶಾಸನದಲ್ಲಿ ಸಾಹಿತ್ಯಕ ದೃಷ್ಟಿಯಿಂದ ಎಷ್ಟು ಮಹತ್ವಾಗಿದೆ ಎಂಬುದು ವಿಶೇಷ ಸಂಗತಿಯಾಗಿದೆ. ಹಾಗೂ ಶಾಸನಗಳು ಕನ್ನಡ ಸಾಹಿತ್ಯದ ತಲಕಾವೇರಿ ಎಂಬ ಮಾತನ್ನು ಇಂತಹ ಶಾಸನಗಳು ಸಮರ್ಥಿಸುತ್ತವೆ.

---

೨೦ ಆದಿಪುರಾಣ ೯-೫೭

೨೧ ದುರ್ಗಸಿಂಹ, ಪಂಚತಂತ್ರ; ಭೇದ ಪ್ರಕರಣಂ ಪದ್ಯ : ೧೧೬

೨೨ ಜನ್ನ : ಅನಂತನಾಥಪುರಾಣ ೯-೨೮

೨೩ ಕಾ.ವೆಂ. ರಾಘವಚಾರ್. ಅದೇ ೯-೨೯

ಇದರಿಂದಾಗಿ ಶ್ರವಣಬೆಳಗೊಳದ ಈ ಶಾಸನ ಪದ್ಯವನ್ನು ರಚಿಸಿದ ಕವಿಯಿಂದ ಶಿವಕೋಟ್ಯಾಚಾರ್ಯ, ಪಂಪ, ದುರ್ಗಸಿಂಹ, ಜನ್ನ ಸ್ಫೂರ್ತಿಗೊಂಡವರಂತೆ ಕಾಣುತ್ತದೆ. ಈ ಶಾಸನ ಕವಿಯೂ ಬೇರೆ ಸಾಹಿತ್ಯ ಕೃತಿಗಳನ್ನು ಬರೆದಿರುವ ಸಾಧ್ಯತೆಯಿದೆ. ಆದರೆ ಆ ಕೃತಿಗಳಾವೂ ಉಪಲಬ್ದವಾಗಿಲ್ಲ.

ಇಂತಹ ಶಾಸನ ಪದ್ಯಗಳು ಶ್ರವಣಬೆಳಗೊಳಬಲ್ಲಿ ೩೦ ರಿಂದ ೪೦ ಶಾಸನಗಳು ದೊರೆಯುತ್ತವೆ. ಇವು ಜೈನ ಧರ್ಮಕ್ಕೆ ಸಂಬಂಧಿಸಿದ್ದು ಜೈನ ಸಂನ್ಯಾಸಿಗಳ ಅಥವಾ ಸಂನ್ಯಾಸಿನಿಯರ ಶೀಲ, ತಪಸ್ಸು, ದೇಹತ್ಯಾಗ, ಸ್ವರ್ಗ ಸಂಪಾದನೆಗಳ ಉಜ್ವಲ ಚಿತ್ರಗಳನ್ನು ಜೈನಧರ್ಮ ಪರವಾದ ಪ್ರಶಸ್ತಿಗಳನ್ನು ಈ ಶಾಸನಗಳು ಒದಗಿಸುತ್ತವೆ. ಇವು ನಿಷಿಧಿ ಶಾಸನಗಳನ್ನುವುದು ಗಮನಾರ್ಹ. ಆದ್ದರಿಂದಲೇ ಡಾ॥ ಎಂ.ಎಂ. ಕಲಬುರ್ಗಿ ಅವರು "ನಿಷಿಧಿ ಶಾಸನಗಳನ್ನು ಕನ್ನಡ ನಾಡಿನ ಪ್ರಥಮ ಸಾಹಿತ್ಯ ಪಾಠಗಳೆಂದು ಕರೆಯಬಹುದು"[೨೪] ಎಂದು ಅಭಿಪ್ರಾಯಪಟ್ಟಿದ್ದಾರೆ.

ಜೈನಯತಿಗಳು, ಕಂತಿಯರು ಹಾಗೂ ಇನ್ನಿತರ ಭವ್ಯರು ಸಮಾಧಿಮರಣದಿಂದ ಮುಡಿಪಿದ ಸಂಗತಿಯನ್ನು ಚಿರಸ್ಥಾಯಿಗೊಳಿಸುವುದೇ ಇವುಗಳ ಮುಖ್ಯ ಉದ್ದೇಶ. ಸಮಾಧಿ ಮರಣದಿಂದ ಮುಡಿಪಿದವರು ಕಷ್ಟದಾಯಕವಾದ ಈ ಸಂಸಾರವನ್ನು ದಾಟಿ ಸಾಗರೋಪಮ ಆಯುಷ್ಯವುಳ್ಳ ಸ್ವರ್ಗ ಸುಖ ಪಡೆಯುವವರೆಂಬ ಸುಂದರವಾದ ಕಲ್ಪನೆ ಈ ಮರಣದ ಹಿಂದೆ ಇದೆ. ಆದುದರಿಂದ ಈ ರೀತಿಯ ವೃತ್ತ ಧಾರಣೆಯಲ್ಲಾಗಲಿ ಮರಣದಲ್ಲಾಗಲೀ ಯಾವುದೇ ರೀತಿಯ ಶೋಕ ಅಥವಾ ಕಳವಳಕ್ಕೆ ಎಡೆಯಿಲ್ಲ ಹಾಗೂ ಪದ್ಯಗಳಲ್ಲಿ ಸಂಸಾರ ನಿರಸನ, ತಪಸ್ಸು, ಸ್ವರ್ಗ ಸುಖದ ಬಯಕೆ ಮುಂತಾದ ವಿಷಯಗಳು ಪ್ರತಿಪಾದಿತವಾಗಿವೆ ಎಂದು ಡಾ॥ ಎಂ.ಬಿ. ನೇಗಿನ ಹಾಳ ಅಭಿಪ್ರಾಯ ಪಟ್ಟಿದ್ದಾರೆ.[೨೫]

ಅಲ್ಲದೆ ಈ ದೃಷ್ಟಿಯಿಂದ ಶ್ರವಣಬೆಳಗೊಳದ ಬೆಟ್ಟವೊಂದು ಚಿತ್ರಕೂಟ, ಒಂದೊಂದು ಶಾಸನವೂ ಪುಟ್ಟ ಭಾವಗೀತೆಯಾಗಿ, ಸೊಗಸಾದ ಉಪಮೆ, ರೂಪಕಗಳಿಂದ ಆಕರ್ಷಿಸಿವೆ. ಈ ಶಾಸನಗಳ ಕರ್ತೃಗಳಲ್ಲಿ ಕೆಲವರು ಶಾಸನ ಕರ್ತೃಗಳಾಗಿರುವುದು ಕಂಡು ಬರುತ್ತದೆ. ಈ ಶಾಸನ ಕರ್ತೃಗಳಲ್ಲಿ ಕೆಲವರು ಕಾವ್ಯ ಕರ್ತೃಗಳಾಗಿದ್ದರೂ ಇರಬಹುದೆಂದು ಊಹಿಸಲು ಅವಕಾಶವಿದೆ.

ಶ್ರವಣಬೆಳಗೊಳದಲ್ಲಿ ಬರುವ ಶಾಸನಗಳ ಒಟ್ಟಾರೆ ಮೌಲ್ಯವನ್ನು ನಿರ್ಧರಿಸುವುದಾದರೆ ಇಲ್ಲಿ ಸಾಮಾನ್ಯವಾಗಿ ಬರವಣಿಗೆಯಲ್ಲಿ ನಿಶ್ಚಿತತೆ ಇಲ್ಲದುದು. ಭಾಷೆ ಭಾವಕ್ಕೆ ಹೊಂದಿಕೊಂಡು ಕನ್ನಡದ ವೇಷ ಧರಿಸಲು ಪ್ರಯತ್ನಿಸುತ್ತಿರುವುದು, ಅವುಗಳ ಮಧ್ಯೆ ಸಂಸ್ಕೃತ ಪದಗಳು ಕನ್ನಡ ಪ್ರತ್ಯಯಗಳನ್ನು ಪಡೆದು ಹೆಚ್ಚಾಗಿ ಪ್ರಯೋಗವಾಗುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದ. ಅಲ್ಲದೆ ಅವೆಲ್ಲ ವಿಸ್ತಾರಕ್ಕಿಂತ ಸಂಕ್ಷೇಪದ ಕಡೆಗೆ, ವರ್ಣನೆಗಿಂತ ವಸ್ತುವಿನ ಎಡೆಗೆ ಹೆಚ್ಚು ಗಮನ ಕೊಟ್ಟಿರುವುದು ಕಂಡು ಬರುತ್ತದೆ[೨೬] ಎಂದು ಡಾ॥ ಬಿ.ವಿ. ಶಿರೂರ ಅಭಿಪ್ರಾಯ ಪಟ್ಟಿದ್ದಾರೆ.

---

೨೪ ಎಂ. ಎಂ. ಕಲಬುರ್ಗಿ, ಸಮಾಧಿ ಬಲಿದಾನ – ವೀರ ಮರಣ ಸ್ಮಾರಕಗಳು ಪುಟ : ೧೬

೨೫ ಡಾ॥ ಎಂ.ಬಿ. ನೇಗಿನಹಾಳ. ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ ಪುಟ – ೬೧

೨೬ ಡಾ॥ ಬಿ.ವಿ. ಶಿರೂರ, ಶ್ರವಣಬೆಳಗೋಳ : ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ ಮಹತ್ವ, ಪುಟ : ೧೭೧

ಕೆಲವು ಶಾಸನಗಳು ಮಳೆ, ಗಾಳಿ, ಬಿಸಿಲು, ಮುಂತಾದವುಗಳ ಏಟಿಗೆ ಸಿಕ್ಕಿ ಅಳಿಸಿ ಹೋಗಿವೆ ; ಮತ್ತೆ ಕೆಲವು ಅಷ್ಟಿಷ್ಟು ಮಟ್ಟಿಗೆ ಉಳಿದುಕೊಂಡು ಅಲ್ಲಲ್ಲಿ ಕಾವ್ಯಸೌಂದರ್ಯದ ಹನಿಗಳನ್ನು ಹೊತ್ತು ನಿಂತಿವೆ. ಇವುಗಳಲ್ಲಿ ಕೆಲವು ಪ್ರಮುಖ ಶಾಸನಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶಾಸನ ಸಂಖ್ಯೆ ೧೪ರ ಶಾಸನವು ಚರಿತ ಶ್ರೀ ಮುನಿಯು ಸಲ್ಲೇಖನ ವ್ರತವನ್ನು ಕೈಗೊಂಡುದರ ವಿವರವಿದೆ. ಇದರ ಕಾಲವು ಕ್ರಿ.ಶ. ೭ನೇ ಶತಮಾನವೆಂದು ಸಂಪುಟದಲ್ಲಿ ಹೇಳಿದ್ದಾರೆ. ಅದರ ಪಾಠ ಈ ರೀತಿಯಿದೆ.

ಶ್ರೀ ದುರಿತಾಭೂದ್ವೃಷ ಮಾನ್ಕೀವ್ರಿತ್ತಿಲಜಿ ಪೊದೆದ ಜ್ಞಾನ ಶೈಲೇಂದ್ರ ಮಾನ್ಪೋಟ್

ದುರಮಿ ಥ್ಯಾತ್ವ ಪ್ರಮಾಥಸ್ಥಿರ ತರನೃಪನಾನ್ಮೆಟ್ಟ ಗನ್ದೇಭಮಯ್ದಾನೆ

ಸುರವಿರ್ಯಾವಲ್ಲ ಚೇನ್ದಾಸ್ಸುರವರ ಮುನಿ ಭಿಸ್ತುತ್ಯ ಕಬ್ಬಿಪ್ಪಿನಾಮೇಲ್

ಚರಿತಶ್ರೀ ನಾಮಧೇಯ ಪ್ರಭು ಮುನಿಸ್ವ್ರತಗಳ್ನೋನ್ತು ಸೌಖ್ಯಸ್ಥನಾಯ್ದಾನ್[೨೭]

ಚರಿತ ಶ್ರೀ ಮುನಿಯು ಧುರಿತ (ಪಾಪ) ಎಂಬ ವೃಕ್ಷವನ್ನು ಕಿತ್ತು, ಅಜ್ಞಾನಪರ್ವತವನ್ನು ಭೇದಿಸಿ, ಮಿಥ್ಯಾತ್ವವೆಂಬ ದೊರೆಯನ್ನು ಸೀಳಿ, ಪಂಚೇಂದ್ರಿಯಗಳೆಂಬ ಮದ್ದಾನೆಗಳನ್ನು ಮೆಟ್ಟಿ, ಶ್ರವಣಬೆಳಗೊಳ (ಕವ್ವಿಪ್ಪು) ಬೆಟ್ಟದ ಮೇಲೆ ಸಲ್ಲೇಖನ ವ್ರತವನ್ನು ಆಚರಿಸಿ ಸಮಾಧಿ ಮರಣ ಪಡೆದು ಸುಖಿಯಾದ ವಿವರವನ್ನು ಕಾವ್ಯಾತ್ಮಕವಾಗಿ ವರ್ಣಿಸಲಾಗಿದೆ.

ಈ ಶಾಸನದಲ್ಲಿ ಕಾವ್ಯದ ಸೊಗಸು ಇದೆ. ಆದರೆ ಕ್ರಿಯಾಪದಗಳನ್ನು ಪ್ರತ್ಯಯಗಳನ್ನು ಬಿಟ್ಟರೆ ಉಳಿದುವೆಲ್ಲ ಸಂಸ್ಕೃತ ಶಬ್ದಗಳಾಗಿವೆ. ಶ್ರವಣಬೆಳಗೊಳದ ಶಾಸನಸಂಖ್ಯೆ ೧೫ನ್ನು ಗಮನಿಸಬಹುದು.

ಈ ಪದ್ಯದ ಶಾಸನ ಪಾಠ ಈ ರೀತಿಯಿದೆ.

ರಾಗ ದ್ವೇಷ ತಮೋಮಲಪ್ಯ ಪಗತುರ್ಶ್ಯುದ್ಧಾತ್ಮ ಸಾಯೋದ್ಧಕರ್

ವೇಗೂರಾ ಪರಮ ಪ್ರಭಾರಿಷಿಯರ್ಸ್ಸರ್ವ್ವಜ್ಞ ಭಟ್ಟಾರಕರ್

.... ಗಾದೇವ ...... ನ .... ಡಿತ .... ನ್ಸಬ್ಬು ...... ಲಗ್ರದೊಳ್

ಶ್ರೀ ಕಿರ್ಣ್ಣಾಮಲಪುಷ್ಪ .... ಸ್ವರ್ಗ್ಗಾಗ್ರಮಾನೇಱಿದಾರ್[೨೮]

ಈ ಶಾಸನವು ವೇಗೂರಿನ ಸರ್ವಜ್ಞ ಭಟ್ಟಾರಕರು ರಾಗ ದ್ವೇಷ ರಹಿತರೂ, ಶುದ್ಧಾತ್ಮರೂ ಆದ ಇವರು ಸ್ವರ್ಗಾಗ್ರವನ್ನೇರಿದುದನ್ನು ಶಾಸನದಲ್ಲಿ ಚಿತ್ರಿಸಲಾಗಿದೆ. ಆದರೆ ಈ ಶಾಸನ ಪಾಠವು ತೀರಾ ತ್ರುಟಿತವಾಗಿರುವುದರಿಂದ ಈ ಶಾಸನದ ಕಾವ್ಯ ಸೌಂದರ್ಯವನ್ನು ಸರಿಯಾಗಿ ತಿಳಿಯಲು ಸಾಧ್ಯವಾಗಿಲ್ಲ.

ಶಾಸನ ಸಂಖ್ಯೆ ೨೫, ಈ ಶಾಸನವು ೭ನೇ ಶತಮಾನಕ್ಕೆ ಸೇರಿದ್ದು ಶಾರ್ದೂಲ ವಿಕ್ರೀಡಿತ ವೃತ್ತದಿಂದ ಕೂಡಿದೆ. ಈ ಶಾಸನವು ಕಳಂತೂರ ಯತಿಯು ಸಲ್ಲೇಖನ ವ್ರತದಿಂದ ಸಮಾಧಿ ಮರಣ ಪಡೆದ ಸ್ಮಾರಕವಾಗಿದೆ.

---

೨೭ E.C. 02, ಶ್ರವಣಬೆಳಗೊಳ, ಶಾಸನಸಂಖ್ಯೆ : ೧೪, ಪುಟ . ೮

೨೮ E.C. 02, ಶಾಸನಸಂಖ್ಯೆ : ೧೫, ಪುಟ: ೮

ಶಾಸನ ಪಾಠ ಈ ರೀತಿಯಿದೆ.

ಬಾಳಾ ಮೇಲ್ಯಿಖಿ ಮೇಲೆ ಸರ್ಪದ ಮಹಾದನ್ತಾಗ್ರದುಳ್ಸಲ್ವವೊಲ್
ಸಾಲಾಮ್ಬಾಲತ ಪೋಗ್ರದಿನ್ತು ನಡದೊಂ ನೂಱೆಣ್ಬುಸಂವತ್ಸರಂ
ಕೇಳೊಯ್ಬಿನ್ಕಟವಪ್ರಶ್ಶೈಲ ಮಡಜ್ದೀನಮ್ಮಾ ಕಳನ್ತೂರನಂ
ಬಾಲೇ ಪೆರ್ಗ್ಗೂರವಂ ಸಮಾಧಿನೆಜಿದೊನ್ ನೋನ್ತೆಯ್ದಿ ದೊರ್ಸ್ಸಿದ್ಧಿಯಾನ್[೨೯]

ಕಟವಪು ಶೈಲವನ್ನೇರಿ, ಕತ್ತಿಯ ಮೇಲೆ, ಬೆಂಕಿಯ ಮೇಲೆ, ಸರ್ಪದ ದಾಡೆಯ ಮೇಲೆ ನಡೆದಂತೆ. ಇಂಥ ಘೋರವಾದ ವ್ರತವನ್ನು ಬಾಲ್ಯದಲ್ಲಿ ಕೈಗೊಂಡು 'ಪೆರ್ಗೊರವ' ಸಂನ್ಯಾಸಿ ನೂರ ಎಂಟು ವರ್ಷಗಳವರೆಗೆ ಇಂದ್ರಿಯ ನಿಗ್ರಹಮಾಡಿಕೊಂಡು ತಪ್ಪಸ್ಸನ್ನಾಚರಿಸುವುದು ಬಣ್ಣನೆಗೆ ನಿಲುಕದ ಮಾತು.

ಇಲ್ಲಿ ತಪಸ್ಸನ್ನು "ಹರಿತವಾದ ಖಡ್ಗದ ಮೇಲೆ, ಬೆಂಕಿಯ ಮೇಲೆ, ಹಾವಿನ ಹಲ್ಲಿನ ಮೇಲೆ ನಡೆದಷ್ಟು ಕಠಿಣ" ಎಂದು ಹೇಳಲಾಗಿದೆ. ಇಂಥ ಮಾತುಗಳನು ಕೇಳಿದಾಗ ಬಸವಣ್ಣನವರ "ಭಕ್ತಿಯೆಂಬುದ ಮಾಡಬಾರದಯ್ಯ, ಅದು ಹೋಗುತ್ತ ಕೊಯ್ವುದು. ಬರುತ್ತ ಕೊಯ್ವುದು" ಎಂದು ಹೇಳುವ ನುಡಿಗಳು ನೆನಪಿಗೆ ಬಾರದೆ ಇರದು. ತಪಸ್ಸಿನ ಉಗ್ರತೆ ಈ ವರ್ಣನೆಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಇಲ್ಲಿ ಕೊಡಲಾಗಿರುವ ಉಪಮೆ ಕಾವ್ಯದ ಬಾರದಿಂದ ಬಳಕುತ್ತಿದೆ. ಧ್ವನಿಯಿಂದ ತುಂಬಿ ತುಳುಕಾಡುತ್ತಿದೆ. ಇಂಥ ಕಠೋರ ತಪಸ್ಸನ್ನು ಕಳಂತೂರು ಮುನಿ ನೂರೆಂಟು ವರ್ಷ ಆಚರಿಸಿದನೆಂದು ಹೇಳುವಲ್ಲಿ ಅವನ ದಿಟ್ಟ ವ್ಯಕ್ತಿತ್ವದ ದರ್ಶನವಿದೆ.[೩೦]

೩೦ನೇ ಸಂಖ್ಯೆಯ ಶಾಸನವು ಕ್ರಿ.ಶ. ೭ನೇ ಶತಮಾನಕ್ಕೆ ಸೇರಿದ್ದು ಮಹಾಸೇನ ಋಷಿಯು ಕವ್ವಪ್ಪಿ (ಶ್ರವಣಬೆಳಗೊಳ)ನ ಬೆಟ್ಟದ ಮೇಲೆ ಸಿದ್ಧ ಸಮಯಾನುಸಾರವಾಗಿ ನೋಂತು, ಅತಿ ವೈಭವೋಪೇತವಾದ ಸ್ವರ್ಗವನ್ನು ಏರಿದ್ದನ್ನು ಕಾವ್ಯಮಯವಾಗಿ ಚಿತ್ರಿಸಲಾಗಿದೆ. ಈ ಪದ್ಯವು ಶಾರ್ದೂಲ ವಿಕ್ರೀಡಿತವೃತ್ತದಲ್ಲಿದೆ.
ಶಾಸನದ ಪಾಠ ಈ ರೀತಿಯಿದೆ.

ಮಾಸೇನಪ್ರ್ವರಮ ಪ್ರಭಾವರಿಷಿಯರ್ಕ್ಕ ದ್ವಿಪ್ಪಿನಾ ವೆಟ್ಟದೊಳ್
ಶ್ರೀ ಸಂಗಂಗಳ ಪೇೞ್ದ ಸಿದ್ದ ಸಮಯನ್ತಪಾದೆ ನೋೞ್ತಮ್ಬಿನಿನ್
ಪ್ರಾಸಾದಾನ್ತರ ಮಾನ್ವಿ ಚಿತ್ರ ಕನಕ ಪ್ರಜ್ವಲ್ಯದಿನ್ಮಿಕ್ಕುದಾನ್
ಸಾಸಿರ್ವ್ವ ರ್ವ್ವರ ಪೂಜೆದನ್ದುಯೆ ಅವರ್ಸ್ವರ್ಗ್ಗಾಗ್ರಮಾನೇಱಿದಾರ್[೩೧]

೩೪ನೇ ಸಂಖ್ಯೆಯ ಶಾಸನವು ೭ನೇ ಶತಮಾನಕ್ಕೆ ಸೇರಿದ್ದು ಮಲ್ಲಿಕಾಮಾಲೆ ವೃತ್ತದಲ್ಲಿದೆ. ಈ ಶಾಸನದಲ್ಲಿ ಶ್ರವಣಬೆಳಗೋಳವನ್ನು ಸುತ್ತಲೂ ಶಾಲಿವನ ವೃಕ್ಷಗಳಿಂದ ಆವೃತವಾದುದು. ಎಂದು ಬಣ್ಣಿಸಿರುವಲ್ಲಿ ಶಾಸನಕಾರನ ನೈಸರ್ಗಿಕ ಸೌಂದರ್ಯ ಪ್ರೀತಿ ಎದ್ದು ಕಾಣುತ್ತದೆ.

---

೨೯ E.C.02, ಶ್ರವಣಬೆಳಗೋಳ ಶಾಸನ ಸಂಖ್ಯೆ – ೨೫, ಪು : ೧೦ – ೧೧
೩೦ ಬಿ.ವಿ. ಶಿರೂರ, ಶ್ರವಣಬೆಳಗೊಳ : ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ ಮಹತ್ವ, ಪುಟ : ೧೭೦
೩೧ E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ : ೩೦, ಪು : ೧೨

ಶಾಸನ ಪಾಠ

ಶ್ರೀ ಭದ್ರ ಬಾಹುಸ ಚನ್ದ್ರಗುಪ್ತ ಮುನೀನ್ದ್ರಯುಗ್ಮ ದಿನೊಪ್ಪೆವಲ್
ಭದ್ರಮಾಗಿದ ಧರ್ಮ್ಮಮನ್ದುವಟಿಕ್ಕೆ ವನ್ದಿನಿ ಸಳ್ಳಲೋ
ವಿದ್ರು ಮಾಧರ ಶಾನ್ತಿಸೇನ ಮುನೀಶನಾಕ್ಕಿ ಎ ವೆಳ್ಗೊ(ಳ)
ಅದ್ರಿ ಮೇಲಶನಾದಿವಿಟ್ಟ ಪುನರ್ಭವಕ್ಕೆ ಜೆ ಆಗಿ[೩೨]

ಈ ಶಾಸನವನ್ನು ನೋಡಿದಾಗ ಎಂಥದೋ ಭಾಷೆಯನ್ನು ಕೇಳಿದಂತೆ, ಕನ್ನಡ ಭಾಷೆ ಸಾಹಿತ್ಯದ ರೂಪ ಹೊಂದುತ್ತಿರುವ ಸಂಸ್ಕೃತ ತಮಿಳುಗಳ ಊರುಗೋಲನ್ನು ಆಶ್ರಯಿಸಿದಂತೆ ಭಾಸವಾಗುತ್ತದೆ.[೩೩] ಎಂದು ಡಾ॥ ಬಿ. ವಿ. ಶಿರೂರ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಡಾ॥ ಶಿರೂರ ಅವರ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ ಏಕೆಂದರೆ ಪ್ರಸ್ತುತ ಶಾಸನದ ಕವಿಯು ಸಂಸ್ಕೃತ ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದವನಾದುದರಿಂದ ಸಂಸ್ಕೃತ ಭೂಯಿಷ್ಠವಾದ ಪೂರ್ವ ಹಳಗನ್ನಡದಲ್ಲಿ ಈ ಶಾಸನ ಪದ್ಯವನ್ನು ರಚಿಸಿದ್ದಾನೆ. ಆದ್ದರಿಂದ ಸಂಸ್ಕೃತ ತಮಿಳುಗಳ ಊರುಗೋಲನ್ನು ಆಶ್ರಯಿಸಿದಂತೆ ಎಂದು ಹೇಳುವುದು ಸರಿಯಾಗಲಾರದೆಂದು ಹೇಳಬಹುದು.

೩೭ನೇ ಸಂಖ್ಯೆಯ ಶಾಸನವು ಕ್ರಿ.ಶ. ೭ನೇ ಶ. ಕ್ಕೆ ಸೇರಿದ್ದು ರಥೋದ್ಧತ ವೃತ್ತದಲ್ಲಿದೆ ಶಾಸನ ಪಾಠ ಈ ರೀತಿಯಿದೆ.

ಶ್ರೀ ಋಷಭಸೇನ ಗುರವಡಿಗಳ ಶಿಷ್ಯರ್ ನಾಗಸೇನ ಗುರವಡಿಗಳ್
ಸನ್ಯಾಸನವಿಧಿ ಇನ್ತು ಮುಡಿಪುದಾರ್ ನಾಗಸೇನಮನಘಂ ಗುಣಾಧಿಕಂ
ನಾಗನಾಯಕ ಜತಾರಿಮಣ್ಡಲಂ ರಾಜಪೂಜ್ಯಮಮಲಶ್ರೀಯಾಮ್ಪದಂ
ಕಾಮದಂ ಹತಮದಂ ನಮಾಮ್ಯಹಂ.[೩೪]

ಈ ಶಾಸನವು ಋಷಭಸೇನ ಶಿಷ್ಯನಾದ ನಾಗಸೇನ ಗುರುವಡಿಗಳು ಸಮಾಧಿ ಮರಣ ಪಡೆದದನ್ನು ಸೊಗಸಾಗಿ ವರ್ಣಿಸಿದ್ದಾರೆ.

೮೬ನೇ ಸಂಖ್ಯೆಯ ಶಾಸನವು ೭ನೇ ಶ.ಕ್ಕೆ ಸೇರಿದ್ದು ಮತ್ತೇಭವಿಕ್ರೀಡಿತ ವೃತ್ತದಲ್ಲಿದೆ. ಆ ಶಾಸನದ ಪಾಠ ಈ ರೀತಿಯಿದೆ.

ನೆಱದಾದ ವ್ರತಶೀಲ ನೋನ್ಪಿಗುಣದಿಂದ ಸ್ವಾಧ್ಯಾಯಸಮ್ಪತ್ತಿನಿಮ್
ಕಱೆಇಲ್ಲಲ್ಲ ಪಧರ್ಮದಾ ಸಸಿಮತಿ ಶ್ರೀ ಗನ್ತಿಯರ್ವ್ವನ್ದು ಮೇಲ್
ಅಱಿದಾಯುಷ್ಯಮನೆನ್ತು ನೋಡೆನಗೆ ತಾನಿನ್ತೆನ್ದು ಕವ್ವಿಪ್ಪಿನುಳ್
ತೊಱದಾರಾಧನೆ ನೋನ್ತು ತೀರ್ತ್ಥಗಿರಿ ಮೇಲ್ಸವರ್ಗ್ಗಾಲಯಕ್ಕೇಱಿದಾರ್[೩೫]

೩೨ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ : ೩೪, ಪು : ೧೩
೩೩ ಡಾ॥ ಬಿ.ವಿ. ಶಿರೂರ, ಶ್ರವಣಬೆಳಗೊಳ : ರಾಜಕೀಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮಹತ್ವ, ಪುಟ : ೧೬೩
೩೪ E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ – ೩೭, ಪುಟ : ೧೪
೩೫ E.C. 02, ಶ್ರವಣಬೆಳಗೊಳ, ಶಾಸನಸಂಖ್ಯೆ – ೮೬, ಪು : ೬೭

ಸಸಿಮತಿ ಎಂಬ ಕಂತಿಯರು ವ್ರತ, ಶೀಲ, ನೋಂಪಿಗಳ ಗುಣಗಳಿಂದ ಸ್ವಾಧ್ಯಾಯ ಸಂಪತ್ತಿನಿಂದ ಕೂಡಿ ತಪಧರ್ಮವನ್ನು ಆಚರಿಸುತ್ತಿದ್ದು ಕವ್ವಿಪ್ಪಿನಲ್ಲಿ ಆರಾಧನಾ ವಿಧಿಯಿಂದ ನೋನ್ತು ತೀರ್ಥಗಿರಿಯ ಮೇಲೆ ಸ್ವರ್ಗಕ್ಕೆ ಹೋದರು. ಎಂಬುದನ್ನು ಕಾವ್ಯಮಯವಾಗಿ ವರ್ಣಿಸಲಾಗಿದೆ.

೯೪ನೇ ಸಂಖ್ಯೆ ಶಾಸನವೂ ಕೂಡ ೭ನೇ ಶತಮಾನಕ್ಕೆ ಸೇರಿದ್ದು, ಮಹಾಸ್ರಗ್ಧರೆ ವೃತ್ತದಲ್ಲಿ ರಚಿತವಾಗಿದೆ. ಚಂದ್ರದೇವಾಚಾರ್ಯ ಎಂಬ ಮುನಿಯು ವಿನಯಾಚಾರಪರನೂ ತಪೋಧಿಕನೂ ಆಗಿದ್ದನು. ತನ್ನ ವಿನಯಾಚಾರಪರತೆಯಿಂದ, ಶ್ರವಣಬೆಳಗೊಳದ ಬೆಟ್ಟದಲ್ಲಿ ಸಾಧುಗಳು ಪಡೆಯುವ ಪೂಜ್ಯವಾದ 'ಶಿವನಿಲೆ'ಯನ್ನು ಪಡೆದುದನ್ನು ಚಿತ್ರಿಸಲಾಗಿದೆ.

ಇಲ್ಲಿ ಕುತೂಹಲಕಾರಿಯಾದ ವಿಷಯವೆಂದರೆ ಜೈನ ನಿಸಿದಿ ಶಾಸನವೊಂದರಲ್ಲಿ 'ಶಿವನಿಲೆ' ಎಂಬ ಮಾತು ಮುದ್ರೆ ಸ್ಥಾನವೆಂಬರ್ಥದಲ್ಲಿ ಬಂದಿದೆ. ಇದು ಹೇಗಿದ್ದೂ ಆಚಾರ್ಯನ ಕೀರ್ತಿಯನ್ನು ಹೇಳುವಾಗ ಬರೆಹಗಾರ ಕವಿ ಮನೋಭಾವ ತೋರಿದ್ದಾನೆ.[೩೬]

ಶಾಸನ ಪಾಠ ಈ ರೀತಿ ಇದೆ.

ಸ್ವಸ್ತಿಶ್ರೀ ಅನವದ್ಯನ್ನದಿರಾಷ್ಟ್ರದುಳ್ಳೆ ಪ್ರಥಿತಯಶೋ (ಕು) ನ್ದಕಾವ್ವನ್ದು ಸೈಲಾಮ್
ವಿನಯಾಚಾರ ಪ್ರಭಾವನ್ತಪದಿನ್ನಧಿಕನ್ಚಂದ್ರ ದೇವಾಚಾರ್ಯ ನಾಮನ್
ಉದಿತ ಶ್ರೀ ಕವ್ವಿಪುನುಳ್ಳ ರಿಷಿಗಿರಿಶಿಲೆ ಮೇಲ್ನೋಮ್ತು ತನ್ದೇಹ ಮಿಕ್ಕಿ
ನಿರವಧ್ಯನ್ನೇಜಿಸ್ವರ್ಗಂ ಶಿವನಿಲೆ ಪಡೆದಾನ್ಸಾಧುಗಳ್ಪೂಜ್ಯಮಾನನ್[೩೭]

ಶಾಸನ ಸಂಖ್ಯೆ ೧೦೮, ಇದು ಕೂಡ ೭ನೇ ಶತಮಾನಕ್ಕೆ ಸೇರಿದೆ.

ಶಾಸನದ ಪಾಠ ಈ ಕೆಳಗಿನಂತಿದೆ.

ಎಡೆಪಜಿಗೀನಡೆ ಕೆಯ್ದು ತಪಂ ಸಯ್ಯಮಮಾನ್ಕೊಳತ್ತೂರ ಸಂಘ.....
ವಡೆ ಕೊಜಿದಿನ್ತು ವಾವ್ವಿದರಿ ದಿನ್ನೆನಗೆನ್ದು ಸಮಾಧಿಕೂಡಿವ
ಎಡೆವಿಡಿಯಲ್ಕವಡಿಂ ಕಟವಪ್ರವ ಮೇಜಿಯೆಲ ನಿಲ್ಲದನನ್ದನ್
ಪಡೆಗಮೊವೆಪ್ಪ...... ನ್ದೀ ಸುರಲೋಕಮಹಾ ವಿಭವಸ್ಥನ ನಾದಮ್[೩೮]

ಈ ಶಾಸನದಲ್ಲಿ ಕೊಳತ್ತೂರು ಸಂಘದ ಯತಿಯೊಬ್ಬ ಶ್ರವಣ ಬೆಳಗೊಳದ ಚಿಕ್ಕ ಬೆಟ್ಟದ ಮೇಲೆ ಸಮಾಧಿ ಮರಣ ಪಡೆದುದನ್ನು ವಿವರಿಸಲಾಗಿದೆ. ಆ ವ್ಯಕ್ತಿಯ ಹೆಸರು ಇಲ್ಲಿ ಕಂಡು ಬಂದಿಲ್ಲ.

---

೩೬ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ – ೦೨, ಪುಟ : ೪೬೨, ಮೈಸೂರು ವಿಶ್ವವಿದ್ಯಾನಿಲಯ
೩೭ E.C. 02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೯೪, ಪುಟ : ೬೯
೩೮ E.C. 02, ಶ್ರವಣಬೆಳಗೊಳ, ಶಾಸನಸಂಖ್ಯೆ : ೧೦೮ ಪುಟ : ೭೨

೧೧೨ನೇ ಸಂಖ್ಯೆ ಶಾಸನವು ೭ನೇ ಶತಮಾನವಾಗಿದ್ದು. ಮತ್ತೇಭವಿಕ್ರೀಡಿತ ವೃತ್ತದಲ್ಲಿದೆ. ಈ ಶಾಸನದಲ್ಲಿ ನವಿಲೂರು ಶ್ರೀ ಸಂಘದ ರಾಜ್ಞೀಮತಿ ಎಂಬ ಕಂತಿಯ ಸಮಾಧಿ ಮರಣದ ವರ್ಣನೆಯನ್ನು ಮಾಡಲಾಗಿದೆ.

ಶಾಸನ ಪಾಠ ಈ ರೀತಿಯಿದೆ

ನವಿಲೂರಾ ಸಿರಿಸಘದಾಜಿಗಣದಾ ರಾಜ್ಞೀ ಮತೀ ಗನ್ತಿಯಾರ್
ಅಮಲಂ ನಲ್ತದ ಶೀಲದಿಂ ಗುಣದಿನಾಮಿ ಕ್ಕೋತ್ತಮಮ್ಮೀರ್ಳೆದೊರ್
ನಮಗಿನ್ನೊಟ್ಟಿತ್ತೆದು ಯೆಷ್ಣು ಏಜೆ ಗಿರಿಯಾನ್ಸನ್ಯಾಸನಂ ಯೋಗದೊಳ್
ನಮೊಚಿನ್ತಯ್ಯು ಶೆಮಸ್ತ್ರ ಮಣ್ಮಜಿ ಎಸ್ವರ್ಗಾಲಯಂ ಏವಿದಾರ್[೩೯]

೧೧೩ನೇ ಸಂಖ್ಯೆಯ ಶಾಸನವು ೭ನೇ ಶ. ಕ್ಕೆ ಸೇರಿದ್ದು. ಮತ್ತೇಭ ವಿಕ್ರೀಡಿತ ವೃತ್ತದಲ್ಲಿದೆ. ಈ ಶಾಸನದಲ್ಲಿ ಅನಂತಮತಿಗಂತಿ, ದ್ವಾದಶವಿಧ ತಪಸ್ಸಿನಿಂದ ಶ್ರವಣಬೆಳಗೊಳದ ಬೆಟ್ಟದ ಮೇಲೆ ಉಪಮಾತೀತ ಸುರಲೋಕ ಸೌಖ್ಯವನ್ನು ಪಡೆದಳೆಂದು ವರ್ಣಿಸಲಾಗಿದೆ.

ಆ ಶಾಸನ ಪಾಠ ಈ ರೀತಿಯಿದೆ.

ಶ್ರೀ ತಪಮಾನ್ದ್ವಾದಶದಾ ವಿಧಾನ ಮುಖದಿನ್ನೆಯ್ದೆನ್ದುತಾ ಧಾತ್ರಿಯೇಲ್
ಚಪಲಿಲ್ಲಾ ನವಿಲೂರ ಸಂಘದ ಮಹಾನನ್ತಾ ಮತೀಗನ್ತಿಯಾರ್
ವಿಪುಲ ಶ್ರೀ ಕಟವಪ್ರನಲ್ಲಿರಿಯ ಮೇಲ್ನೋನ್ತೊಂದು ಸನ್ಮಾರ್ಗ್ಗದಿನ್
ಉಪಮೀಲ್ಯಾ ಸುರಲೋಕ ಸೌಖ್ಯ ದೆಡೆಯಾನ್ತಾ ಮೆಯ್ದಿ ಇಪ್ಪಾಳ್ ಮನಮ್[೪೦]

೧೨೦ನೇ ಸಂಖ್ಯೆಯ ಶಾಸನವು ವಸಂತ ತಿಲಕ ವೃತ್ತವಾಗಿದ್ದು, ಈ ವೃತ್ತವು ಅಸಮಗ್ರ ರೂಪದಲ್ಲಿದೆ.

ಶಾಸನ ಪಾಠ ಈ ರೀತಿಯಿದೆ.

ಶ್ರೀ ಅಚ್ಚಾದಿ ನಾಮನನೇಕಂ ಗುಣಕೀರ್ತ್ತಿದೇನ್ತಾನ್
ತುಂಗೋಚ್ಚ ಭಕ್ತಿ ವಶದಿನ್ತೊಜದಿಲ್ಲಿ ದೇಹಮ್
ಮೊಚ್ಗೊಳ್ವಿ ಚಿತ್ರಗಿರಿ ಕೂಟಮಯಂ ಕುಚೇಲಮ್[೪೧]

ಈ ಶಾಸನವು ಗುಣಕೀರ್ತಿ ಎಂಬ ಮುನಿಯು ಶ್ರವಣಬೆಳಗೊಳದ ಬೆಟ್ಟದ ಮೇಲೆ ಸಮಾಧಿ ಮರಣ ಪಡೆದಂತೆ ಕಾಣುತ್ತದೆ.

---

೩೯ E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ : ೧೧೨, ಪುಟ : ೭೩
೪೦ E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ : ೧೧೬. ಪುಟ – ೭೪
೪೧. E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ : ೧೨೦, ಪುಟ – ೭೫

೧೨೧ ಸಂಖ್ಯೆ ಶಾಸನವು ೭ನೇ ಶ. ಕ್ಕೆ ಸೇರಿದ್ದು. ಮತ್ತೇಭ ವಿಕ್ರೀಡಿತವೃತ್ತದಲ್ಲಿದೆ.
ಶಾಸನ ಪಾಠ ಈ ರೀತಿಯಿದೆ

ನವಿಲೂರಾ ಶ್ರೀ ಸಂಘದುಳ್ಳೆ ಗುರವರಿ ನಮ್ಮೌನಿ ಯಾಚಾರಿಯರ್
ಅವರಾ ಶಿಷ್ಯರ ನಿನ್ದಿತಾಗ್ಗುಣಮಿ....... ವೃಷಭವಸ್ದೀಮುನೀ
ಭವವಿಜ್ಜೈನ ಸುಮಾರ್ಗ್ಗ ದುಳ್ಳೆ ನಡದೊಂದಾರಾಧನಾ ಯೋಗದಿನ್
ಅವರುಂ ಸಾಧಿಸಿ ಸ್ವರ್ಗ್ಗಲೋಕ ಸುಖಚಿತ್ತಂ........ ಮಾದಿಗಳ್[೪೨]

ಈ ಶಾಸನವು ನವಿಲೂರು ಸಂಘದ ಮೌನಿ ಆಚಾರ್ಯರ ಶಿಷ್ಯನಾದ ವೃಷಭ ನಂದಿಯು ಸಮಾಧಿ ಮರಣ ಪಡೆದುದನ್ನು ವರ್ಣಿಸಲಾಗಿದೆ.

೧೨೩ನೇ ಸಂಖ್ಯೆಯ ಶಾಸನವು ೭ನೇ ಶ.ಕ್ಕೆ ಸೇರಿದ್ದು ಚಂಪಕಮಾಲೆ ವೃತ್ತದಲ್ಲಿದೆ.
ಶಾಸನ ಪಾಠ ಈ ರೀತಿಯಿದೆ

ಅನವರತ್ತನ್ನಾಳಮ್ಪಿ ಭೃತಸಯ್ಯಮಮೆನ್ತೆ ವಿಚ್ಛೆಯಂ
ವನದೊಳ್.......
ಮನವ ಮಿಕ್ಕುತ.......
ಅನುಪಮ ದಿವ್ಯಪ್ಪದು ಸುರ ಲೋಕದ ಮಾರ್ಗದೊಳಿವ್ದಿರಿನ್ಬಿನಿಮ್[೪೩]

ಈ ಶಾಸನವು ಮಯೂರ ಗ್ರಾಮದ ಸೌಂದರ್ಯ ಆಚಾರ್ಯರು ಕಟವಪ್ರಗಿರಿ (ಶ್ರವಣ ಬೆಳಗೊಳ) ಮೇಲೆ ಸಮಾಧಿ ಮರಣವನ್ನು ಪಡೆದುದನ್ನು ವರ್ಣಿಸಲಾಗಿದೆ. ಉಳಿದ ವಿವರವು ತ್ರುಟಿತವಾಗಿದೆ.

೧೩೦ನೇ ಸಂಖ್ಯೆಯ ಶಾಸನವು ಮಂಗಲ ಮಂಗನಾ ವೃತ್ತವಾಗಿದೆ.

ತನಗೆ ಮೃತ್ಯುಪರವಾನಱಿದೆನ್ದು ಸುಪಣ್ಡಿತನ್
ಅನೇಕ ಶೀಲ ಗುಣಮಾಲೆಗಳಿನ್ನಗಿದೊಪ್ಪಿದೊನ್
ವಿನಯದೇವ ಸೇನ ನಾಮಮಹಾಮುನಿ ನೋನ್ತು ಪಿನ್
ಇನದಜಿಮ್ದಿ ಪಳಿತಙ್ಕದೆ ತಾನ್ದಿವ ಮೇಜಿರಾನ್[೪೪]

ವಿನಯ ದೇವಸೇನ ಎಂಬ ಮುನಿಯು ಪರ್ಯಂಕಾಸನ (ಪಳಿತಂಕ) ದಲ್ಲಿ ಕುಳಿತು ಸಲ್ಲೇಖನ ವ್ರತವನ್ನು ಆಚರಿಸಿ ಸಮಾಧಿ ಮರಣಪಡೆದುದನ್ನು ವಿವರಿಸಲಾಗಿದೆ. ಆತನು ಒಳ್ಳೆಯ ಪಂಡಿತನಾಗಿದ್ದನೆಂದು ಸಹ ಶಾಸನದಲ್ಲಿ ವಿವರಿಸಲಾಗಿದೆ.

---

೪೨ E.C. 02, ಶ್ರವಣಬೆಳಗೊಳ, ಶಾಸನಸಂಖ್ಯೆ – ೧೨೧, ಪು : ೭೫
೪೩. E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ ೧೨೩, ಪುಟ – ೭೬.
೪೪. E.C. 02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩೦, ಪುಟ : ೭೭

೧೩೨ನೇ ಸಂಖ್ಯೆಯ ಶಾಸನವು ೭ನೇ ಶತಮಾನಕ್ಕೆ ಸೇರಿದ್ದು ಈ ಶಾಸನದಲ್ಲಿ ಒಂದು ವಂಶಸ್ಥ ವೃತ್ತ, ಒಂದು ಶ್ಲೋಕವಿದೆ. ವಂಶಸ್ಥ ವೃತ್ತವು ತ್ರುಟಿತವಾಗಿದೆ.

ಶ್ರೀ ಶುಭಾನ್ವಿತ ಶ್ರೀನಮಿಲೂರ ಸಂಘದಾ ಪ್ರಭಾವತೀ........
ಪ್ರಭಾಖ್ಯಮೀಪರ್ವ್ವತ ದುಳ್ಳೆ ನೋನ್ತು ತಾಮ್
ಸ್ವಭಾವ ಸಾನ್ದರ್ಯ್ಯಕ ರಾಜ್ಗರಾಧಿಪರ್[೪೫]

ಈ ಶಾಸನವು ನವಿಲೂರ ಸಂಘದ ಪ್ರಭಾವತೀ ಎಂಬ ಕಂತಿಯು ಕಟವಪ್ರಗಿರಿ (ಶ್ರವಣಬೆಳಗೊಳದ ಬೆಟ್ಟ)ದ ಮೇಲೆ ಸಮಾಧಿ ಮರಣ ಪಡೆದುದನ್ನು ವರ್ಣಿಸಲಾಗಿದೆ.

೧೩೪ನೇ ಸಂಖ್ಯೆಯ ಶಾಸನವು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿದ್ದು ಶ್ರೀಗಂಧ ಮತ್ತು ಗಂಧವರ್ಮ ಎಂದು ಉಲ್ಲೇಖವಿದೆ. ೯೦ನೇ ನಂಬರಿನ ಶಾಸನವೂ ಕೂಡ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ಲಭ್ಯವಿಲ್ಲ. ಒಟ್ಟಿನಲ್ಲಿ ಇವೆರಡೂ ಶಾಸನಗಳು ಸಾಹಿತ್ಯಕ ಅಂಶದಿಂದ ಕೂಡಿದೆ.

೮೯ನೇ ನಂಬರಿನ ಶಾಸನವು ೮ನೇ ಶತಮಾನಕ್ಕೆ ಸೇರಿದ್ದಾಗಿದ್ದು ಉತ್ಪಲಮಾಲೆ ವೃತ್ತದಲ್ಲಿ ರಚನೆಯಾಗಿದೆ. ಶಾಸನ ಪಾಠ ಈ ರೀತಿಯಿದೆ.

ಸುನ್ದರಪೆಮ್ಪುದುಗ್ರ ತಪದೋಗಿದ....... ವಾರ್ದ್ಧದ ನಿನ್ದ್ಯಮನ್ನುಪಿನ್
ಬನ್ದನು ರಾಗವಿನ್ದು ಬಲಗೊಣ್ಡು ಮಹೋತ್ಸವ ದೇಟಿಶೈಲಮಾನ್
ಸುನ್ದರಿ ಸೌಂಚದಾರ್ಯ್ಯದೆ ವಿದೆ.. ದು ವಿಯಾನ ಮೊಡಿಪ್ಪಿ ಚಿತ್ತದಿಮ್
ಇನ್ದ್ರ ಸಮಾನಮಪು ಸುಖ.... ಣ್ದದೆ.. ಕ್ಷಣದೆಯ್ದಿ ಸ್ವರ್ಗ್ಗವಾ[೪೬]

ಈ ಶಾಸನವು ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ದೊರೆಯುತ್ತಿಲ್ಲ. ಜೈನಯತಿ ಸಲ್ಲೇಖನ ವೃತ್ತದಿಂದ ಸಮಾಧಿಮರಣ ಪಡೆದನೆಂದು ತಿಳಿದುಬರುತ್ತದೆ.

ಶ್ರವಣಬೆಳಗೊಳದ ಶಾಸನಗಳಲ್ಲಿ ೬ಮತ್ತು ೮ನೇ ಶತಮಾನಕ್ಕಿಂತ ೭ನೇ ಶತಮಾನಕ್ಕೆ ಸೇರಿದ ಶಾಸನಗಳೇ ಹೆಚ್ಚು ಎಂಬುದು ಗಮನಾರ್ಹ ಶ್ರವಣಬೆಳಗೊಳದ ಕೆಲವು ಶಾಸನ ಪದ್ಯಗಳಲ್ಲಿ ಕೆಲವು ಕಡೆ ಕಂಡು ಬರುವ, ಬಾಲೇ ಮುಂತಾದ ಸಂಬೋಧನ ಶಬ್ದಗಳು ಕುತೂಹಲ, ಆಶ್ಚರ್ಯಗಳನ್ನುಂಟು ಮಾಡುತ್ತವೆ. ಇದು ಸಾಮಾನ್ಯವಾಗಿ 'ಛಂದೋಬುದಿ' ಯಂತಹ ಶಾಸ್ತ್ರಕೃತಿಗಳಲ್ಲಿ ಕಂಡು ಬರುವ ರೀತಿ. ಪದ್ಯಗಳಿಗೆ ಒಂದು ರೀತಿಯ ನಾಟಕೀಯತೆಯುಂಟಾಗಿ. ಕಾವ್ಯಾತ್ಮಕ ಪರಿಸರ ಸೃಷ್ಟಿಯಾಗಲು ಈ ಸಂಬೋಧನೆಗಳೂ ನೆರವಾಗುತ್ತವೆ ಎನ್ನಬಹುದು.

---

೪೫ E.C. 02, ಶ್ರವಣಬೆಳಗೊಳ, ಶಾಸನಸಂಖ್ಯೆ – ೧೩೨, ಪು : ೭೮
೪೬ E.C. 02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೮೯, ಪುಟ : ೬೮

ಅನೇಕ ಪದ್ಯಗಳ ಅಂತ್ಯದಲ್ಲಿ ಬರುವ 'ಸ್ವರ್ಗಾಲಯಕ್ಕೇಜಿದಾರ್', 'ಸ್ವರ್ಗಾಗ್ರಮಾನೇಜಿದಾರ್', 'ದೇವಲೋಕಕ್ಕೆ ಸಂದಾನ್' ಎಂಬಂತಹ ವಾಕ್ಯಗಳನ್ನು ಲಕ್ಷಿಸಬಹುದು. ಇವುಗಳಲ್ಲಿರುವ ದೀರ್ಘಯುಕ್ತವಾದ ಪ್ರತ್ಯಯಗಳು ಪೂರ್ವದ ಹಳಗನ್ನಡದ ಲಕ್ಷಣ, ನಿಜ. ಆದರೆ ಸ್ವರ್ಗದ ಎತ್ತರವನ್ನೂ ಅಲ್ಲಿಗೇರುವಿಕೆಯ ದೀರ್ಘ ಕ್ರಿಯೆಯನ್ನೂ 'ಏಜಿದಾರ್' ಸ್ವರ್ಗಾಗ್ರಯಾನ್, ಸಂದಾನ್ ಎಂಬ ಮಾತುಗಳು ಅಭಿನಯಿಸಿ ತೋರುವುದರಿಂದ ಸಾರ್ಥಕವಾಗಿದೆಯೆನಿಸುತ್ತದೆ.

ಶ್ರವಣಬೆಳಗೊಳದ ಶಾಸನ ಪದ್ಯಗಳನ್ನು ಕಟ್ಟಿದವರು ಪ್ರೌಢಕವಿಗಳಾಗಿರಬೇಕೆಂದೂ "ಇವೊಂದೊಂದು ಪದ್ಯವನ್ನು ಮಾತ್ರವಲ್ಲ, ಅದರಂತೆಯೇ ಕನ್ನಡ ಕಾವ್ಯಗಳನ್ನು ರಚಿಸಿರಬೇಕೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ" ಎಂದು ಗೋವಿಂದ ಪೈಗಳು ಅಭಿಪ್ರಾಯಿಸಿದ್ದಾರೆ.[೪೭] ಆದರೆ "ಇವುಗಳ ರಚರಕು ಚೀರ ಕನ್ನಡ ಕಾವ್ಯಗಳನ್ನು ರಚಿಸಿರಬೇಕೆಂದು ನಿರ್ಧರಿಸುವಷ್ಟು ಕಾವ್ಯ ಗುಣವು ಪ್ರಕರ್ಷದಲ್ಲಿ ಕಂಡು ಬರುವುದಿಲ್ಲ" ಎಂದು ರಂ.ಶ್ರೀ. ಮುಗಳಿಯವರು ಅಭಿಪ್ರಾಯಪಟ್ಟಿದ್ದಾರೆ.[೪೮]

ಶ್ರವಣಬೆಳಗೊಳದ ಈ ಪದ್ಯಮಯ ಶಾಸನಗಳಲ್ಲಿ ಒಂದು ಅಂಶವನ್ನು ಗಮನಿಸಬೇಕು. ಅವುಗಳಲ್ಲಿ ಜೈನಧರ್ಮ ಪರವಾದ ಪ್ರಶಸ್ತಿ ಶಾಸನಗಳು. ಪ್ರಾಕೃತ ಭಾಷೆಯಲ್ಲಿ ಈ ವೇಳೆಗೆ ಜೈನ ಸಾಹಿತ್ಯ ಕೃತಿಗಳೂ ಬಹು ಸಂಖ್ಯೆಯಲ್ಲಿ ರಚಿತವಾಗಿದ್ದುವು ಎಂಬುದನ್ನು ನೆನೆಯಬೇಕು. ಈ ಕೃತಿಗಳನ್ನು ಆ ಭಾಷೆಯಲ್ಲಿ ರಚಿಸಿದ ಆ ಕವಿಗಳೇ ಈ ನಿಸಿದಿಗಲ್ಲುಗಳು ಸ್ಮಾರಕ ಶಿಲೆಗಳ ಮೇಲಿನ ಶಾಸನಗಳನ್ನು ರಚಿಸಿರಬೇಕು. ಸಾಹಿತ್ಯ ಕೃತಿಗಳು ಎಲ್ಲ ಜನರಿಗಾಗಿ ರಚಿತವಾದುವುಗಳಲ್ಲ. ಆದರೆ ಈ ಶಾಸನಗಳು ಜನಸಾಮಾನ್ಯರನ್ನು ಆಕರ್ಷಿಸಬೇಕು. ಆ ಯತಿಯ, ಜಿನಭಕ್ತರ ಹಿರಿಮೆ ಸರ್ವರಿಗೂ ತಿಳಿಯಬೇಕು. ಇದು ಪ್ರಚಲಿತ ಆಡುಮಾತಿನಲ್ಲಿ ತಿಳಿಸಿದಾಗದಷ್ಟೇ ಸಾಧ್ಯ. ಎಂತಲೇ ಅದೇ ಕವಿಗಳು ಈ ಬಿಡಿ ಪದ್ಯಗಳನ್ನು ರಚಿಸಿದರು. ರಚನಾಶಕ್ತಿ ಅವರಿಗೆ ಆ ವೇಳೆಗೆ ಮೈಗೂಡಿತಾದ್ದರಿಂದ ಕಷ್ಟವಾಗಲಿಲ್ಲ. ಭಾಷೆ ಮಾತ್ರ ಬೇರೆಯಾಗಿತ್ತು. ಆದ್ದರಿಂದ ಸಾಹಿತ್ಯ ದೃಷ್ಟಿಯಿಂದ ಪ್ರಮುಖವಾದ ಈ ಶಾಸನಗಳೂ ಜೈನಕವಿಗಳದ್ದೇ ಎಂಬ ಊಹೆಯುಕ್ತವಾಗಿದೆ. ಇವುಗಳನ್ನು ಕಳೆದರೆ ಉಳಿದವು ಸಂಖ್ಯೆಯಲ್ಲಿ ತೀರಕಡಿಮೆ. ಬಹುಶಃ ಇವು ಆ ಇತರ ತುಣುಕುಗಳ ರಚನೆ ಪ್ರೇರಕವಾಗಬಹುದು. ಇವುಗಳು ಸಹ ವ್ಯಕ್ತಿ ಪ್ರಶಂಸೆಯ ಶಾಸನಗಳೆಂಬುದು ನಿಜ.[೪೯]

ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ (ಕ್ರಿ.ಶ. ೭೦೦)

ಸಾಹಿತ್ಯದ ದೃಷ್ಟಿಯಿಂದ ಮಹತ್ವದ ಶಾಸನವಾದ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನವು ಕ್ರಿ.ಶ. ೭೦೦ರ ಕಾಲದ್ದಾಗಿದೆ. ಈ ಶಾಸನದಲ್ಲಿ ಭಾವ, ಭಾಷೆಗಳ ವಿದ್ಯದಾಲಿಂಗನದಿಂದ ಉದಿಸಿರುವ ಈ ಸುಂದರ ಭಾವಗೀತೆ 'ಕಲಿಯುಗ ವಿಪರೀತನ್' ಎಂಬ ಬಿರುದಿನಿಂದ ಬಾಳಿದ ಬಾದಾಮಿಯ ಕನ್ನಡ ಕಲಿ

೪೭ ಗೋವಿಂದಪೈ ಪೂರ್ವೋಕ್ತ ಪುಟ – ೧೨೭
೪೮ ರಂ.ಶ್ರೀ. ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ ಪುಟ ೦೯
೪೯ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ – ೦೨, ಪುಟ – ೪೬೩–೬೪, ಮೈಸೂರು ವಿಶ್ವವಿದ್ಯಾನಿಲಯ

ಕಪ್ಪೆಅರಭಟ್ಟನ ಗುಣ, ಸ್ವಭಾವ, ಶೌರ್ಯ, ಪರಾಕ್ರಮಗಳನ್ನು ಕುರಿತ ವೀರಗೀತೆ. ಸಾಹಿತ್ಯಕ ದೃಷ್ಟಿಯಿಂದ ಮಾತ್ರವಲ್ಲದೆ ಛಂದಸ್ಸಿನ ದೃಷ್ಟಿಯಿಂದಲೂ ಮಹತ್ವ ನಾಲ್ಕು ತ್ರಿಪದಿಗಳು ದೊರೆತಿವೆ.

ಶಾಸನ ಪಾಠ ಈ ರೀತಿಯಿದೆ

ಕಪ್ಪೆ ಅರಭಟ್ಟನ್ ಶಿಷ್ಟ ಜನ ಪ್ರಿಯನ್
ಕಷ್ಟ ಜನ ವರ್ಜಿತನ್ ಕಲಿಯುಗ ವಿಪರೀತನ್
ವರನ್ತೇಜಸ್ವಿನ್ನೋ ಮೃತ್ಯುರ್ನತು ಮಾನಾ
ವಖಣ್ಡನಮ್ ಮೃತ್ಯುಸ್ತತ್ಷಣಿಕೋ
ದುಃಖಮ್ಮಾನ ಭಂಗನ್ದಿನೇದಿನೇ
ಸಾಧುಗೆ ಸಾಧು ಮಾಧತಾರನಂಗೆ ಧೂರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವ ನೀತನ್ ಪೆಱನಲ್ಲ.
ಒಳ್ಳಿತ್ತ ಕೆಯ್ವೊರಾರ್ಪೊರ್ಲ್ಲದು ಮದಱಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂದಿ ಕ್ಕುಮದು ಬಂದು
ಕಟ್ಟಿದ ಸಿಂಗಮನ್ ಕೆಟ್ಟೆಡೇನೆಮಗೆಂದು
ಬಿಟ್ಟವೊಲ್ಕುಲಿಗೆ ವಿಪರೀತಂಗ ಹಿತರ್ಕಳ್
ಕೆಟ್ಟರ್ ಮೇಣ್ ಸತ್ತರ ವಿಚಾರಮ್[೫೦]

ಈ ಶಾಸನದ ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು. ಕಪ್ಪೆ ಅರಭಟ್ಟನು ಒಳ್ಳೆಯ ಜನರಿಗೆ ಬೇಕಾದವನು. ಕೆಟ್ಟಜನರಿಗೆ ಬೇಡವಾದವನು, ಕಲಿಯುಗ ವಿಪರೀತನೆಂದು ಪ್ರಸಿದ್ಧನಾದವನು.

ತೇಜಸ್ವಿಯಾದವನಿಗೆ ಸಾಯುವುದು ಒಳ್ಳೆಯದು, ಆದರೆ ಮಾನಭಂಗವಲ್ಲ. ಸಾವಿನ ದುಃಖ ಈ ಕ್ಷಣದ್ದು, ಮಾನಭಂಗದ ದುಃಖ ನಿರಂತರವಾದದ್ದು. ಸಾಧುವಾದವನಿಗೆ ತಾನೂ ಸಾಧುವಾದವನು, ತೊಂದರೆ ಕೊಡುವಂತಹ ಶೂರನಿಗೆ ಕಲಿಯುಗ ವಿಪರೀತ ನೆನಿಸಿದ ಈತನು ಸಾಕ್ಷಾತ್ ವಿಷ್ಣುವಲ್ಲದೆ ಬೇರೆಯಲ್ಲ.

ಕಟ್ಟಿಹಾಕಿದ ಸಿಂಹವನ್ನು ಬಿಟ್ಟರೆ ನಮಗೇನೆಂದು ಸಿಂಹವನ್ನು ಬಂಧನದಿಂದ ಬಿಟ್ಟ ಹಾಗೆ ಕಲಿಯುಗ ವಿಪರೀತನಾದ ಕಪ್ಪೆ ಅರಭಟ್ಟನಿಗೆ ಎದುರು ಬಿದ್ದು ಆತನ ಶತೃಗಳು ತಮ್ಮ ಅವಿವೇಕದಿಂದ ಹಾಳಾದರು

೫೦ I.A.X, ಪುಟ – ೬೧

(ಹತರಾದರು) ಎಂಬುದಾಗಿ ಈ ಶಾಸನದಲ್ಲಿ ತಲಸ್ಪರ್ಶಿಯಾಗಿ ಕಪ್ಪೆ ಅರಭಟ್ಟನ ಪರಾಕ್ರಮವನ್ನು ಕಾವ್ಯಮಯವಾಗಿ ವರ್ಣಿಸಲಾಗಿದೆ.

ಈ ಶಾಸನ ತನ್ನ ಕವಿಗುಣದಿಂದ ಮಾತ್ರವಲ್ಲದೆ ಛಂದಸ್ಸಿನ ದೃಷ್ಟಿಯಿಂದ ಮಹತ್ತ್ವದಾಗಿದೆ. ಕನ್ನಡ ಛಂದಸ್ಸಿನ ತಾಯಿಬೇರಾದ ತ್ರಿಪದಿಯ ಪ್ರಾಚೀನ ರೂಪವನ್ನು ಇಲ್ಲಿ ಕಾಣುತ್ತೇವೆ. ನಮಗೆ ಸಿಕ್ಕಿರುವ ಮೊದಲ ತ್ರಿಪದಿಗಳಿವು. ತ್ರಿಪದಿ ಮೂಲತಃ ಜನಪದ ಛಂದಸ್ಸು : ಆದರೆ ಈ ಬಾದಾಮಿ ಶಾಸನದ ತ್ರಿಪದಿಗಳು ಜನಪದವಾಗಿರದೆ ಪ್ರೌಢವಾಗಿದ್ದು, ಪಂಡಿತರಚಿತವೆಂದು ತೋರುತ್ತವೆ. "ಸಾಧುಗೆ ಸಾಧು....." ಎಂಬೊಂದು ಪದ್ಯವನ್ನು ಬಿಟ್ಟರೆ. ಉಳಿದವುಗಳಲ್ಲಿ ಲಾಲಿತ್ಯವಾಗಲಿ ಅರ್ಥ ಸುಕರತೆಯಾಗಲಿ ಇಲ್ಲ. ಮುಂದೆ ಚಂಪೂ ಕಾವ್ಯಗಳ ನಡುವೆ ಕಂಡು ಬರುವ ತ್ರಿಪದಿಗಳನ್ನು ಇವು ಹೋಲುತ್ತವೆ. ಒಬ್ಬ ಕನ್ನಡ ವೀರನ ಆವೇಶಯುತವಾದ ಸ್ವಭಾವ ಚಿತ್ರವು ಇಲ್ಲಿದೆ. ಆದರೆ ಅದರಲ್ಲಿ ಭಾವ ಭಾಷೆಗಳ ಯೋಗ ಮಿಲನವುಳ್ಳ ಸ್ವಯಂ ಪೂರ್ಣವಾದ ಭಾವಗೀತೆಯ ಸಂಪುಟ ತುಂಬಿದೆ. ಎಂಬ ಮಾತು ಹೆಚ್ಚಾಯಿತು. ಎನಿಸುತ್ತದೆ. ಭಾವ ಸೊಗಸಾಗಿದ್ದರೂ, ಭಾಷೆಯಲ್ಲಿ ಅಷ್ಟಾಗಿ ಹೃದ್ಯತೆಯಿಲ್ಲ. ಅಲ್ಲದೆ ಚಮತ್ಕಾರಕ್ಕೆ ಪ್ರಾಧಾನ್ಯ ಸಂದಿದೆ. ಹೀಗಾಗಿ ಬಾದಾಮಿ ಶಾಸನದ ಸಾಹಿತ್ಯಕ ಯೋಗ್ಯತೆ ಬಹಳ ಎತ್ತರದ್ದೇನೂ ಅಲ್ಲವೆನ್ನಬೇಕು. ಆದರೆ ತನಗಿಂತ ಹಿಂದಿನ ಜನಪದ ಸಾಹಿತ್ಯದ ಅಸ್ತಿತ್ವವನ್ನು ಸ್ಥಾಪಿಸುವಲ್ಲಿ ಅದು ಉಪಾದೇಯವಾಗಿದೆ.[೫೧] ಒಟ್ಟಿನಲ್ಲಿ ನಂದಿಸೇನ ಪ್ರವರಮುನಿಯ ಶಾಸನ ವೈರಾಗ್ಯಗೀತೆಯಾದರೆ ಇದು ವೀರಗೀತೆಯಾಗಿದೆ ಎನ್ನಬಹುದು.

ಹೊಂಬುಜ (ಹುಂಚ)

ಕ್ರಿ.ಶ. ೮೦೦ರ ಹುಂಚ ಶಾಸನದಲ್ಲಿ ೫ ತ್ರಿಪದಿಗಳಿವೆ. ಈ ಶಾಸನವು ಬಹಳಷ್ಟು ತ್ರುಟಿತವಾಗಿರುವುದರಿಂದ ಒಂದೇ ಒಂದು ತ್ರಿಪದಿ ಮಾತ್ರ ಪೂರ್ಣವಾಗಿ ದೊರೆತಿದೆ. ೧ನೇ ಪದ್ಯ ಸ್ವಲ್ಪ ತ್ರುಟಿತವಾಗಿದ್ದರೂ ಮಾಹಿತಿ ಕೊಡುತ್ತದೆ. ಈ ಶಾಸನದಲ್ಲಿ ಹರಭಕ್ತನಾದ ಜಕ್ಕಯ್ಯ ಎಂಬುವವನನ್ನು ವರ್ಣಿಸಲಾಗಿದೆ.

ಶಾಸನ ಪಾಠ ಈ ರೀತಿಯಿದೆ

ಮೋನಮುಂ ಪಾಟಯು ಮನದ ನಿರ್ಮ್ಮಳಿ ಯು
ಮನಿತು ಯೊಳ್ಗುಣ ಮುಮಟಿವು ಧರ್ಮ್ಮಮುಂಜಕ್ಕ
ನಿನಗಲ್ಲದಿಲ್ಲ ಭುವನದೊಳ್

ಬ್ರಹ್ಮನಿಂದಜಿವುಸು ಸರ್ಮ್ಮನಾರ್ಪ್ಪಿನೊಳ್ಪೂರೆ
ಧರ್ಮ್ಮದೊಳ್ಬಲಿಯ ಸಮವೆಂಬ ಜಕ್ಕಯ್ಯ
ನಿರ್ಮಲ ಸುದ್ಧ ಭುವನದೊಳ್

೫೧ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ – ೦೨, ಪು : ೪೬೫, ಮೈಸೂರು ವಿಶ್ವವಿದ್ಯಾನಿಲಯ

ಮನ್ನೆಖೇಟದಿ ತೆಂಕ ನಿನ್ನ ದೇಗುಲಚಲ್ವು

.... ಲೆದಾರಿ ಜಕ್ಕಯ್ಯ

ನನ್ನ ರಾಧರ್ಮ್ಮದ ಜೆವಿನೊಳ್

ಮಾಸರ ಜಕ್ಕಯ್ಯ ಈಶ್ವರಗತಿಭಕ್ತ

...... ನೊಳಗೆ ನೆಗಟ್ದ ದೇಗುಲಕನ[೫೨]

....

ಮಾನ್ಯಖೇಟದಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿದ ಜಕ್ಕಯ್ಯನನ್ನು ಶಾಸನ 'ಈಶ್ವರಗತಿಭಕ್ತ' ಎಂದು ಕರೆದಿದೆ. ದೈವಭಕ್ತಿಯೊಂದೇ ಅಲ್ಲದೆ ಆತನ 'ಪಾಟಿ' ನಿರ್ಮಳಿಕೆ ಈ ಒಳ್ಗುಣಗಳೂ ಪ್ರಸಿದ್ಧವಾಗಿದ್ದವು. ಅರಿವಿನಲ್ಲಿ ಬ್ರಹ್ಮ, ಅರ್ಜಿನಲ್ಲಿ ಸುಶರ್ಮ, ಧರ್ಮದಲ್ಲಿ ಬಲಿ ಚಕ್ರವರ್ತಿ ಹೀಗೆ ಜಕ್ಕಯ್ಯ ದೇವಮಾನವನಾಗಿದ್ದ. ಇದರಿಂದ ಶಾಸನಕವಿ ಇಹ ಮತ್ತು ಪರಗಳೆರಡಕ್ಕೂ ಹಬ್ಬಿನಿಂತ ಜಕ್ಕನ ವ್ಯಕ್ತಿತ್ವ ಚಿತ್ರಿಸುವುದರಲ್ಲಿ ತುಂಬಾ ಯಶಸ್ವಿಯಾಗಿದ್ದಾನೆನ್ನಬಹುದು ಎಂದು ಡಾ॥ ಎಂ.ಬಿ. ನೇಗಿನಹಾಳ ಅಭಿಪ್ರಾಯಪಟ್ಟಿದ್ದಾರೆ.[೫೩]

ಡಾ॥ ಎಂ.ಎಂ. ಕಲಬುರ್ಗಿಯವರು "ಈ ಶಾಸನ ಪದ್ಯಗಳು ಬಾದಾಮಿ ತ್ರಿಪದಿಗಳಿಗಿಂತ ಹೆಚ್ಚು ಹದಗೊಂಡಿವೆ. ಶಾಸನ ಬಹಳಷ್ಟು ಒಡೆದು ಹೋಗಿದ್ದರೂ ಅಲ್ಲಿಯ ಅರ್ಥ ಸಂದೇಹ ಇಲ್ಲಿ ತೋರುವುದಿಲ್ಲ. ಸಂಸ್ಕೃತವನ್ನು ಹದವಾಗಿ ಬಳಸಿದ ಈ ಬರವಣಿಗೆ ತೊಡಕು ತೊಡಕಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೫೪]

ಶಿವಮೊಗ್ಗ ಜಿಲ್ಲೆಯ ಸೊರಬದ ಕ್ರಿ.ಶ. ೮೦೦ರ ಒಂದು ಶಾಸನದಲ್ಲಿ ೦೫ ತ್ರಿಪದಿಗಳಿವೆ. ಈ ಶಾಸನದಲ್ಲಿ ಅನೇಕ ಕಡೆ ಅಕ್ಷರಗಳು ತ್ರುಟಿತವಾಗಿದ್ದು, ಪದ್ಯಗಳ ಸ್ವರೂಪ ಅಸ್ಪಷ್ಟವಾಗಿವೆ.

ಅವುಗಳ ಪಾಠ ಈ ರೀತಿಯಿದೆ.

ಅನ್ದು ಕೇಚರಂ ಸಾರ್ಚ್ಚಿ ತನ್ದ ವಿಮನಮಂ

ಇನ್ದ್ರನವೆನಾದಿ ಸುರವದು ಅರ್ಕ್ಕಳು

ವನ್ದರ ಅಜ್ಞ.........

.... ನಯ ನೀನೇ ಭೂರ್ಮಗ್ಡಲದೊಳಾಗೆ ವಿ

ಲ್ದಣ್ಣ ಮನಣಿಯ ತುರಗಮ ನಾಜ್ಞರ

ಭಣ್ಡಣಜ್ಞಣದೊಳಗಿತ್ತಿ........

.... ವಳಸ ಏಮಿಜಮ್ಬೂದ್ವೀಪ ಸೂರ್ಜ್ಯ

---

೫೨ E.C.VIII, ನಗರ, ೬೨, ಹೊಂಬುಜ

೫೩ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪುಟ – ೬೩

೫೪ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೩

ಬಿಮ್ಬು ಪನ್ನೆರಡಯೊಳಗೆಲ್ಲ ಮಾರ್ಗ್ಗರ
ನಾಜ್ಞಜ ಕೊಮರಜ್ಞ.........
.... ತಿರತನಞ್ಜನೆ ಸುತನನ್ನ
ಅನ್ದು ಕೇಸಿನಿಯ ಎಟದಾಳಿತ ನನ್ನನೆ
ಬನ್ದಂ ನುರ್ಮ್ಮಸಿಲ ವಿರಹಿ

.... ರಮಿಗಿ ವೆಳಿಯಮ್ಬಿನೆಜಿಗಿ ಕಪ್ಪಿದೆ ತಳ್ತು
ಮಱುವಕ್ಕ ಮಾದ ನೃಪರ್ಕ್ಕಳ್ಳಾ ನಾಜ್ಞರ
ನಜಿವೆನಾರದ.........[೫೫]

ಅಂಗರ ಎಂಬ ವೀರನ ಸುರಲೋಕ ಯಾತ್ರೆಯನ್ನು ಬಣ್ಣಿಸುವ ಇದು ಹುಂಚ ಶಾಸನದಂತೆ ದೇಶಿಯತ್ತ ವಾಲಿರುವುದನ್ನು ಕಾಣಬಹುದು.

ಅಂಗರನನ್ನು ಸೊರಬ ಮತ್ತು ಮಾವಳ್ಳಿ ಶಾಸನ[೫೬]ಗಳು ವರ್ಣಿಸಿವೆ. ಊರಳಿವು ಮತ್ತು ಪೆಂಡಿರು ಕಿರು ಮಕ್ಕಳ ಉಡುಗೊರೆಯನ್ನು ಉಚ್ಚಿಕೊಳ್ಳುವ ಅವಮಾನ ಕಾರಕ ಸನ್ನಿವೇಶಗಳಲ್ಲಿ ಈತ ವೀರಾವೇಶದಿಂದ ಹೋರಾಡಿ ಪ್ರಾಣತೆತ್ತವನು. ಪ್ರಾಚೀನ ಕರ್ನಾಟಕದಲ್ಲಿ ಹೀಗೆ ಊರಳವು ಪೆಣ್ಯುಯ್ಯಲು, ನೆಂಟನ ಎಡರು, ಒಡೆಯನ ಕಾರ್ಯ ಮುಂತಾದ ಸಂದರ್ಭಗಳಲ್ಲಿ ಪ್ರಾಣದ ಹಂಗುದೊರೆದು ಹೋರಾಡುವುದು ವೀರನ ಆದರ್ಶವಾಗಿತ್ತು. (ಗದಾಯುದ್ಧ ಸಂ. ೨, ಪದ್ಯ – ೨೪) ಇಂಥ ಆದರ್ಶವೀರನ ಕಾವ್ಯಮಯ ವರ್ಣನೆ ಬಂದಿರುವುದು ಪ್ರಥಮತಃ ಈ ಶಾಸನಗಳಲ್ಲಿ ಅಟ, ವಿಲ್-ದಂಡು, ತುರಗ ದಳೆದಿಂದೊಡಗೂಡಿದ ಭಂಡಣದಲ್ಲಿ ಪರಾಕ್ರಮ ಮೆರೆದ ಅಂಗರನನ್ನು ಸೊರಬ ಶಾಸನ 'ಅಂಜನಾಸುತ' ಎಂದು ಹೇಳಿದೆ. ಸೊರಬಶಾಸನದ ೩ನೇ ತ್ರಿಪದಿಯಲ್ಲಿ ವಳಸ (?) ಏಳು, ಜಂಬೂ ದ್ವೀಪ ಸೂರ್ಯಬಿಂಬ ಹನ್ನೆರಡು ಮುಂತಾದ ಪದಪ್ರಯೋಗಗಳಿದ್ದುದು ಕಂಡು ಬರುತ್ತದೆ. ಶಾಸನ ಭಾಗ ನಷ್ಟವಾಗಿರುವುದರಿಂದ ಇಲ್ಲಿಯ ವರ್ಣನೆ ಎಂಥವೆಂಬುದು ತಿಳಿಯದು. ಅತಿಶಯೋಕ್ತಿಯ ಧಾಟಿ ಇರುವುದನ್ನು ಮಾತ್ರ ಗಮನಿಸಬಹುದು.

ಹೀಗೆ ಎರಡು ಶಾಸನಗಳಿಗೆ ವಸ್ತುವಾದ ಅಂಗರನನ್ನೂ ಅವನ ಪರಾಕ್ರಮವನ್ನೂ ಆ ಭಾಗದ ಅಂದಿನ ಜನತೆ ಮತ್ತು ಕವಿ (ಗಳು) ಮೆಚ್ಚಿಕೊಂಡಿದ್ದರೆಂದು ಹೇಳಬಹುದು. ಇಂದಿನ ಕಾಲದಲ್ಲಿ ಇಂಥ ವೀರನನ್ನು ಕುರಿತು ಅವರ ಶೌರ್ಯ ಸಾಹಸಗಳನ್ನು ಕುರಿತು ಜಾನಪದ ಕವಿಗಳು ಲಾವಣಿಗಳನ್ನು ಕಟ್ಟಿ ಹಾಡುವುದನ್ನು ಈ ಶಾಸನಗಳು ಸ್ಮರಣೆಗೆ ತಂದು ಕೊಡುತ್ತವೆ.[೫೭]

ಕ್ರಿ.ಶ. ೮೦೦ರ ವರೆಗಿನ ಶಾಸನ ಪದ್ಯಗಳಲ್ಲಿ ಒಂದು ಪಿರಿಯಕ್ಕರ, ಒಂದು ದ್ವಿಪದಿಯನ್ನು ಕಾಣಬಹುದು. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದ ಪತ್ತಿರದಲ್ಲಿಯೇ ದೊರೆತಿರುವ ಮತ್ತೊಂದು

---

೫೫ E.C.VIII, ಸೊರಬ, ೨೨
೫೬ E.C.08, ಸೊರಬ ೦೧
೫೭ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ ಪು : ೬೮

ಶಾಸನದಲ್ಲಿ ಪಿರಿಯಕ್ಕರ ಛಂದಸ್ಸಿನ ಪದ್ಯವಿದೆ. ಇದು ಉಪಲಬ್ಧವಾಗಿರುವ ಕನ್ನಡದ ಅತ್ಯಂತ ಪ್ರಾಚೀನ ಪಿರಿಯಕ್ಕರ ಪದ್ಯವೆಂದು ಹೇಳಬಹುದು.

ಶಾಸನ ಪಾಠ ಈ ರೀತಿಯಿದೆ

ಪುಟ್ಟಿಮಣಿ ನಾಕಿಗಂ ಭಂಗಜಗ ತುಂಗ ನೆಲದನ್ತಿದನ್ತೆಯ್ದೆ ಆಳ್ದೊನತಂ
ಗಿಷ್ಟನಾ ಸಾಹಯನೆಜಿವೆ ಮಹಾ ಸಮನ್ತನುತ್ತವಂಗಳ್ಳ ಗೊಪ್ಪೆ
ಪುಟ್ಟಿದೊ ಬಿರಗ್ರಹಾಕಮ್ ತಲವಿಡಿದು ಕಳೆದೆ
ಕಿರಿಟ್ಟಿ ನಾಸಿರದೊಂಬಯಿನೂಱ ಆಱುವತ ಅಱುವರನಿಜಿದೊಳ್ಪ ಪ್ರಕಟಸಿದಾನ್[೫೮]

ಈ ಶಾಸನದಲ್ಲಿ ಮಣಿನಾಗ ಕಂಭನ ಮಗ ಜಗ ತುಂಗ, ಜಂಗತುಂಗನಿಗೆ ಇಷ್ಟನಾದವ 'ಬೀರಗ್ರಹಾರ' ನೆಂಬುವನು ಎಂದು ಹೇಳಿದೆ. ಈ ಬೀರಗ್ರಹಾರನು ಯಾವುದೋ ಕಾಳಗದಲ್ಲಿ ಸಾವಿರದ ಒಂಬೈನೂರ ಐವತ್ತಾರು ಜನರನ್ನು ಇರಿದನೆಂದು ಹೇಳಿದೆ. ಇದು ಅನ್ಯಾದೃಶ ಸಾಹಸವೇ ಸರಿ.[೫೯]

ಇದೇ ರೀತಿ ೮ನೇ ಶತಮಾನದ ಆಲಂಪೂರ ಶಾಸನದಲ್ಲಿ[೬೦] ರಾಷ್ಟ್ರಕೂಟ ೩ನೇ ಗೋವಿಂದನ ಮಿತ್ರನಾದ ವೀರಗ್ರಹನು ಚಾಲುಕ್ಯವಿನಿಯಾದಿತ್ಯನ ಮಗನೆಂದು ಹೇಳಿದೆ. ಈತನ ಸಾಹಸವೆಂದರೆ ನೂರೈವತ್ತೊಂದು ಜನರನ್ನು ಕಳಿತಲೆಯಿಂದಲೂ, ಐವತ್ತಾರು ಜನರನ್ನು ಸುಲಿಗೆಯಿಂದಲೂ ಇರಿದು ಕೊಂದುದು, ಇದು ವೈಯಕ್ತಿಕ ಸಾಹಸಕ್ಕೆ ಒಳ್ಳೆಯ ನಿದರ್ಶನ.[೬೧]

ಕ್ರಿ.ಶ. ೭೦೦ರ ಬಾದಾಮಿ ಶಾಸನದ ಮೊದಲೆಂಬ ಸಾಲುಗಳನ್ನು ಆರ್.ಎಸ್. ಪಂಜಲುಜಯಲರು ದ್ವಿಪದಿ ಎಂದು ಗುರ್ತಿಸಿದ್ದಾರೆ. ಇದು ಕನ್ನಡದಲ್ಲಿ ದೊರೆತಿರುವ ಪ್ರಾಚೀನ ದ್ವಿಪದಿಯಾಗಿದೆ. ಹಾಗೂ ಕನ್ನಡ ಶಾಸನ ಪ್ರಪಂಚದಲ್ಲಿ ಬಳಕೆಯಾದ ಏಕೈಕ ದ್ವಿಪದಿ ಎಂಬ ವಿದ್ವಾಂಸರು ಹೇಳಿದ್ದಾರೆ.

ಶಾಸನ ಪಾಠ ಈ ರೀತಿಯಿದೆ

ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟ ಜನ ವರ್ಜಿತನ್ ಕಲಿಯುಗ ವಿಪರೀತನ್[೬೨]

ಈ ಶಾಸನವು ಕಪ್ಪೆ ಅರಭಟ್ಟನು ಒಳ್ಳೆಯ ಜನರಿಗೆ ಬೇಕಾದವನು. ಕೆಟ್ಟ ಜನರಿಗೆ ಬೇಡವಾದವನು. ಕಲಿಯುಗ ವಿಪರೀತನೆಂಬ ಪ್ರಸಿದ್ಧನಾದವನು ಎಂಬುದನು ಸೂಚಿಸುತ್ತದೆ.

---

೫೮ ಆರ್.ಎಸ್. ಪಂಚಮುಖಿ, ಕರ್ನಾಟಕ ಇತಿಹಾಸ ಸಂ – ೦೧ ಸಾಂಸ್ಕೃತಿಕ ಚರಿತ್ರೆ, ಪುಟ – ೧೨೩
೫೯ ಡಾ॥ ಎಂ.ಬಿ. ನೇಗಿನಹಾಳ ಕನ್ನಡ ಶಾಸನಗಳ ಅಧ್ಯಯನ ಪುಟ : ೬೬
೬೦ ಎ.ಪಿಜಿ.ಎ.ಎಸ್. – ೦೩, ನಂ. ೦೫
೬೧ ಡಾ॥ ಎಂ.ಬಿ. ನೇಗಿನಹಾಳ ಪುಟ – ೬೭
೬೨ ಡಾ॥ ಆರ್.ಎಸ್. ಪಂಚಮುಖಿ, ಕರ್ನಾಟಕ ಇತಿಹಾಸ ಪುಟ – ೧೨

ಕಂದ

ಸಿಂಹನಗದ್ದೆ ಶಾಸನ (ಕ್ರಿ.ಶ. ೭೮೦)

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದ (ಸಿಂಹನಗಳೆ) ಜೈನ ಮಠದಲ್ಲಿ ದೊರೆತ ಕ್ರಿ.ಶ. ೭೨೬–೮೮ ತಾಮ್ರ ಶಾಸನವು ಗಂಗರ ದೊರೆ ಶ್ರೀ ಪುರುಷನ ಕಾಲದ್ದಾಗಿದ್ದು ಸಂಸ್ಕೃತ ಕನ್ನಡ ಹಾಗು ಗದ್ಯ ಪದ್ಯ ಮಿಶ್ರಿತವಾಗಿದೆ. ಇದರಲ್ಲಿ ಎರಡು ಕಂದ ಪದ್ಯಗಳಿದ್ದು ಕನ್ನಡದ ಅತ್ಯಂತ ಪ್ರಾಚೀನ ಉಪಲಬ್ಧ ಕಂದ ಪದ್ಯಗಳಾಗಿವೆ.

ಶಾಸನ ಪಾಠ ಈ ರೀತಿಯಿದೆ

ನಿರ್ಮಲ ಕೋಶಿಕ ವಂಶನ್
ಧರ್ಮಪರನ್ ಚಾರು ಮಣಲಿ ಮನೆ ಒಡೆಯೊನ್ ವಲಂ
ತಮ್ಮ ಕ್ಷೇತ್ರೇಚಿತಮಾನ್
ಸಮ್ಯಗ್ದರ್ಶನ ವಿಶುದ್ಧನುಂ ವಟೆಗಿತ್ತಾನ್
ಮುಖಮಾಗೆ ತೊಳ್ಪರೊಡೆ ಒ
ರ್ಸುಖಾಧ್ಯರೆವ್ಪಿತ್ತೞು ಪ್ರಧಾನರು ಮೊಡಾನೆ
ನಿಖಿಳ ಸಾಕ್ಷಿಗಳ ವರೇ
ಸುಕರದೆ ನರಶಾಸನಂ ಗಳಾಯ್ದೋರೆನ್ನುಮ[೬೩]

ಈ ಶಾಸನವು ಜೈನ ಪರವಾಗಿದ್ದು 'ಪೆರ್ಬಾಲಿಯ ವಟೆಗೆ ಸಮ್ಯಗ್ದರ್ಶನ ವಿಶುದ್ಧನಾದ ಶ್ರೀ ತುಳು ಅಡಿ ದತ್ತಿ ಬಿಟ್ಟುದನ್ನು ಹೇಳುತ್ತದೆ. ಸಾಕ್ಷಿಗಳನ್ನು ಕೂಡ ಪದ್ಯದಲ್ಲಿಯೇ ಹೇಳಿರುವ ಈ ಶಾಸನದಲ್ಲಿ ಹೆಚ್ಚಿನ ವರ್ಣನೆಗಳಿಲ್ಲ.

ಸೊರಬದ ಶಾಸನ(ಕ್ರಿ.ಶ. ೮೯೭) ದಲ್ಲಿ ಅನೇಕ ಪದ್ಯಗಳು ತ್ರುಟಿತವಾಗಿದ್ದು ಒಂದು ಪದ್ಯವನ್ನು ಮಾತ್ರ ಇಲ್ಲಿ ಗಮನಿಸಬಹುದು. ಈ ಶಾಸನದ ಪಾಠ ಈ ರೀತಿಯಿದೆ.

...... ಅದು ಧರ್ಮ್ಮಸಾಗರಣಿ
ವದಿತರ್ಕ ನಾವೊಲೆ ಬೆಳಪುದಾಕೆಯ ಕೈಯ್ಯು
ಳ್ಪಿದ ಪೊರ್ವ್ವಟ್ಟು ಗಮನೆಯ
ಬದೆಗಸ....... ಣಪ್ಪೋರ್[೬೪]

ಈ ಶಾಸನವು ಹಿಂದೆ ತ್ರಿಪದಿಯಲ್ಲಿ ವರ್ಣಿತವಾದ ಅಂಗರನನ್ನು ಕುರಿತ ಕಂದ ಪದ್ಯವಿದು. ಪಾಠ ದೋಷದಿಂದಾಗಿ ಅರ್ಥ ಸ್ಪಷ್ಟವಾಗದು. ಇವು ಆಗಿನ ಕಾಲದ ಪದ್ಯಗಳ ಮಾದರಿ.[೬೫]

---

೬೩. M.A.R. ೧೯೨೦ ಪುಟ ೨೩, ನರಸಿಂಹ ರಾಜಪುರ ಕ್ರಿ.ಶ. ಸು. ೭೮೦

೬೪ E.C.VIII ಸೊರಬ – ೦೧, ಕ್ರಿ.ಶ. ೮೯೭

೬೫ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೫

ಗುಂಡ್ಲುಹಳ್ಳಿ ಶಾಸನ[೬೬]ದಲ್ಲಿ ಕಣ್ಣ ಸತ್ತಿಗೆ ಮಗನೂ ಅತೀ ಪ್ರಸಿದ್ಧನೂ ಆದ ಬಿಸೆಯ ಸತ್ತಿಯನ್ನು ಇದು ಹೆಸರಿಸಿದೆ. ಕೆರೆಯೊಂದರ ನಿರ್ಮಾಣವನ್ನು ಇದು ಕುರಿತಿದೆ.

ಬಾದಾಮಿಶಾಸನ[೬೭] ದಲ್ಲಿ ಗಣಪತಿ ಮತ್ತು ನಾಗಪ್ರತಿಮೆ ಸ್ಥಾಪಿಸಿದ ವಿಚಾರ ಹೇಳಿದೆ. ಬಾದಾಮಿಯ ಬೆಟ್ಟಗಳ ವರ್ಣನೆ ಇದರಲ್ಲಿರುವಂತಿದೆ. ಆದರೆ ಶಾಸನವು ತ್ರುಟಿತ ಮತ್ತು ಅಸ್ಪಷ್ಟವಾಗಿದೆ.

ಸುಮಾರು ೮ನೇ ಶತಮಾನಕ್ಕೆ ಸೇರಿದ ಉದ್ಯಾವರದ ಒಂದು ಶಾಸನದಲ್ಲಿ ಮೇಯ್ಗೇಶ್ವರ ದುಷ್ಟನು (ಮಯ್ಗೇಶ್ವರನೆಂಬ ದುಷ್ಟನು) ಉದಯಾವಾರವನ್ನು ಪ್ರವೇಶಿಸುವ ಸಮಯದಲ್ಲಿ ಈ ಪಟುಕಾಂತಿ ವೀರಾವೇಶದಿಂದ ಕಾದಿದನು. ಯುದ್ಧದಲ್ಲಿ ಕೈಕಾಲು, ಕಣ್ಣು, ತಲೆ ಮೊದಲಾದ ಅಂಗಾಂಗಗಳು ಒಂದೊಂದಾಗಿ ಭಂಗವಾದವೆಂದು ಶಾಸನ ಹೇಳುತ್ತದೆ. ಹೀಗೆ ಅಂಗಾಂಗಗಳು ಕಳಚಿ ಬೀಳುತ್ತಿದ್ದರೂ ಈತನ ಶೌರ್ಯ ಕುಂದಲಿಲ್ಲ.[೬೮]

೮ನೇ ಶತಮಾನಕ್ಕೆ ಸೇರಿದ ಮಂಗಳೂರಿನ ಒಂದು ಶಾಸನದಲ್ಲಿ[೬೯] ನಾಗಮ್ಮನೆಂಬ ವೀರನು ಪಾಂಬಯನ ಸಮೂಹ ಬಲವನ್ನು ನಿಶ್ಚೇಚಗೊಳಿಸಿ ಕದನ ಶೂದ್ರಕನೆನಿಸಿಕೊಂಡನೆಂದು ವರ್ಣಿಸಿದೆ.

೮ನೇ ಶತಮಾನಕ್ಕೆ ಸೇರಿದ ಬೆಲವತ್ತೆಯ ಒಂದು ಶಾಸನದಲ್ಲಿ[೭೦] ಗೋಪಯ್ಯನು ಪೆಂಪು ಕಾರಣವಾಗಿ ಕಲ್ಯಾಡು ಪಡೆದನೆಂದಿದೆ. ಈ ಶಾಸನದಲ್ಲಿ ತಪ್ಪುಗಳು ಅಧಿಕವಾಗಿರುವುದರಿಂದ ಹೆಚ್ಚಿನ ವಿಷಯ ತಿಳಿದು ಬರುವುದಿಲ್ಲ.

ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿರುವ ೮ನೇ ಶತಮಾನಕ್ಕೆ ಸೇರಿದ ಸಂಸ್ಕೃತ ಮತ್ತು ಕನ್ನಡ ಶಾಸನ[೭೧]ಗಳೆರಡರಲ್ಲಿಯೂ ನಟಸೇವ್ಯನೆಂಬ ನರ್ತಕನ ವರ್ಣನೆ ಬಂದಿದೆ. "ನಟಸೇವ್ಯ ಭರತ ಮತಯುತ ಪಟುತದ ವಚನಾಶನಿ ಪ್ರವಾತೇನ ಕುಟಿಲೋನ್ನತ ನಟ ಶೈಲ ಸ್ಪುಟತಾನತ ಮಸ್ತಕಃ ಪತತಿ" ಎಂದು ನಟಸೇವ್ಯನು ಭರತಾಗಮ ಪ್ರಾವಿಣ್ಯದಿಂದ ಮೆರೆಯುತ್ತಿದ್ದುದನ್ನು ಸಂಸ್ಕೃತ ಪದ್ಯ ಹೇಳಿದರೆ ಕನ್ನಡದ ಪದ್ಯ "ಇನ್ನಾತನೆ ನರ್ತಕಂ ನಟರೊಳಗ್ಗಳಮೀ ಭುವನಾಂತರಾಳ ದೊಳ್" ಎಂದು ಸಾರುತ್ತದೆ. ನಟನೊಬ್ಬನ ಗುಣಗಾನ ಮಾಡುವುದರಿಂದ ಈ ಶಾಸನ ಕನ್ನಡ ಪ್ರಶಸ್ತಿ ಪದ್ಯಗಳಲ್ಲಿ ತನ್ನದೇ ಆದ ಸ್ಥಾನ ಪಡೆದಿದೆ. ದಿ. ಮಧುರ ಚೆನ್ನರು ಈ ಶಾಸನದಲ್ಲಿ ಒಂದು ವೃತ್ತವಿರುವುದನ್ನು ತೋರಿಸಿದ್ದಾರೆ.[೭೨] ಈ ರೀತಿಯಾಗಿ ಸಾಹಿತ್ಯಕ ಮಹತ್ವವುಳ್ಳ ಶಾಸನಗಳನ್ನು ಗುರ್ತಿಸಬಹುದು.

---

೬೬ E.C. – 16, ಪಾವಗಡ – ೧೨

೬೭ ಕರ್ನಾಟಕ ಇತಿಹಾಸ, ಸಂಪುಟ – ೦೧, ನಂ – ೦೧

೬೮ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ ಪು : ೬೮

೬೯ ಸೌ.ಇಂ.ಇ. – ೦೯ ನಂ. – ೩೯೨

೭೦ E.C.03, ಮೈಸೂರು – ೦೬

೭೧ ಜಯಕರ್ನಾಟಕ, ೯–೬, ಪುಟ ೪೩೧

೭೨ ಡಾ॥ ಎಂ.ಬಿ. ನೇಗಿನಹಾಳ ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ ಪುಟ – ೬೯

ಅಧ್ಯಾಯ - ನಾಲ್ಕು

ಶಾಸನೋಕ್ತ ಛಂದಸ್ಸು - ಅಲಂಕಾರ ಶಾಸ್ತ್ರದ ದೃಷ್ಟಿಯಿಂದ ಕನ್ನಡ ಶಾಸನಗಳ ಅಧ್ಯಯನ

ಶಾಸನೋಕ್ತ ಛಂದಸ್ಸು ಮತ್ತು ಅಲಂಕಾರ

ಕ್ರಿ.ಶ. ೫೦೦ರಿಂದ ಕ್ರಿ.ಶ ೮೦೦ರವರೆಗೆ ಛಂದಸ್ಸು ಮತ್ತು ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಸುಮಾರು ೬೦ ಕನ್ನಡ ಶಾಸನಗಳೂ ದೊರೆಯುತ್ತವೆ. ಇವುಗಳಲ್ಲಿ ಹಲವು ಶಾಸನಗಳು ತ್ರುಟಿತವಾಗಿವೆ. ಆದ್ದರಿಂದ ಇಂತಹ ಅಸ್ಪಷ್ಟ ಶಾಸನಗಳ ಛಂದಸ್ಸನ್ನು ಗುರ್ತಿಸಲು ಸಾಧ್ಯವಾಗುವುದಿಲ್ಲ. ಈ ಶಾಸನಗಳಲ್ಲಿ ಶ್ರವಣಬೆಳಗೊಳದಲ್ಲಿ ೫, ೬, ೭ ನೇ ಶತಮಾನದ ಪ್ರಾಚೀನ ಶಾಸನಗಳು ದೊರೆಯುತ್ತವೆ. E.C.02, ಶ್ರವಣಬೆಳಗೊಳ ಶಾಸನ ಸಂಪುಟದಲ್ಲಿ ಕ್ರಿ.ಶ. ೫೦೦ ರಿಂದ ೮೦೦ರವರೆಗಿನ ಸುಮಾರು ೪೦ ಶಾಸನಗಳು ಉಪಲಬ್ಧವಾಗಿವೆ. ಅವುಗಳಲ್ಲಿ ಖ್ಯಾತ ಕರ್ಣಾಟಕಗಳೆಂದು ಕರೆಯಲಾಗುವ ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರಾ, ಮಹಾಸ್ರಗ್ದರೆ, ಶಾರ್ದೂಲ ವಿಕ್ರೀಡಿತ, ಮತ್ತೇಭವಿಕ್ರೀಡಿತ ವೃತ್ತಗಳನ್ನು ಬಳಸಲಾಗಿದೆ.

ಶ್ರವಣಬೆಳಗೊಳದಲ್ಲಿ ಕ್ರಿ.ಶ. ೮೦೦ರ ಒಳಗಿನ ೪೦ ಶಾಸನಗಳಲ್ಲಿ

ಮಹಾಸ್ರಗ್ದರಾ – ೦೪ (ಶಾಸನಗಳ ಸಂಖ್ಯೆ : ೧೪, ೯೪, ೯೮, ೧೨೬)

ಶಾರ್ದೂಲವಿಕ್ರೀಡಿತ – ೦೫ (ಶಾ.ಸ. ೨, ೧೫, ೨೫, ೩೦, ೧೩೪)

ಮತ್ತೇಭವಿಕ್ರೀಡಿತ – ೦೫ (ಶಾ.ಸ. ೮೬, ೮೭, ೧೧೨, ೧೧೩, ೧೨೧)

ಉತ್ಪಲಮಾಲೆ – ೦೨ (ಶಾ.ಸ. ೨೪, ೮೯)

ಚಂಪಕಮಾಲೆ – ೦೨ (ಶಾ.ಸ. ೨೯, ೧೨೩)

ಸ್ರಗ್ದರಾ ವೃತ್ತಕ್ಕೆ ಕ್ರಿ.ಶ. ೮೦೦ರವರೆಗೆ ಶ್ರವಣಬೆಳಗೊಳ ಸಂಪುಟದಲ್ಲಿ ನಿದರ್ಶನವಿಲ್ಲ. ಆದರೆ ಕ್ರಿ.ಶ. ೮೦೦ರ ನಂತ ಶಾಸನಸಂಖ್ಯೆ ೭೨, ೭೩, ೧೫೬, ೧೬೩. ಇತ್ಯಾಗಿ ಸುಮಾರು ಶಾಸನ ಪದ್ಯಗಳು ದೊರೆಯುತ್ತವೆ.

ಇತರ ವೃತ್ತಗಳು

ಮಲ್ಲಿಕಾಮಾಲೆ – ೦೧ (ಶಾಸನ ಸಂಕ್ಯೆ : ೩೪)

ವಸಂತ ತಿಲಕ – ೦೧ (ಶಾ.ಸ. ೧೨೦)

ವಂಶಸ್ಥ – ೦೧ (ಶಾ.ಸ. ೧೩೨)

ಮಂಗಳಾಮಾಲಾ – ೦೨ (ಶಾ.ಸ. ೧೩೦, ೧೩೩)

ಶ್ಲೋಕಗಳು – ೦೬ (ಶಾ.ಸ. ೧.೨, ೧೩, ೯೧, ೧೨೩, ೧೩೨)

ಇವೆಲ್ಲವೂ ಶ್ರವಣಬೆಳಗೊಳದಲ್ಲಿರುವ ವೃತ್ತಗಳು ಉಳಿದ ಶಾಸನ ಸಂಪುಟಗಳಲ್ಲಿ ಕ್ರಿ.ಶ. ೮೦೦ರವರೆಗೆ ತ್ರಿಪದಿ, ಪಿರಿಯಕ್ಕರ, ದ್ವಿಪದಿ, ಕಂದಗಳಲ್ಲ ಸಂಬಂಧಿಸಿದಂತೆ ಹಲವಾರು ಶಾಸನ ಪದ್ಯಗಳು ದೊರೆತಿವೆ.

ತ್ರಿಪದಿ – ೧೪, ಬಾದಾಮಿ ಶಾಸನದಲ್ಲಿ – ೦೪

ಹುಮ್ಮಚ ಶಾಸನದಲ್ಲಿ – ೦೫

ಸೊರಬ ಶಾಸನದಲ್ಲಿ – ೦೫

ಪಿರಿಯಕ್ಕರ – ೦೧, ಬಾದಾಮಿ ಬಳಿಯಿದೆ. (ಕರ್ನಾಟಕದ ಇತಿಹಾಸ ಸಾಂಸ್ಕೃತಿಕ ಚರಿತ್ರೆ,ದ ಪು : ೧೨೩)

ದ್ವಿಪದಿ – ೦೧ ಬಾದಾಮಿ ಶಾಸನ

ಕಂದ – ೦೬ ಸಿಂಗಣಗದ್ದೆ ಶಾಸನದಲ್ಲಿ – ೦೨

ಸೊರಬ ಶಾಸನದಲ್ಲಿ – ೦೪

ಎಲ್ಲಕ್ಕಿಂತ ಮುಂಚೆ, ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದ ಮೊದಲ ಸಾಲಿನಲ್ಲಿ ಸಂಸ್ಕೃತದ ಅನುಷ್ಟಪ್ ಛಂದಸ್ಸಿನ ಒಂದು ಸುಂದರವಾದ ಶ್ಲೋಕವಿದೆ. ಈ ಸಾಲು ಭಾಷೆ ಸಂಸ್ಕೃತವಾದರೂ ಲಿಪಿ ಕನ್ನಡದ್ದಾಗಿದೆ. ಖ್ಯಾತ ಕರ್ಣಾಟಕಗಳು ಕಂದ, ರಗಳೆ ಇತ್ಯಾದಿ ಪ್ರಕಾರಗಳೂ ಸಂಸ್ಕೃತದಿಂದ ಕನ್ನಡಕ್ಕೆ ಬಂದಂತೆ ಅನುಷ್ಟಪ್ಪ ಛಂದಸ್ಸೂ ಕೂಡ ಕನ್ನಡಕ್ಕೆ ಬಂದಿದೆ. ಕವಿರಾಜಮಾರ್ಗದ ಆ ನಂತರ ಬಂದ ಕೃತಿಗಳಾದ 'ವೃಷಭೇಂದ್ರ ವಿಜಯ' ಇಂತಹ ಕಾವ್ಯಗಳಲ್ಲಿ ಕನ್ನಡ ಅನುಷ್ಟಪ್ಪ ಛಂದಸ್ಸನ್ನು ಬಳಸಲಾಗಿದೆ. ಆದರೆ ಶಾಸನ ಪದ್ಯಗಳು ಮಾತ್ರ ದೊರೆತಿಲ್ಲ. ಶಾಸನಗಳನ್ನು ಹುಡುಕಿದರೆ ದೊರೆಯಬಹುದೇನೊ ? ಏಕೆಂದರೆ ಕಾವ್ಯಗಳಲ್ಲಿ ಖ್ಯಾತ ಕಂದ, ತ್ರಿಪದಿ ಬಳಕೆಯಾದಂತೆ ಶಾಸನಗಳಲ್ಲಿ ಬಳಕೆಯಾಗಿದೆ. ಅದೇ ರೀತಿ ಅನುಷ್ಟಪ್ ಛಂದಸ್ಸು ಕಾವ್ಯಗಳಲ್ಲಿ ಬಳಕೆಯಾದಂತೆ ಶಾಸನದಲ್ಲಿಯೂ ಬಳಕೆಯಾಗಿರಬಹುದು. ಆದ್ದರಿಂದ ಹಲ್ಮಿಡಿ ಶಾಸನದಲ್ಲಿ ಬಂದಿರುವ ಅನುಷ್ಟುಪ್ಪ ಛಂದಸ್ಸಿನ ಬಗೆ ತಿಳಿಯಬೇಕಾಗಿದೆ. ಇದರಲ್ಲಿ ವಿಷ್ಣುವಿನ ಸ್ತುತಿ ಮಾಡಲು ಅನುಷ್ಟಪ್ ಛಂದಸ್ಸನ್ನು ಬಳಸಲಾಗಿದೆ.

ಶಾಸನ ಪಾಠ ಈ ರೀತಿಯಿದೆ.

ಜಯತಿಶ್ರೀ / ಪರಿಷ್ವಙ್ಗ
ಶ್ಯಾರ್ಙ್ಗ ಮ್ಯಾನ/ತಿ ರಚ್ಯುತಃ
ದಾನವಾಕ್ಷೋ / ರ್ಯ್ಗಾನಾತ್ತಾಗ್ನಿಃ
ಶಿಷ್ಟಾನಾನ್ತು / ಸುದರ್ಶನಃ[೧]

೧ M.A.R. 1936 ನಂ. ೧೬

ಮೇಲಿನ ಪದ್ಯವು ಅನುಷ್ಟುಪ್ ಛಂದಸ್ಸಿನ ನಿಯಮವಾದ ೨ ಮತ್ತು ೪ನೇ ಸಾಲಿನಲ್ಲಿ ಒಂದು ಲಘು, ಒಂದು ಗುರು ಬಂದಿರುವುದನ್ನು ಕಾಣಬಹುದು. ಈ ಶಾಸನ ಪದ್ಯವು ಬಹುಶಃ ಸಮವೃತ್ತ ಛಂದಸ್ಸಿನ ಬೇರೊಂದು ವೃತ್ತವಾಗಿರಬಹುದು. ಈ ಶಾಸನದ ಮುಂದಕ್ಕೆ ಬರುವ 'ಬಟರಿಕುಲಾಮಲವ್ಯೋಮ ತಾರಾಧಿನಾಥನ್' 'ಮದಕ್ಷಿಣ ಪಥ ಬಹುಶತ ಹವನಾಹವದುಳ್' ಎಂಬಲ್ಲಿ ರೂಪಕಾಲಂಕಾರ ಬಂದಿರುವುದನ್ನು ಕಾಣಬಹುದು.

ಮುಂದಕ್ಕೆ ಕ್ರಿ.ಶ. ೫೦೦ರ ತಮಟಕಲ್ಲು ಶಾಸನವು ಕನ್ನಡ ಸಾಹಿತ್ಯಕ ಅಂಶವಿರುವ ಮೊಟ್ಟ ಮೊದಲ ಶಾಸನವೆಂದು ಸಂಪೂರ್ಣವಾಗಿ ಒಪ್ಪಬಹುದಾದ ಶಾಸನವಾಗಿದೆ. ಅದರ ಪಾಠವನ್ನು ಗಮನಿಸಬಹುದು.

ತಮಟಕಲ್ಲು ಶಾಸನ (ಕ್ರಿ.ಶ. ೫೦೦)

ಸಾಹಿತ್ಯಕ ಅಂಶವಿರುವ ಅತ್ಯಂತ ಪ್ರಾಚೀನ ಉಪಲಬ್ಧ ಕನ್ನಡ ಶಾಸನವನ್ನು ಚಿತ್ರದುರ್ಗ ಜಿಲ್ಲೆಯ 'ತಮಟಕಲ್ಲು ಶಾಸನ'ವೆಂದು ಗುರ್ತಿಸಿದ್ದಾರೆ. ಕಾಲವನ್ನು ಉಲ್ಲೇಖಿಸದ ಈ ಶಾಸನವು ಕ್ರಿ.ಶ. ೫೦೦ ರ ಕಾಲಘಟ್ಟದ್ದೆಂದು ಶಾಸನತಜ್ಞರು ಗುರ್ತಿಸಿದ್ದಾರೆ.

ಈ ಶಾಸನ ಪದ್ಯದ ಪಾಠ ಈ ರೀತಿಯಿದೆ.

ಫಣಮಣಿ ಅನ್ತು ಭೋಗಿ ಫಣದುಳ್ಮಣಿ ವಿಲ್ಮನದೋನ್
ರಣಮುಖದುಳ್ಳೆ ಕಾಲನರಿಯರ್ಕ್ಕು ಮನಿನ್ದ್ಯಗುಣನ್
ಪ್ರಣಯಿ ಜನಕ್ಕೆ ಕಾಮನಸಿ ತೋಥ್ಫಲ ವರ್ಣ್ಣನವನ್
ಗುಣಮಧುರಾನ್ಕ ದಿವ್ಯ ಪುರುಷನ್ಪುರುಷ ಪ್ರವರನ್[೨]

ಈ ಶಾಸನೋಕ್ತ ಪದ್ಯದ ಛಂದಸ್ಸನ್ನು

ಪಿಂಗಳನು ಅವಿತಥವೆಂದು ಕರೆಯುವ, ಇತರ ಲಾಕ್ಷಣಿಕರು ನರ್ಕುಟಕ, ನರ್ದಟಕ ಎಂದು ಕರೆದಿರುವ ಒಂದು ವರ್ಣಸಮವೃತ್ತವಾಗಿದೆ ಎಂದು ವಿದ್ವಾಂಸರು ಗುರ್ತಿಸಿದ್ದಾರೆ.[೩]

ಈ ವೃತ್ತವು "ರತ್ನಾಕರನ ಪ್ರಕಾರ ೭, ೧೦ನೇ ಸ್ಥಾನದಲ್ಲಿ ಯತಿ ಬಂದರೆ 'ಕೋಕಿಲಕ' ವೃತ್ತವಾಗುತ್ತದೆ. ಆದ್ದರಿಂದ ಮೇಲಿನ ಪದ್ಯ ಇವೆರಡೂ ಆಗಿರದೆ ಸಂಸ್ಕೃತದ ಅತ್ಯಷ್ಟಿ ಛಂದಸ್ಸಿನ ಬೇರೊಂದು ವೃತ್ತವಾಗಿರುವ ಸಾಧ್ಯತೆಯಿದೆ" ಎಂದು ಚಿದಾನಂದ ಮೂರ್ತಿಯವರು ಹೇಳುತ್ತಾರೆ.

ಇದು ಸಮವೃತ್ತದ ಅತ್ಯಷ್ಟಿ ಛಂದಸ್ಸಿನ ಕನಕಾಬ್ಜಿನೀ ವೃತ್ತವಾಗಿದೆ ಎಂದು ಕಲಬುರ್ಗಿ ಹೇಳುತ್ತಾರೆ.

ಈ ಶಾಸನವು "ಸಮವೃತ್ತದ ೧೭ನೆಯ ಅತ್ಯಷ್ಟಿಯಲ್ಲಿದ್ದು ಕನಕಾಬ್ಜಿನಿ ಅಥವಾ 'ನರ್ಕುಟಕ'ವಾಗಿದೆ. ಕೈಪಿಡಿಕಾರರು ಇದನ್ನು ಸುಮಂಗಲಿ ಅಥವಾ ನತ್ಕಟಕವೆಂದು ಹೆಸರಿಸಿದ್ದಾರೆ" ಎಂದು ನೇಗಿನಹಾಳ ಅಭಿಪ್ರಾಯಪಟ್ಟಿದ್ದಾರೆ.[೪]

---

೨ E.C. ಸಂ. XI, ಚಿತ್ರದುರ್ಗ, ೪೩,

೩ ಕನ್ನಡ ಸಾಹಿತ್ಯ ಚರಿತ್ರೆ – ೦೨, ಪುಟ – ೪೬೭ ಮೈಸೂರು ವಿಶ್ವವಿದ್ಯಾನಿಲಯ

೪ ಡಾ॥ ಎಂ.ಬಿ. ನೇಗಿನಹಾಳ, ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯ ಅಧ್ಯಯನ, ಪುಟ – ೭೬

ಆದರೆ ಈ ಮೇಲಿನ ಪದ್ಯದಲ್ಲಿ ನಜಭಜಜ ಗಣಬಂದಿದ್ದು ಕೊನೆಯಲ್ಲಿ ಒಂದು ಲಘು, ಒಂದು ಗುರು ಬಂದಿರುವುದರಿಂದ ಸಂಸ್ಕೃತ ವೃತ್ತದ ೧೭ನೆಯ ಅತ್ಯುಷ್ಟಿ ಛಂದಸ್ಸಿನ ಸುಮಂಗಲಿ ಅಥವಾ ನರ್ಕುಟಕ ವೃತ್ತವಾಗಿದೆ.

೧೦ನೇ ಶತಮಾನದಲ್ಲಿ ನಾಗವರ್ಮ, ೧೧ನೇ ಶತಮಾನದಲ್ಲಿ ನೇಮಿಚಂದ್ರ ಮತ್ತು ಲೀಲಾವತಿ ಇವರ ಕಾವ್ಯಗಳಲ್ಲಿ ಈ ವೃತ್ತವು ಕಂಡು ಬರುವುದರಿಂದ ಕನ್ನಡದಲ್ಲಿ ಕ್ರಿ.ಶ. ೫೦೦ ರಿಂದಲೂ ತಕ್ಕಷ್ಟು ಪ್ರಚುರವಾದ ಬಂಧವೆಂದಾಯಿತು. ಅಲ್ಲಿಂದ ಕನ್ನಡ ಸಾಹಿತ್ಯ ಅವ್ಯಾಹತವಾಗಿ ಸಾಗಿದುದನ್ನು ಈ ಪದ್ಯ ಸೂಚಿಸುತ್ತದೆ. ಹಾಗೇ ಕನ್ನಡದ ಪ್ರಥಮ ವರ್ಣವೃತ್ತವೆನ್ನಬಹುದು.

ಈ ಪದ್ಯದಲ್ಲಿ ಸುಮಂಗಲಿ ವೃತ್ತದ ನಿಯಮದ ಪ್ರಕಾರ ನಾಲ್ಕು ಪಾದಗಳಿವೆ. ಪ್ರತಿಪಾದದಲ್ಲಿ ೧೭ ಅಕ್ಷರಗಳು ಬಂದಿವೆ. ಪ್ರತಿಪಾದದಲ್ಲಿ ಕ್ರಮವಾಗಿ ನಜ.ಭ.ಜ.ಜ. ಗಣಗಳು ಬಂದು ಕೊನೆಯಲ್ಲಿ ಒಂದು ಲಘು ಒಂದು ಗುರು ಉಳಿಯುತ್ತದೆ. ಪ್ರತಿಪಾದದ ಕೊನೆಯಲ್ಲಿ ಮತ್ತು ೮ನೇ ಸ್ಥಾನದಲ್ಲಿ ಯತಿ ಬಂದಿರುವುದನ್ನು ಕಾಣಬಹುದು. ಪದ್ಯದ ಪ್ರತಿಪಾದದಲ್ಲಿಯೂ ಆದಿಪ್ರಾಸ, ಅಂತ್ಯಪ್ರಾಸ, ಮತ್ತು ವಿನುತಪ್ರಾಸ ಬಂದಿರುವುದನ್ನು ಕಾಣಬಹುದು. ಇದು ಕ್ರಿ.ಶ. ೮೦೦ರ ವರೆಗಿನ ಶಾಸನಗಳಲ್ಲಿ ಎಲ್ಲಿಯೂ ಬಳಕೆಯಾಗದೆ ಮುಂದೆ ಬರುವ ಕಾವ್ಯಗಳಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು.

ಖ್ಯಾತ ಕರ್ಣಾಟಕಗಳು

ಮಹಾಸ್ರಗ್ಧರಾವೃತ್ತ

ಶ್ರವಣಬೆಳಗೊಳ ಶಾಸನ ಸಂಪುಟದಲ್ಲಿ ೦೪ ಮಹಾಸ್ರಗ್ಧರಾ ವೃತ್ತಗಳು ಕಂಡು ಬರುತ್ತವೆ. ಇದರಲ್ಲಿ ಪ್ರಮುಖವಾದುದೆಂದರೆ ನಂದಿಸೇನ ಪ್ರವರ ಮುನಿಯ ಶಾಸನವಾಗಿದೆ. ಈ ಶಾಸನದಲ್ಲಿ ಕಾಲ ಉಲ್ಲೇಖವಿಲ್ಲ. ಲಿಪಿ ಶಾಸ್ತ್ರಜ್ಞರು ಇದರ ಕಾಲವನ್ನು ಸು. ಕ್ರಿ.ಶ. ೬೫೦ ಅಂದರೆ ೭ನೇ ಶತಮಾನವೆಂದು ಗುರ್ತಿಸಿದ್ದಾರೆ.

ಶಾಸನ ಪಾಠ ಈ ರೀತಿಯಿದೆ

ಸುರಚಾಪಂ ಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಂಜುವೋಲ್ತೋ/ಱ ಬೇಗಂ
ಪಿರಿಗುಂ ಶ್ರೀ ರೂಪ ಲೀಲಾಧನ ವಿಭವ ಮಹಾರಾಶಿಗಳಲ್ಲಿ ವಾರ್ಗ್ಗಂ
ಪರಮಾರ್ಥ ಮೆಚ್ಚೆನಾನೀ ಧರಣಿ ಯುಳಿರ ವಾನೆನ್ದು ಸನ್ಯಾಸನಂಗೆ
ಯ್ದುರು ಸತ್ವನ್ನನ್ದಿಸೇನ ಪ್ರವರ ಮುನಿವರನ್ದೇವ ಲೋಕಕ್ಕೆ ಸನ್ದಾನ್[೫]

ಈ ಮೇಲಿನ ಶಾಸನ ಪದ್ಯವು ಮಹಾಸ್ರಗ್ಧರಾ ವೃತ್ತದ ನಿಯಮದ ಪ್ರಕಾರ ಈ ಪದ್ಯದಲ್ಲಿ ನಾಲ್ಕು ಚರಣಗಳಿದ್ದು, ಪ್ರತಿ ಸಾಲಿನಲ್ಲಿ ಕ್ರಮವಾಗಿ ಸ.ತ.ತ.ನಸ.ರ.ಗ. ಗಣಗಳು ಒಂದು ಕೊನೆಯಲ್ಲಿ ಒಂದು ಗುರು

೫ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೯೮ ಪುಟ – ೭೦

ಉಳಿಯುತ್ತದೆ. ಪ್ರತಿಪಾದದ ೧೫ನೇ ಸ್ಥಾನದಲ್ಲಿ ಯತಿ ಬಂದಿರುವುದನ್ನು ಕಾಣಬಹುದು. ಪ್ರತಿಪಾದದಲ್ಲಿ ಆದಿಪ್ರಾಸ ಬಂದಿರುವುದನ್ನು ಕಾಣಬಹುದು. ಹಣ, ವೈಭವ, ರೂಪ ಎಂಬುದು ಮಂಜಿನಂತೆ, ಕಾಮನಬಿಲ್ಲಿನಂತೆ ಕ್ಷಣಿಕವಾದದು ಎಂಬ ಸಾಲಿನಲ್ಲಿ ಉಪಮೆ ಇರುವುದನ್ನು ಕಾಣಬಹುದು.

ದುರಿತಾ ಭೂಧವಲಷ ಮಾನ್ಕೀವ್ತಿಲಜು ಪೊದೆದ ಜ್ಞಾನ ಶೈಲೆ ನ್ದ್ರಮಾನ್ಪೋಟ್
ದುರಮಿಧ್ಯಾತ್ವ ಪ್ರಮೂಢಸ್ಥಿರತರ ಪನಾ ನೆಟ್ಟಿಗ ನ್ಧೇಭಮ ಯ್ಯಾನ್
ಸುರವಿದ್ಯಾ ವಲ್ಲಭೇನ್ದ್ರಾ-ಸ್ತುರವರ ಮುನಿಭಿಸ್ತುಕ್ಯ ಕವ್ವಿಪ್ಪಿನಾಮೇಲ್
ಚರಿತ ಶ್ರೀನಾಮಧೇಯ ಪ್ರಭು ಮುನಿನ್ವ್ರತಗಳ್ನೋನ್ತು ಸೌಖ್ಯಸ್ಥನಾಯ್ದಾನ್[೬]

ಈ ಶಾಸನ ಪದ್ಯವು ಮಹಾಸ್ರಗ್ಧರಾ ವೃತ್ತದ ನಿಯಮದ ಪ್ರಕಾರ ನಾಲ್ಕು ಪಾದಗಳಿವೆ. ೨ ಮತ್ತು ೩ನೇ ಪಾದಗಳಲ್ಲಿ ಮಹಾಸ್ರಗ್ಧರಾ ವೃತ್ತದ ನಿಯಮದ ಪ್ರಕಾರ ೨೨ ಅಕ್ಷರಗಳು ಹೊಂದಿದ್ದು ಸ.ತ.ತ.ನ.ಸ.ರ.ರ. ಗಣಗಳು ಒಂದು ಕೊನೆಯಲ್ಲಿ ಒಂದು ಗುರು ಉಳಿದಿದೆ. ಆದರೆ ೧ ಮತ್ತು ೪ನೇ ಪಾದಗಳು ಮಹಾಸ್ರಗ್ಧರಾ ನಿಯಮದ ಪ್ರಕಾರ ಬಂದಿಲ್ಲ. ೧ನೆ ಸಾಲಿನಲ್ಲಿ ೨೧ ಅಕ್ಷರಗಳು ಬಂದಿದ್ದರೆ, ೪ನೇ ಸಾಲಿನಲ್ಲಿ ೨೨ ಅಕ್ಷರಗಳು ಬಂದಿದ್ದರು, ಮಹಾಸ್ರಗ್ಧರಾ ವೃತ್ತದ ನಿಯಮವಿಲ್ಲ. ಇಲ್ಲಿ ೧೫ ಸ್ಥಾನದಲ್ಲಿ ಯತಿ ಬರಬೇಕಿತ್ತು. ಆದರೆ ಯತಿ ಪಾಲಿತವಾಗಿಲ್ಲ. ಪ್ರತಿಪಾದದಲ್ಲ ಆದಿಪ್ರಾಸ ಮತ್ತು ಅಂತ್ಯಪ್ರಾಸವನ್ನು ಕಾಣಬಹುದು. ಇದು ರೂಪಕಾಲಂಕಾರವಾಗಿರುವುದು ಕಂಡುಬರುತ್ತದೆ.

ಅನವ ದ್ಯನ್ನ ದಿರಾಷ್ಟ್ರ ದುಳ್ಳೆ ಪ್ರಥಿತಯಶೋ [ಕು]ನ್ದಕಾನ್ವನ್ದು ಸೈಲಾಮ್
ವಿನಯಾಹಾರ ಪ್ರಭಾವನ್ತ ಪದಿನ್ನ ಧಿಕನ್ಜನ್ದ್ರ ದೇವಾಚಾರ್ಯನಾಮನ್
ಉದಿತಶ್ರೀ ಕವ್ವಿಪಿನುಳ್ಳ ರಿಷಿಗಿರಿಶಿಲೆ ಮೇಲ್ನೋನ್ತು ತವ್ದೇಹ ಮಿಕ್ಕಿ
ನಿರವದ್ಯನ್ನೇಜಿ ಸ್ವಗ್ಗಂ ಶಿವನಿಲೆ ಪಡೆದಾನ್ಸ್ಯಾ ಥುಗಳ್ಪೂಜ್ಯ ಮಾನನ್[೭]

ಇದು ಸ್ವಲ್ಪ ಅಸ್ಪಷ್ಟವಾಗಿದೆ. ಮಹಾಸ್ರಗ್ಧರಾ ವೃತ್ತದ ನಿಯಮವನ್ನು ಹೊಂದಿಲ್ಲ. ನಾಲ್ಕುಪಾದಗಳಿಂದ ಕೂಡಿದ್ದು ೧, ೨, ೪ ಪಾದಗಳಲ್ಲಿ ೨೨ ಅಕ್ಷರಗಳು ಬಂದಿದ್ದರೆ ೩ನೇ ಸಾಲಿನಲ್ಲಿ ೨೩ ಅಕ್ಷರಗಳು ಬಂದಿದೆ. ಪ್ರತಿಪಾದದ ಮೊದಲಲ್ಲಿ 'ಸ'ಗಣಗಳು ಬರುತ್ತವೆ ಮುಂದದೆ ಮಹಾಸ್ರಗ್ಧರಾ ನಿಯಮದ ಗಣಗಳು ಬರುವುದಿಲ್ಲ. ಪ್ರತಿಪಾದದಲ್ಲಿ ಆದಿ ಮತ್ತು ಅಂತ್ಯ ಪ್ರಾಸವನ್ನು ಕಾಣಬಹುದು.

ಒಟ್ಟಿನಲ್ಲಿ ಮಹಾಸ್ರಗ್ಧರೆಯೇ ಆದರೂ ಅದರ ಗಣ ರಚನೆ ಪ್ರಾಸ ಯೋಜನೆಗಳಲ್ಲಿ ವರ್ಣವೃತ್ತಗಳ ಸಾಮಾನ್ಯ ನಿಯಮಗಳಿಗೆ ಭಂಗಬಂದಿದೆ. ಆದರೆ ಇದನ್ನು ಬರಹಗಾರದಿಂದಲೋ ಕೊರೆಹಗಾರರಿಂದಲೋ ಆಗಿರಬಹುದಾದ ದೋಷವೆಂದುಕೊಂಡು ಸರಿಪಡಿಸಲು ಹೋದರೆ ಆ ಯತ್ನ ಫಲಕಾರಿಯಾಗುವಂತೆ

೬ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೪ ಪುಟ – ೦೮
೭ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೯೪ ಪುಟ – ೬೯

ತೋರುವುದಿಲ್ಲ. ಒಂದೆರಡು ಅಂಥ ದೋಷಗುಣ ಇರಬಹುದು. ಆದರೆ ಗಣ ವಿನ್ಯಾಸ ಪ್ರಾಸ ಯೋಜನೆಗಳಲ್ಲಿ ಮೂಲ ಲೇಖಕನೇ ಮಹಾಸ್ರಗ್ಧರೆಯ ಸಾಮಾನ್ಯ ಲಕ್ಷಣವನ್ನು ಬಲ್ಲವನಾಗಿಯೂ, ಕೆಲಮಟ್ಟಿನ ಸ್ವಾತಂತ್ರ್ಯವನ್ನು ವಹಿಸಿರುವಂತೆ ಕಂಡು ಬರುತ್ತದೆ. ಕನ್ನಡ ಕವಿಗಳ ರಚನೆಯ ಆರಂಭ ದೆಸೆಯಲ್ಲಿ ಸ್ವಾತಂತ್ರ್ಯ ಪ್ರೀತಿ ಕಾರಣವಾಗಿಯೇ ಪ್ರಯೋಗ ಪರೀಕ್ಷೆಗಳು ಕಾರಣವಾಗಿಯೇ ಇಂಥ ನಿದರ್ಶನಗಳು ಹುಟ್ಟುತ್ತಿದ್ದಿರಬಹುದು.[೮]

ಶ್ರೀ ಸ...... ನಾ..... ನೆಗಟ್ಟೆಯಗುಂ ಸೆದೆಗೆವಡೆಸಿದಲ್

ಮುಗಿವ....... ನೋನ್ತುಮ್ಮೆವೊಲ....... ತಪಮಂ.....

ನಿ...... ಪಾತ್ರ ನನ್ದಿಮುನಿಪ........

ಮಾರ್ಯ್ಯನ........ ಯು....... ಳ್ದಾಲೋತಲ ಇದೆ ಉಳ್ಳೊನ್ತು ಸಿದ್ಧಿ ಸ್ಥನಾಮ್

ಈ ಶಾಸನ ಪದ್ಯವನ್ನು ಡಾ॥ ಎಂ.ಎಂ. ಕಲಬುರ್ಗಿಯವರು ಮಹಾಸ್ರಗ್ಧರಾ ವೃತ್ತವಾಗುತ್ತದೆಯೆಂದು ಗುರ್ತಿಸಿದ್ದಾರೆ.[೧೦] ಆದರೆ ತ್ರುಟಿತ ಮತ್ತು ಅಸ್ಪಷ್ಟವಾಗಿರುವ ಈ ಪದ್ಯವು ಯಾವ ಪದ್ಯ ಜಾತಿಗೂ ಸೇರುವುದಿಲ್ಲ. ಮಹಾಸ್ರಗ್ಧರೆಯ ಯಾವ ನಿಯಮವನ್ನು ಶಾಸನ ಪದ್ಯದಲ್ಲಿ ಕಾಣಲು ಸಾಧ್ಯವಿಲ್ಲ.

ಶಾರ್ದೂಲ ವಿಕ್ರೀಡಿತ ವೃತ್ತ

ಉದ್ಯಾನ್ಯೈರ್ಜ್ಜಿತನನ್ಧನಂ ಧನದಳಿವ್ಯಾಪಕ್ತರಕ್ತೋತ್ಪಲ

ಮ ಸ ಜ ಸ ತ ತ

ವ್ಯಾಮಿಶ್ರೀ ಕ್ರಿತ ಶಾಲಿಪಿಙ್ಜರ ದಿಶಂ ಕೃತ್ವಾತು ಬಾಹ್ಯಾಚಲಂ

ಮ ಸ ಜ ಸ

ಸರ್ವ್ವಪ್ರಾಣಿ ದಯಾರ್ತ್ಥ ದಾಬ್ಧಿಭಗವಂ ನಾಜ್ಞಾನೇನ ಸರ್ವ್ವೋಧಯನ

ಮ ಸ ಜ ಸ ತ ತ

ಆರಾಧ್ಯ ಚಲಮಸ್ತಕೇ ಕನಕ ಸತ್ತೇನೋತ್ಪವತತ್ಸತ್ಪತೀ[೧೧]

ಈ ಪದ್ಯವು ಶಾರ್ದೂಲ ವಿಕ್ರೀಡಿತ ವೃತ್ತದ ಛಂದಸ್ಸಿನಲ್ಲಿದ್ದು ಪ್ರತಿ ಪಾದದಲ್ಲಿ ೧೯ ಅಕ್ಷರಗಳು ಬಂದಿವೆ. ಪ್ರತಿಪಾದದಲ್ಲಿ ಮ ಸ ಜ ಸ ತ ತ ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿದಿದೆ. ಆದರೆ ೩ನೇ ಸಾಲಿನಲ್ಲಿ ೨೦ ಅಕ್ಷರಗಳು ಬಂದಿರುವುದರಿಂದ ಈ ಸಾಲಿನಲ್ಲಿ ಮ ಸ ಜ ಸ ಗಣ ಒಂದು

---

೮ ಕನ್ನಡ ಸಾಹಿತ್ಯ ಚರಿತ್ರೆ – ೧೯೭೨, ಪುಟ – ೪೭೩, ಮೈಸೂರು ವಿಶ್ವವಿದ್ಯಾನಿಲಯ

೯ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೨೬ ಪುಟ – ೭೬

೧೦ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೭

೧೧ E.C.02, ಶ್ರವಣಬೆಳಗೊಳ, ಶಾಸನಸಂಖ್ಯೆ – ೦೨, ಪುಟ – ೦೫

ಮುಂದಕ್ಕೆ ಛಂದಸ್ಸು ಹದಗೆಟ್ಟಿದೆ. ಬಹುಶಃ ಇದು ಲಿಪಿಕಾರನ ದೋಷವಿರಬಹುದು. ಇಲ್ಲಿ ಯತಿಯಾಗಲಿ ಪ್ರಾಸಗಳಾಗಿ ಬಂದಿರುವುದನ್ನು ಕಾಣಲು ಸಾಧ್ಯವಿಲ್ಲ.

ಜ ಸ ತ ತ

ರಾಗದ್ವೇಷ ತಮೋಮಲವ್ಯಪ ಗತಶ್ಯ್ರೀದ್ಧಾ ತ್ಮಸಂಯೋದ್ಧಕರ್

ಮ ಸ ಜ ಸ ತ ತ

ವೇಗೂರು ಪರಮಪ್ರಭಾವರಿಷಿಯರ್ಸ್ಸರ್ವ್ವಜ್ಞ ಭಟ್ಟಾರಕರ್

.... ಗಾದೇವ ...... ನ .... ಡಿತ ನ್ತಬ್ಬು .... ಲಗ್ರದೊಳ್

ಶ್ರೀ ಕೀರ್ಣ್ಣ ಮಲಮುಷ್ಪ....... ಸ್ವರ್ಗ್ಗಾಗ್ರಯಪನೇಜಿದಾರ್[೧೨]

ಈ ಪದ್ಯವು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿದೆ. ನಾಲ್ಕು ಸಾಲಿನ ಪದ್ಯವಾಗಿದ್ದು. ಮೊದಲೆರಡು ಸಾಲುಗಳಲ್ಲಿ ಮ ಸ ಜ ಸತತ ಗಣಗಳು ಒಂದು ಕೊನೆಯಲ್ಲಿ ಒಂದು ಗುರು ಉಳಿದಿದೆ. ಆದರೆ ೩ ಮತ್ತು ೪ನೇ ಸಾಲುಗಳು ತ್ರುಟಿತವಾಗಿದ್ದರೂ ಅವು ಶಾರ್ದೂಲ ವಿಕ್ರೀಡಿತದಲ್ಲಿರುವುದನ್ನು ಕಾಣಬಹುದು. ಆದಿಪ್ರಾಸ ಮತ್ತು ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು. ೧೨ ಸ್ಥಾನದಲ್ಲಿ ಯತಿ ಬಂದಿದೆ ಹಾಗೂ ಈ ಪದ್ಯದಲ್ಲಿ ರೂಪಕ ಬಂದಿರುವುದನ್ನು ಕಾಣಬಹುದು.

ಮ ಸ ಜ ಸ ತ ತ

ಬಾಳಾಮೇಲ್ಯಿಖಿ ಮೇಲಿ ಸರ್ಪ್ಪದ ಮಹಾದನ್ತಾಗ್ರದು ಳ್ಪಲ್ವ ವೊಲ್

ಮ ಸ ಜ ಸ ತ ತ

ಸಾತಾಮ್ಬಾ ಲತ ಪೋಗ್ರದಿಸ್ತು ನಡದೊಂ ನೂಜೆಣ್ಬು ಸಂವತ್ಸರಂ

ಮ ಸ ಜ ಸ ತ ತ

ಕೇಳೊಪ್ಪಿನ್ಕಟವಪ್ರ ಶೈಲಮಡ ಅಃ ನೆಮ್ಮ ಕಳನ್ತೊರನಂ

ಮ ಸ ಜ ಸ ತ ತ

ಬಾಲೇ ಪೆರ್ಗ್ಗೂರವಂ ಸಮಾದಿನೆಜಿದೊನ್ದು ನೋನ್ತೆಯ್ದಿದೊರ್ಸ್ಸಿದ್ಧಿಯಾನ್[೧೩]

೧೨ E.C.02. ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೫, ಪುಟ – ೭

೧೩. E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೨೫ ಪುಟ – ೧೦–೧೧

ಈ ಶಾಸನ ಪದ್ಯವು ಶಾರ್ದೂಲ ವಿಕ್ರೀಡಿತ ವೃತ್ತವಾಗಿದ್ದು ಪ್ರತಿಪಾದದಲ್ಲಿ ೧೯ ಅಕ್ಷರಗಳು ಬರುತ್ತವೆ. ಪ್ರತಿಪಾದದಲ್ಲಿ ಮ ಸ ಜ ಸ ತ ತ ಒಂದು ಕೊನೆಯಲ್ಲಿ ಒಂದು ಗುರು ಉಳಿಯುತ್ತದೆ. ಪ್ರತಿಸಾಲಿನಲ್ಲಿ ಆದಿಪ್ರಾಸ ಮತ್ತು ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು. ಪ್ರತಿಸಾಲಿನ ೧೨ನೇ ಸ್ಥಾನದಲ್ಲಿ ಯತಿ ಬಂದಿರುವುದನ್ನು ಕಾಣಬಹುದು. ಈ ಪದ್ಯದಲ್ಲಿ ಲುಪ್ತಉಪಮೆ ಬಂದಿರುವುದನ್ನು ಕಾಣಬಹುದು.

ಮ ಸ ಜ ಸ ತ ತ
ಮೌಸೇನರ್ ಪರಮ ಪ್ರಭಾವರಿಸಿ ಯಿರ್ಕ್ಕೆವ್ವಿಪ್ಪಿನಾ ವೆಟ್ಟದುಳ್

ಮ ಸ ಜ ಸ ತ ತ
ಶ್ರೀ ಸಿಂಗೆಂಗಳೆ ಪೇಟ್ಟ ಸಿದ್ದ ಸಮಯನ್ತ ಪ್ಪಾದೆ ನೋನ್ತಿಮ್ಬಿನಿನ್

ಮ ಸ ಜ ಸ ತ ತ
ಪ್ರಾಸಾದಾನ್ತರ ಮಾನ್ವಿ ಚಿತ್ರ ಕನಕ ಪ್ರಜ್ವಲ್ಯದಿನ್ನಿಕ್ಕು ದಾನ್

ಮ ಸ ಜ ಸ ತ ತ
ಸಾಸಿರ್ವ್ವ ರ್ವ್ವರ ಪೊಜೇದನ್ಸುದ್ದಯೆ ಅವಸ್ವರ್ಗ್ಗಾಗ್ರ ಮೊನೇಜಿದಾರ್[೧೪]

ಈ ಪದ್ಯದಲ್ಲಿ ಶಾರ್ದೂಲ ವಿಕ್ರೀಡಿತ ವೃತ್ತದ ಎಲ್ಲಾ ನಿಯಮಗಳಿವೆ. ನಾಲ್ಕು ಸಾಲಿನ ಪದ್ಯವಾಗಿದೆ. ಪ್ರತಿಪದದಲ್ಲಿ ೧೯ ಅಕ್ಷರಗಳು ಬಂದಿವೆ. ಪ್ರತಿಪಾದದಲ್ಲಿ ಮ ಸ ಜ ಸ ತ ತ ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿದಿದೆ. ಪ್ರತಿಪಾದದಲ್ಲಿ ಆದಿ ಮತ್ತು ಅಂತ್ಯ ಪ್ರಾಸವನ್ನು ಕಾಣಬಹುದು. ಪ್ರತಿ ಸಾಲಿನ ೧೨ನೇ ಸ್ಥಾನದಲ್ಲಿ ಯತಿ ಬಂದಿರುವುದು ಕಾಣಬಹುದು. ಈ ಪದ್ಯದಲ್ಲಿ ಅತ್ಯುಕ್ತಿ ಅಲಂಕಾರ ಬಂದಿರುವುದನ್ನು ಕಾಣಬಹುದು.

ಮ ಸ ಜ ಸ ತ ತ
ಈ ಪೊಜ್ಯಾ ..... ಲಮಾನ್ಸರೇತಿ ವಜಿದೋರೇಮ್ನಿರ್ವ್ವರಂ ಲಕ್ಷ್ಯಮೀ

ಮ ಸ ಜ ಸ ತ ತ
ಶ್ರೀ ಪೊರಾನ್ವಯಗನ್ಧವರ್ಮ ನಮಿತಶ್ರೀ ಸಜ್ಜದಾ ಪುಣ್ಯದೀ

ಸಸ್ಪಾರಾ ...... ನಿದೇ .... ಜಿ ವಲಘಂ .... ರೀ ಶಿಲಾತಲ

.... ಮಾನ್ನೆಬದುಪ .... ಇ ....[೧೫]

---

೧೪ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೩೦ ಪುಟ – ೧೨
೧೫ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩೪ ಪುಟ – ೭೮

ಈ ಪದ್ಯವು ತ್ರುಟಿತವಾಗಿದೆ. ಎರಡು ಸಾಲುಗಳು ಮಾತ್ರ ಸ್ಪಷ್ಟವಾಗಿದ್ದು ಈ ಎರಡೂ ನಿಲುಗಳಲ್ಲಿ ಶಾರ್ದೂಲ ವಿಕ್ರೀಡಿತ ಲಕ್ಷಣವನ್ನು ಕಾಣಬಹುದು. ಪ್ರತಿ ಸಾಲಿನಲ್ಲಿ ಮ ಸ ಜ ಸ ತ ತ ಗಣಗಳೂ ಬಂದು. ಕೊನೆಯಲ್ಲಿ ಒಂದು ಗುರು ಉಪ್ಪಿದಿರುವುದನ್ನು ಕಾಣಬಹುದು. ಆದಿಪ್ರಾಸ ಬಂದಿರುವುದನ್ನು ಕಾಣಬಹುದು. ಹಾಗೂ ೧೨ನೇ ಸ್ಥಾನದಲ್ಲಿ ಯತಿ ಬಂದಿದೆ. ಉಳಿದ ಎರಡೂ ಸಾಲುಗಳಲ್ಲಿ ಇದೇ ನಿಯಮ ಇರಬಹುದು.

ಮತ್ತೇಭವಿಕ್ರೀಡಿತ ವೃತ್ತ

ಸ ಭ ರ ನ ಮ ಯ
ನೆಜಿದಾದ ವ್ರತಶೀಲ ನೋನ್ಪಿಗುಣದಿಂ ಸ್ವಾಧ್ಯಾಯ ಸಮ್ಪತ್ತಿನಿಮ್

ಸ ಭ ರ ನ ಮ ಯ
ಕಜಿಇಲ್ನಲ್ತ ಪಧರ್ಮ್ಮದಾ ಸಸಿಮತಿ ಶ್ರೀ ಗನ್ತಿಯೆರ್ವ್ವನ್ದು ಮೇಲ್

ಸ ಭ ರ ನ ಮ ಯ
ಅಜಿದಾಯುಷ್ಯ ಮನೆನ್ತು ನೋಡೆನಗೆ ತಾನಿನ್ತೆನ್ದು ಕ ವ್ವಿಪ್ಪಿನುಳ್

ಸ ಭ ರ ನ ಮ ಯ
ತೊಜಿದಾರಾಧನೆ ನೋನ್ತು ತೀರ್ತ್ಥಗಿರಿ ಮೇಲ್ಸವರ್ಗ್ಗಾಲಯಕ್ಕೇಜಿದಾರ್[೧೬]

ಈ ಶಾಸನ ಪದ್ಯದಲ್ಲಿ ಮತ್ತೇಭವಿಕ್ರೀಡಿತ ವೃತ್ತದ ಎಲ್ಲಾ ನಿಯಮಗಳಿದ್ದು. ಪ್ರತಿಪಾಠದಲ್ಲಿ ೨೦ ಅಕ್ಷರಗಳು ಬಂದಿದೆ. ನಾಲ್ಕು ಸಾಲಿನ ಪದ್ಯವಾಗಿದೆ. ಪ್ರತಿಪಾದದಲ್ಲಿ ಸಭರನ ಮಯ ಗಣಗಳು ಬಂದಿದ್ದು ಕೊನೆಯಲ್ಲಿ ಒಂದು ಲಘು, ಒಂದು ಗುರು ಉಳಿದಿದೆ. ೧೩ನೇ ಸ್ಥಾನದಲ್ಲಿ ಯತಿ ಬಂದಿದೆ ಹಾಗೂ ಪ್ರತಿಪಾದದಲ್ಲಿ 'ಆದಿಪ್ರಾಸ ಮತ್ತು ಅಂತ್ಯಪ್ರಾಸ ಬಂದಿದೆ. ಈ ಶಾಸನದಲ್ಲಿ ರೂಪಕ ಬಂದಿರುವುದನ್ನು ಕಾಣಬಹುದು.

ಸ ಭ ರ ನ ಮ ಯ
ಗತಿ ಚೇಷ್ಟಾವಿರಹಂ ಶುಭಾಂಗದೆ ಘನಮ್ಮಾಜಿಟ್ಟ ಮಾನ್ವಿಟ್ಟುವೆಲ್

ಸ ಭ ರ ನ ಮ ಯ
ಯತಿಯಂ ಪೇಟ್ದ ವಿಧಾನದಿದ್ದು ತೋಜದೇ ಕವ್ವಿಪ್ಪಿನಾ ಶೈಲರುಳ್

ಸ ಭ ರ ನ ಮ ಯ

೧೬ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೮೬ ಪುಟ – ೬೭

ಪ್ರಥಿತಾರ್ತ್ಥತ್ವದೆ ನೋನ್ತ ನಿಷ್ಠಿತಯಶಾ ಸ್ವಾಯಿಃ ಪ್ರಮಾ..... ಯಕ್

ಸ ಭ ರ ನ ಮ ಯ
ಸ್ಥಿತಿದೇಹಾ ಕಮಲೋಪಮಂಗ ಸುಭಮುಮ್ ಸ್ವರ್ಲ್ಲೋಕದಿಂ ನಿಶ್ಚಿತಮ್[೧೭]

ಈ ಪದ್ಯದಲ್ಲಿ ಮತ್ತೇಭವಿಕ್ರೀಡಿತದ ಎಲ್ಲಾ ಲಕ್ಷಣಗಳಿವೆ. ನಾಲ್ಕು ಸಾಲಿನ ಪದ್ಯವಾಗಿದ್ದು ಪ್ರತಿಸಾಲಿನಲ್ಲಿ ೨೦ ಅಕ್ಷರಗಳು ಬಂದಿದೆ. ಪ್ರತಿಪಾದದಲ್ಲಿ ಸಭರನಮಯ ಗಣಗಳು ಬಂದು ಕೊನೆಯಲ್ಲಿ ಒಂದು ಲಘು, ಒಂದು ಗುರು ಉಳಿದಿದೆ. ಪ್ರತಿ ೧೩ನೇ ಸ್ಥಾನದಲ್ಲಿ ಯತಿ ಪಾಲಿತವಾಗಿರುವುದನ್ನು ಕಾಣಬಹುದು. ಆದಿಪ್ರಾಸ ಮತ್ತು ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು.

ಸ ಭ ರ ನ ಮ ಯ
ನಮಿಲೂರಾ ಸಿರಿ ಸಂಘದಾ ಜಗಣದಾ ರಾಜ್ಞೀ ಮತೀಗನ್ತಿಯಾರ್

ಸ ಭ ರ ನ ಮ ಯ
ಅಮಲಂ ನಲ್ತದ ಶೀಲದಿಂ ಗುಣದಿನಾಮಿಕ್ಕೋತ್ರಮರ್ಮ್ಮಿಳದೊರ್

ಸ ಭ ರ ನ ಮ ಯ
ನಮಗನ್ನೊಟ್ಟುದು ಯೆನ್ದು ಏಜಿ ಗಿರಿಯಾನ್ಸನ್ಯಾಸಸಂ ಯೋಗದೊಳ್

ಸ ಭ ರ ನ ಮ ಯ
ನಮೊಚಿನ್ತಯ್ದು ಶಮಸ್ತ್ರಮಣ್ಮಜಿ....... ಏ ಸ್ವರ್ಗ್ಗಾಲಯಂ ಏಜಿದಾರ್[೧೮]

ಶಾಸನ ಪದ್ಯದಲ್ಲಿ ಮತ್ತೇಭ ವಿಕ್ರೀಡಿತವೃತ್ತದ ಲಕ್ಷಣವಿದ್ದು ಪ್ರತಿ ಸಾಲಿನಲ್ಲಿ ೨೦ ಅಕ್ಷರಗಳು ಬಂದಿವೆ. ಸಭರನಮಯ ಗಣಗಳು ಬಂದು ಕೊನೆಯಲ್ಲಿ ಒಂದು ಲಘು, ಒಂದು ಗುರು ತಿಳಿಯುತ್ತದೆ.

ಪ್ರತಿಪಾದದ ೧೩ ಸ್ಥಾನದಲ್ಲಿ ಯತಿ ಬಂದಿದೆ. ಹಾಗೂ, ಆದಿ ಮತ್ತು ಅಂತ್ಯಪ್ರಾಸವನ್ನು ಕಾಣಬಹುದು. ಈ ಪದದಲ್ಲಿ ರೂಪಕಲಂಕಾರ ಬಂದಿರುವುದನ್ನು ಕಾಣಬಹುದು.

ಸ ಭ ರ ನ ಮ ಯ
ತಪಮಾನ್ವಾದಶದಾ ವಿಧಾನಮುಖದಿನ್ನೆಯ್ದೊನ್ದುತಾ ಧಾತ್ರಿ ಮೇಲ್

ಸ ಭ ರ ನ ಮ ಯ

೧೭ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೮೭ ಪುಟ – ೬೭
೧೮ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೧೨ ಪುಟ – ೭೩

ಚಪಲಿಲ್ಲಾ ನವಿಲೂರ ಸಂಘದ ಮಹಾನನ್ತಾ ಮತೀಗನ್ತಿಯಾರ್

ಸ ಭ ರ ನ ಮ ಯ
ವಿಮಲ ಶ್ರೀ ಕಟವಪ್ರನಲ್ಲಿರಿಯ ಮೇಲ್ನೋನ್ನೊಂದು ಸನ್ಮಾರ್ಗ್ಗದಿನ್

ಸ ಭ ರ ನ ಮ ಯ
ಉಪಮೇಲ್ಯಾ ಸುರಲೋಕ ಸೌಖ್ಯ ದೆಡೆಯನ್ತಾಮೆಯ್ದಿ ಇಪ್ಪಾಳ್ ಮನೆಮ್[೧೯]

ಈ ಶಾಸನ ಪದ್ಯದಲ್ಲಿ ಮತ್ತೇಭವಿಕ್ರೀಡಿತ ಲಕ್ಷಣವಿದ್ದು, ಪ್ರತಿಪಾದದಲ್ಲಿ ೨೦ ಅಕ್ಷರಗಳು ಬಂದಿದೆ. ಪ್ರತಿಪಾದದ ಸಭರನಮಯ ಗಣಗಳು ಬಂದು ಕೊನೆಯಲ್ಲಿ ಒಂದು ಲಘು ಒಂದು ಗುರು ಉಳಿದಿದೆ. ೧೩ನೇ ಸ್ಥಾನದಲ್ಲಿ ಯತಿ ಬಂದಿದೆ. ಪ್ರತಿ ಸಾಲಿನಲ್ಲಿ ಆದಿ ಮತ್ತು ಅಂತ್ಯ ಪ್ರಾಸ ಬಂದಿದೆ.

ನವಿಲೂರಾ ಶ್ರೀ ಸಂಘದುಳ್ಳ ಗುರವಂ ನಮೌನಿಯಾಚಾರಿಯರ್
ಅವರಾ ಶಿಷ್ಯರ ನಿನ್ದಿ ತಾರ್ಗ್ಗಿಣಿಮಿ ...... ವೃಷಭನನ್ನೀಮುನೀ
ಭವವಿಜ್ಜನ ಸುಮಾರ್ಗ್ಗದೊಳ್ಳೆ ನಡೆಗೊಂಡಾರಾಧನಾ ಯೋಗದಿನ್
ಅವರುಂ ಸಾಧಿಸಿ ಸ್ವರ್ಗ್ಗ ಲೋಕ ಸುಖಚಿತ್ತಂ .... ಮಾದಿಗಳ್[೨೦]

ಇದು ತ್ರುಟಿತವಾಗಿರುವುದರಿಂದ ಶಾಸನ ಅಸ್ಪಷ್ಟವಾಗಿದೆ. ಆದಿ ಮತ್ತು ಅಂತ್ಯ ಪ್ರಾಸ ಕಾಣಬಹುದು.

ಇದರ ಮೊದಲನೆಯ ಪಾದದ ಪಾಠ "ನವಿಲೂರಾ ಶ್ರೀ ಸಂಘದುಳ್ಳ ಗುರವಂ ನಮ್ಮಾನಿಯಾ ಚಾರಿಯರ್" ಎಂದಿದೆ. ಇದನ್ನು ಪ್ರಸ್ತಾರಿಸಿದಾಗ ಸಮಜಸತತ ಎಂದಾಗುತ್ತದೆ. ಇಂಥದೊಂದು ವೃತ್ತ ಅತಿಧೃತಿ ಛಂದೋವರ್ಗದಲ್ಲಿ ಪ್ರಸಿದ್ಧವಾಗಿದೆ. ಆದ್ದರಿಂವ ಮುಂದಿನ ಪಾದಗಳಿಗೆ ಮುಂದುವರಿದು ಪ್ರಸ್ತಾರ ಹಾಕಿದರೆ, ಅಲ್ಲಿ ಕೆಲವು ಕಡೆ ಅಕ್ಷರಗಳು ಸ್ಖಲಿತವಾಗಿದ್ದು ಸಭರನಮಯ ಎಂಬ ಗಣ ಬಂದಿರುವುದು ತೋರುತ್ತದೆ. ಇರು ವೈರಾಗ ಮೊದಲ ಪಾದದ ಪಾ..... ಬಹು ಮಟ್ಟಿಗೆ ಅದೇ ಗಣ ವಿನ್ಯಾಸದಲ್ಲಿದ್ದಿರಬಹುದೆಂದು ಭಾವಿಸಲು ಅವಕಾಶವಾಗುತ್ತದೆ. ಕೆಟ್ಟಿರುವ ಪಾಠವನ್ನು ಊಹಾರ್ತ್ವ ಪರಿಷ್ಕರಣದ ಬಲದಿಂದ ಸರಿಪಡಿಸಿ" ನವಿಲೂರಾ ಸಿರಿ ಸಂಘದುಳ್ಳ ಗುರವಂ ನಮ್ಮಾನಿಯಾ ಚಾರಿಯಾರ್" ಎಂದು ಮಾಡಿಕೊಂಡರೆ ಪಾಠ ಸರಿಯಾಗುತ್ತದೆ.[೨೧]

---

೧೯ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೧೩ ಪುಟ – ೭೩
೨೦ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೨೧
೨೧ ಕನ್ನಡ ಸಾಹಿತ್ಯ ಚರಿತ್ರೆ – ೨ ಪುಟ – ೪೭೨ ಮೈಸೂರು ವಿಶ್ವವಿದ್ಯಾನಿಲಯ

ಉತ್ಪಲಮಾಲೆ

ಭ ರ ನ ಭ ಭ
ದಕ್ಷಿಣ ಭಾಗದಾ ಮದುರೆ ಉಯ್ಯೆನಿತಾವ ಶಾಪದೆ ಪಾವು ಮುಟ್ಟಿದೋನ್

ಭ ರ
ಲಕ್ಷಣ ವಸ್ತರೆಸ್ತೆನಲೊ ಉರಗ ..... ಗೀ ಮಹಾಪರೊತ್ತದುಳ್

ಭ ರ ನ ಭ ಭ ರ
ಅಕ್ಷಯ ಕೀರ್ತಿ ತುಸ್ತಕದ ವಾರ್ದ್ಧಿಯ ಮೇಲದು ನೋಸ್ತು ಭಕ್ತಿಯಿಮ್

ಭ ರ ನ ಭ
ಅಕ್ಷಿಮಣಕ್ಕೆ ರಮ್ಯಸುರ ಲೋಕಸುಕಕ್ಕೆ ಭಾಗಿ ತಿ.......²²

ಈ ಶಾಸನ ಪದ್ಯದಲ್ಲಿ ೩ನೇ ಸಾಲು ಮಾತ್ರ ಉತ್ಪಲಮಾಲೆಯ ವೃತ್ತದಲ್ಲಿದೆ. ಉಳಿದ ಸಾಲುಗಳಲ್ಲಿ ಭರನಭ ಗಣಗಳು ಬಂದು ಮುಂದಕ್ಕೆ ಛಂದಸ್ಸು ಕೆಟ್ಟಿದೆ. ೧ನೇ ಸಾಲಿನಲ್ಲಿ ೨೦ ಅಕ್ಷರಗಳ ಬದಲಾಗಿ ೨೨ ಅಕ್ಷರ ಬಂದಿವೆ. ಇದು ಶಾಸನ ಬರೆಯುವರ ತಪ್ಪಾಗಿರಬಹುದು ಅಥವಾ ಶಾಸನವನ್ನು ಸರಿಯಾಗಿ ಓದಿಲ್ಲದಿರಬಹುದು. ಒಟ್ಟಿನಲ್ಲಿ ೩ನೇ ಸಾಲಿನ ಆಧಾರದಿಂದ ಉಳಿದ ಸಾಲುಗಳೂ ಕೂಡ ಉತ್ಪಲಮಾಲೆಯಾಗಿದೆ ಎನ್ನಬಹುದು ಇಲ್ಲಿ ೧೧ನೇ ಸ್ಥಾನದಲ್ಲಿ ಯತಿ ಬರಬೇಕಿತ್ತು. ಯತಿ ಪಾಲನೆಯಾಗಿಲ್ಲ ಆದಿಪ್ರಾಸ, ಅಂತ್ಯಪ್ರಾಸ ಹಾಗೂ ವಿನುತ ಪ್ರಾಸ ಬಂದಿರುವುದನ್ನು ಕಾಣಬಹುದು.

ಭ ರ ನ ಭ
ಸುನ್ದರ ಪೆಮ್ಪುದುಗ್ರ ತಪದೋಗಿದ .... ವಾರ್ಧನಿನ್ದ್ಯಮೆನ್ದುವೆನ್

ಭ ರ ನ ಭ ಭ ರ
ಬನ್ದಸುರಾಗ ವನ್ದು ಬಲಗೊಣ್ಡು ಮಹೋತ್ಸವ ದೇಜೆ ಶೈಲಮಾನ್

ಭ ರ ನ
ಸುನ್ದರಿ ಸೌಚ ದಾರ್ಯ್ಯದಜಿದೆ .... ದು ವಿಮಾನ ಮೊದಿಪ್ಪಿ ಚಿತ್ರದಿಮ್

ಭ ರ ನ

ಇನ್ದ್ರಸಮಾನ ಮೆಪ್ಪ ಸುಖ ...... ಣ್ಡದೆ ...... ಕ್ಷಣದೆಯ್ದಿ ಸ್ವರ್ಗ್ಗವಾ ....[೨೩]

ಈ ಶಾಸನ ಪದ್ಯ ತ್ರುಟಿತವಾಗಿದ್ದರೂ ಉತ್ಪಲೆಮಾಲೆಯ ಎಲ್ಲಾ ಲಕ್ಷಣವನ್ನು ಹೊಂದಿದೆ. ೨ನೇ ಸಾಲು ಮಾತ್ರ ಸ್ಪಷ್ಟವಾಗಿದ್ದು ಈ ಸಾಲಿನಲ್ಲಿ ಕ್ರಮವಾಗಿ ಭರನಭಭರ ಗಣಗಳು ಬಂದು ಕೊನೆಯಲ್ಲಿ ಒಂದು ಲಘು ಒಂದು ಗುರು ಉಳಿದಿದೆ. ೨೦ ಅಕ್ಷರಗಳಿವೆ. ಉಳಿದ ಸಾಲುಗಳಲ್ಲಿ ಭರನಭ ಗಣ ಬಂದು ಮುಂದಕ್ಕೆ ಶಾಸನ ತ್ರುಟಿತವಾಗಿದೆ ಆದರೂ ಈ ಮೂರು ಸಾಲುಗಳಲ್ಲಿ ಉತ್ಪಲಮಾಲೆಯನ್ನು ಗುರ್ತಿಸಬಹುದು.

ಪ್ರತಿ ಸಾಲಿನಲ್ಲಿ ೧೧ನೇ ಸ್ಥಾನದಲ್ಲಿ ಯತಿ ಬಂದಿರುವುದನ್ನು ಕಾಣಬಹುದು. ಪ್ರತಿಪಾದದಲ್ಲಿ ಆದಿಪ್ರಾಸ ಮತ್ತು ಅಂತ್ಯ ಪ್ರಾಸ ಬಂದಿರುವುದನ್ನು ಕಾಣಬಹುದು.

ಚಂಪಕಮಾಲೆ

.... ಯರುಳ್ಳರಿಪೀಠದಿಟ್ಟೊನಾನ್

...... ತಾರಿ ಕುಮಾರರಿ ನರ್ಚ್ಚಿಕೆಯ್ಯೆ ತಾಂ

ನ ಜ ಭ

ಸ್ಥಿರ ದರಳಿನ್ತು ಪೇಗುರಮಂ ಸುರಲೋಕ ವಿಭೂತಿ ಎಯ್ದಿದಾರ್[೨೪]

ಈ ಶಾಸನವನ್ನು ಡಾ॥ ಎಂ.ಎಂ. ಕಲಬುರ್ಗಿಯವರು ಚಂಪಕಮಾಲೆ ಎಂದು ಗುರ್ತಿಸಿದ್ದಾರೆ.[೨೫] ಆದರೆ ಈ ಶಾಸನದಲ್ಲಿ ಚಂಪಕಮಾಲೆಯ ಯಾವ ಲಕ್ಷಣವೂ ಕಾಣುತ್ತಿಲ್ಲ. ನಜಭಗಣ ಮಾತ್ರ ಕೊನೆಯ ಸಾಲಿನಲ್ಲಿ ಕಾಣಿಸಿಕೊಂಡಿದೆ. ಮುಂದಕ್ಕೆ ಛಂದಸ್ಸು ಹದಗೆಟ್ಟಿದೆ. ಚಂಪಕಮಾಲೆ ವೃತ್ತದ ಪ್ರಕಾರ ನಜಭಜಜಜರಗಣಗಳು ಬರಬೇಕಿತ್ತು. ಹಾಗೂ ೨೧ ಅಕ್ಷರಗಳು ಇರಬೇಕಿತ್ತು. ಈ ಪದ್ಯದಲ್ಲಿ ೨೦ ಅಕ್ಷರಗಳು ಬಂದಿವೆ. ಆದರೂ ಕೊನೆಯ ಸಾಲಿನಲ್ಲಿ ನಜಭ ಗಣ ಪ್ರಾರಂಭದಲ್ಲಿ ಬಂದಿರುವುದರಿಂದ ಬಹುಶಃ ಚಂಪಕಮಾಲೆಯಾಗಿರಬಹುದು.

ನ ಭ ಜ ಜ

ಅನವರ ತನ್ನಾಳೆಪ್ಪ ಛೃತಸಯ್ಯ ಮಮೆನ್ತೆ ವಿಚ್ಚೆಯಂ

ವನದೊಳ ಯೋಗ್ಯ .... ನಕ್ಕುಮದಿ ..... ಗಳೂ ......

---

೨೩. E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೮೯ ಪುಟ – ೬೮

೨೪ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೨೯ ಪುಟ – ೧೨

೨೫ ಡಾ॥ ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಪುಟ – ೧೩೭

ಮನವಮಿಕ್ಕುತ .... ರದಿ .... ನೋನ್ತು ಸಮಾಧಿ ಕೂಡಿದೊಂ

ನ

ಅನುಪಮ ದಿವ್ಯಪ್ಪದು ಸುರಲೋಕದ ಮಾರ್ಗ್ಗದೊಳಿವ್ದರಿಸ್ಬಿನಿಮ್[೨೬]

ಈ ಶಾಸನ ಪದ್ಯವನ್ನು ಚಂಪಕಮಾಲೆ ಎಂದು ಗುರ್ತಿಸಿದ್ದಾರೆ.[೨೭] ಆದರೆ ಈ ಪದ್ಯದಲ್ಲಿ ಚಂಪಕಮಾಲೆಯ ಯಾವ ಲಕ್ಷಣವೂ ಕಾಣುತ್ತಿಲ್ಲ. ಆದಿಪ್ರಾಸವನ್ನು ಕಾಣಬಹುದು.

ಮಲ್ಲಿಕಾಮಾಲೆ

ರ ಸ ಜ ಜ ಭ ರ
ಭದ್ರಬಾಹುಸ ಚನ್ದ್ರ ಗುಪ್ತ ಮುನೀನ್ದ್ರ ಯುಗ್ಮದಿನೊಪ್ಪೆವಲ್
ರ ಸ ಜ ಜ ಭ ರ
ಭದ್ರಮಾಗಿದ ಧರ್ಮಮನ್ದುವಣಿ ಕ್ಕೆ ವನ್ದಿನಿ ಸಳ್ಕಲೋ
ರ ಸ ಜ ಜ ಭ ರ
ವಿದ್ರುಮಾಧರ ಶಾನ್ತಿ ಸೇನ ಮುನೀಶ ನಾಕ್ಕಿ ಏ ವೆಳ್ಗೊಳ
ರ ಸ ಜ ಜ ಭ ರ
ಆದ್ರಿ ಮೇಲಶನಾದಿ ವಿಟ್ರ ಪುನರ್ಭವಕ್ಕೆಜೆ ಆಗಿ ....[೨೮]

ಈ ಶಾಸನ ಪದ್ಯವು ಮಲ್ಲಿಕಾಮಾಲೆ ವೃತ್ತದ ನಿಯಮದಲ್ಲಿದೆ. ನಾಲ್ಕು ಸಾಲುಗಳಿವೆ. ಪ್ರತಿಪಾದದಲ್ಲಿ ೧೮ ಅಕ್ಷರಗಳು ಬಂದಿವೆ. ಪ್ರತಿಸಾಲಿನಲ್ಲಿ ರಸಜಜಭರ ಗಣಗಳು ಬಂದಿವೆ. ಆದಿ ಮತ್ತು ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು. ಮಲ್ಲಿಕಾ ಮಾಲಾ ವೃತ್ತದ ಪ್ರಕಾರ ೮ ಅಥವಾ ೧೦ನೇ ಸ್ಥಾನದಲ್ಲಿ ಯತಿ ಬರಬೇಕಿತ್ತು. ಈ ಪದ್ಯದಲ್ಲಿ ಯತಿ ಉಲ್ಲಂಘನೆಯಾಗಿದೆ.

ವಸಂತ ತಿಲಕ

ತ ಭ ಜ
ಅಜ್ಗದಿ ನಾಮನನೇಕಂ ಗುಣಕೀರ್ತ್ತಿದೇನ್ತಾನ್
ತ ಭ ಜ ಜ
ತುಂಗೋಚ್ಚ ಭಕ್ತಿವಶ ದಿನ್ತೊಜಿದಿಲ್ಲಿ ದೇಹಮ್

---

೨೬ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ –೧೨೩ ಪುಟ – ೭೬

೨೭ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೨೩ ಪುಟ – ೭೬

೨೮ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೩೪, ಪುಟ – ೧೩

ತ ಭ ಜ ಜ

ಪೊಜ್ಜೊಳಿವ ಚಿತ್ರಗಿರಿ ಕೊಟಮಯಂ ಕುಚೇಲಮ್[೨೯]

ಈ ಶಾಸನ ಪದ್ಯವು ವಸಂತ ತಿಲಕ ವೃತ್ತದ ನಿಯಮದಲ್ಲಿದೆ. ನಾಲ್ಕು ಸಾಲುಗಳು ಬರಬೇಕಿತ್ತು ಒಂದು ಸಾಲು ತ್ರುಟಿತವಾಗಿರುವಂತೆ ಕಾಣುತ್ತದೆ. ಮೊದಲನೆಯ ಸಾಲಿನಲ್ಲಿ ೩ನೇ ಗಣವು ಜಗಣವಾಗಬೇಕಿತ್ತು ತಗಣಬಂದಿದೆ. ಆದರೆ ಉಳಿದ ೨ ಸಾಲುಗಳಲ್ಲಿ ವಸಂತ ತಿಲಕ ವೃತ್ತದ ನಿಯಮದ ಪ್ರಕಾರ ತಭಜಜಗಣಗಳು ಬಂದು ಕೊನೆಯಲ್ಲಿ ೨ ಗುರು ಉಳಿದಿವೆ ಒಟ್ಟು ೧೪ ಅಕ್ಷರಗಳಿವೆ. ಆದಿ ಮತ್ತು ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಶಾಸನದ ಪದ್ಯದ ಬಗ್ಗೆ ಈ ರೀತಿ ಹೇಳಿದ್ದಾರೆ "೩ ಪಾದಗಳು ಮಾತ್ರವೇ ಇರುವ ಒಂದು ಪದ್ಯ ಶಾಸನ, ಇನ್ನೊಂದು ಪಾದ ಏಕಿಲ್ಲ ? ಪಂಪವಾದಿಯಾದ ವರ್ಣ ವೃತ್ತಗಳಿರುವಂತೆಯೇ ತ್ರಿಪಾದಿಯಾದ ವರ್ಣ ವೃತ್ತಗಳೂ ಇರಬಹುದೆ ? ಆದರೆ ಕೆತ್ತ ಬೇಕಾಗಿದ್ದ ಇನ್ನೊಂದು ಸಾಲನ್ನು ಕೆತ್ತದೇ ಬಿಟ್ಟಿರುವುದು ಈ ನಿದರ್ಶನದಲ್ಲಿ ಸಾಧ್ಯ. ಏಕೆಂದರೆ ಶಾಸನದ ಅರ್ಥ ಪೂರ್ತಿಯಾದಂತೆ ತೋರುವುದಿಲ್ಲ".[೩೦]

ವಂಶಸ್ಥ

ಜ ತ ಜ ರ

ಶುಭಾನ್ವಿತ ಶ್ರೀ ನಮಿಲೂರ ಸಂಘದಾ

ಜ

ಪ್ರಭಾವತೀ ....

ಜ ತ ಜ ರ

ಪ್ರಭಾಖ್ಯ ಮೀ ಪರ್ವ್ವತದುಳ್ಳೆ ನೋನ್ತು ತಾಮ್

ಜ ತ ಜ ರ

ಸ್ವಭಾವ ಸೌನ್ದರ್ಯ್ಯ ಕರಾಜ್ಗ ರಾಧಿಪರ್[೩೧]

ಈ ಶಾಸನ ಪದ್ಯವು ವಂಶಸ್ಥ ವೃತ್ತದ ನಿಯಮದಲ್ಲಿದೆ. ೨ನೇ ಸಾಲು ತ್ರುಟಿತವಾಗಿದೆ. ಉಳಿದ ೩ ಸಾಲುಗಳಲ್ಲಿ ೧೨-೧೨ ಅಕ್ಷರಗಳು ಬಂದಿವೆ. ಪ್ರತಿ ಸಾಲಿನಲ್ಲಿ ಜತಜರ ಗಣಗಳು ಬಂದಿವೆ. ಈ ಪದ್ಯದ ಪ್ರತಿ ಸಾಲಿನಲ್ಲಿ ಆದಿಪ್ರಾಸ ಬಂದಿರುವುದನ್ನು ಕಾಣಬಹುದು.

---

೨೯ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೨೦ ಪುಟ – ೭೫

೩೦ ಕನ್ನಡ ಸಾಹಿತ್ಯ ಚರಿತ್ರೆ – ೦೨ ಪುಟ – ೪೭೩ ಮೈಸೂರು ವಿಶ್ವವಿದ್ಯಾನಿಲಯ

೩೧ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩೨ ಪುಟ – ೭೮

ರಥೋದ್ಧತ

ರ ನ ರ
ನಾಗಸೇನ ಮನಘಂ ಗುಣಾಧಿಕಂ

ರ ನ ರ
ನಾಗನಾಯಕ ಜಿತಾರಿಮಣ್ಡಲಂ

ರ ನ
ರಾಜಪೂಜ್ಯ ಮಮಲಶ್ರೀ ಯಾಸ್ಪದಂ

ರ ನ ರ
ಕಾಮದಂ ಹತಮದಂ ನಮಾಮ್ಯಹಂ[೩೨]

ಈ ಶಾಸನಪದ್ಯ ರಥೋದ್ಧತ ವೃತ್ತದ ನಿಯಮದಲ್ಲಿದೆ. ಈ ಶಾಸನದಲ್ಲಿ ನಾಲ್ಕು ಪಾದಗಳಿವೆ. ಪ್ರತಿಪಾದದಲ್ಲಿ ೧೧ ಅಕ್ಷರಗಳು ಬಂದಿವೆ. ಪ್ರತಿಸಾಲಿನಲ್ಲಿ ರನರಗಣಗಳು ಬಂದು ಕೊನೆಯಲ್ಲಿ ಒಂದು ಲಘು, ಒಂದು ಗುರು ಉಳಿದಿದೆ. ೩ನೇ ಸಾಲಿನಲ್ಲಿ ರಗಣದ ಬದಲಾಗಿ ಮಗಣ ಬಂದಿದೆ. 'ಶ್ರೀ' ಎಂಬ ಅಕ್ಷರದಲ್ಲಿ ದೀರ್ಘ ತೆಗೆದು 'ಶ್ರಿ' ಎಂದು ಮಾಡಿದರೆ ರಗಣ ಬರುತ್ತದೆ. ಈ ಶಾಸನದಲ್ಲಿ ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು.

ಮಂಗಲಮಂಗನಾ ವೃತ್ತ

ನ ಭ ಜ ಜ ಜ
ತನಗೆ ಮೃತ್ಯುವರ ಪಾನಜಿದೆನ್ದು ಸುಪಣ್ಡಿತನ್

ನ ಭ ಜ ಜ ಜ
ಅನೇಕ ಶೀಲಗುಣ ಮಾಲೆಗಳನ್ನಗಿ ದೊಪ್ಪಿದೋನ್

ನ ಭ ಜ ಜ ಜ
ವಿನಯ ದೇವ ಸೇನ ನಾಮಮಹಾಮುನಿ ನೋನ್ತುಪಿನ್

ನ ಭ ಜ ಜ ಜ
ಇನದಜಿಮ್ದು ಪಳಿತಜ್ಕದೆ ತಾನ್ದಿವ ಮೇಜಿದಾನ್[೩೩]

---

೩೨ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೩೭ ಪುಟ – ೧೪
೩೩ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩೦ ಪುಟ - ೭೭

ಈ ಶಾಸನ ಪದ್ಯವು ಮಂಗಲಮಂಗನಾವೃತ್ತದ ನಿಯಮದಲ್ಲಿದೆ. ನಾಲ್ಕು ಸಾಲುಗಳಿಂದ ಕೂಡಿದೆ. ಪ್ರತಿಸಾಲಿನಲ್ಲಿ ೧೬ ಅಕ್ಷರಗಳು ಬಂದಿವೆ. ಪ್ರತಿಪಾದದಲ್ಲಿ ನಭಜಜಜಂಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿದಿದೆ. ಮಂಗಳಾ ಮಂಗನಾ ವೃತ್ತ ವಿದಳೂರ ಕನ್ನಡ ಸಾಹಿತ್ಯದ ವೃತ್ತಗಳಲ್ಲಿ ಒಂದು. ಶಾಸನ ವೃತ್ತದಲ್ಲಿ ೨ನೇಯ ಪಾದದ ೧ನೇ ಗಣ ನಗಣವಾಗುವುದರ ಬದಲು ರಗಣವಾಗಿದೆ ಇಲ್ಲಿ 'ನೇ' ಎಂಬ ದೀರ್ಘವನ್ನು ತೆಗೆದರೆ (ನೆ) ನಗಣವಾಗುತ್ತದೆ. ಇದರಿಂದ ಅರ್ಥವೂ ಕೆಡುವುದಿಲ್ಲ. ಈ ಶಾಸನದಲ್ಲಿ ಆದಿ ಮತ್ತು ಅಂತ್ಯಪ್ರಾಸ ಬಂದಿರುವುದನ್ನು ಕಾಣಬಹುದು. ೮ನೇ ಸ್ಥಾನದಲ್ಲಿ ಯತಿ ಪಾಲನೆಯಾಗಿಲ್ಲ.

ಅನೇಕ ಶೀಲಗುಣ ದೊಪ್ಪಿದೊರಿಸ್ತು ಲೆಕ್ಕಿಸದುಮ್

ನನಗೆ ನ್ಸೊದ್ರು ಮುನಿ ಯಿಂದಳ ಪೆಚ್ಚಲೆ ನೋಸ್ತುತಾಮ್

ತಮಗೆ ಮೃತ್ಯುವರ ವಾನಜಿದಂ ಶ್ರೀ ಪುತ್ರಿಯ[34]

ಈ ಶಾಸನ ಪದ್ಯವನ್ನು ಎಂ.ಎಂ. ಕಲಬುರ್ಗಿಯವರು ಮಂಗಳ ವೃತ್ತವೆಂದು ಗುರ್ತಿಸಿದ್ದಾರೆ.[35] ಆದರೆ ಮಂಗಳ ವೃತ್ತದ ಯಾವನಿಯಮವೂ ಇಲ್ಲಿ ಕಾಣಲಾಗದು. ಆದಿಪ್ರಾಸ ಬಂದಿರುವುದನ್ನು ಕಾಣಬಹುದು. ಇದು ಕುತೂಹಲಕಾರಿ ರಚನೆಯಾಗಿದ್ದು, ಒಟ್ಟಿನಲ್ಲಿ ಇದು ಮಂಗಲಮಂಗನಾ ವೃತ್ತವೆಂದೂ ಅದರಲ್ಲಿ ಕವಿ ಸ್ವಾತಂತ್ರ್ಯ ಮೂಲವಾಗಿ ವ್ಯತ್ಯಾಸಗಳಾಗಿವೆಯೆಂದೂ ತಿಳಿದರೆ ತಪ್ಪಾಗಲಾರದು.

ಶ್ಲೋಕಗಳು

ಶ್ಲೋಕ ಅಥವಾ ಆನುಷ್ಟುಬ್ ಛಂದಸ್ಸು ವೈದಿಕ ಛಂದಸ್ಸಿನ ೨ನೇ ಭಾಗದಲ್ಲಿ ಬರುವಂತಹದು. ಈ ಆನುಷ್ಟುಬ್ ಛಂದಸ್ಸು ಮೊದಲು ೮ ಅಕ್ಷರಗಳ ೪ ಪಾದಗಳಿಂದ ಕೂಡಿದ್ದವು. ನಂತರ ಇದು ಎರಡೇ ಪದಗಳಾಗಿ, ಮೊದಲನೆಯ ಮತ್ತು ಮೂರನೆಯ ಪಾದಗಳ ಕಡೆಯ ಗಣದ ದ್ವಿಲಗು (∪ –, ∪ –) ಲಕ್ಷಣ ಮಾರ್ಪಟ್ಟು, ಲೌಕಿಕ ಕಾವ್ಯದ ಶ್ಲೋಕವಾಯಿತು.[36]

ಈ ಶ್ಲೋಕ ಅಥವಾ ಆನುಷ್ಟುಪ್ ಛಂದಸ್ಸನ್ನು ಕನ್ನಡ ಕವಿಗಳು ಮೊದಲು ಹೆಚ್ಚಾಗಿ ಬಳಸಿಕೊಂಡರೋ ಇಲ್ಲವೋ ಹೇಳುವುದು ಕಷ್ಟ.. ಆದರೆ ಕವಿರಾಜಮಾರ್ಗದಲ್ಲಿ ಇದರ ಸುಳಿವು ಕಾಣುತ್ತದೆ. ಒಂದು ವೇಳೆ ಆನುಷ್ಟುಪ್ಪನ್ನು ಪ್ರಯೋಗಿಸಿ ನೋಡಿ ಕನ್ನಡ ಭಾಷೆಗೆ ಹೊಂದುವುದಿಲ್ಲ[37] ವೆಂದು ಬಿಟ್ಟಿರಬಹುದು.

೩೪ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩೩ ಪುಟ – ೭೮

೩೫ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೭

೩೬ ಕನ್ನಡ ಕೈಪಿಡಿ ಭಾಗ – ೦೧, ಪುಟ – ೧೧೧

೩೭ ಅದೇ ಪುಟ – ೧೧೨

ಅದೇ ರೀತಿ ಕ್ರಿ.ಶ. ೮೦೦ರ ವರೆಗಿನ ಕನ್ನಡ ಶಾಸನಗಳಲ್ಲಿ ಶ್ಲೋಕಗಳು ಕಂಡು ಬಂದಿಲ್ಲ. ೮೦೦ರವರೆಗೆ ಕಂಡು ಬಂದಿರುವ ಶ್ಲೋಕಗಳೆಲ್ಲ ಸಂಸ್ಕೃತವೇ ಆಗಿದೆ. ಬಹುಶಃ ೮೦೦ರ ನಂತರ ಬಂದಂತಹ ಶಾಸನಗಳಲ್ಲಿ ಕನ್ನಡ ಶ್ಲೋಕಗಳು ಕಂಡು ಬಂದಿರಬಹುದು. ಇಲ್ಲಿ ಕ್ರಿ.ಶ. ೮೦೦ರ ವರೆಗೆ ಸುಮಾರು ೦೬ ಶ್ಲೋಕಗಳು ಕಂಡು ಬಂದಿವೆ. ಅವುಗಳ ಚರ್ಚೆಯನ್ನು ಇಲ್ಲಿ ಮಾಡಲಾಗಿದೆ.

ಜಿತಮ್ಭಗವತಾ ಶ್ರೀ ಮದ್ಧರ್ಮ್ಮತೀರ್ತ್ಥ ವಿಧಾಯಿನಾ

ವರ್ದ್ಧಮಾನೇನ ಸಮ್ಪ್ರಾಪ್ತಸಿದ್ಧಿ ಸೌಖ್ಯಾಮೃತಾತ್ಮನಾ[೩೮]

ಈ ಶಾಸನ ಪದ್ಯದ ಶ್ಲೋಕ ಆನುಷ್ಟುಬ್ ಛಂದಸ್ಸಿನ ನಿಯಮದಲ್ಲಿದೆ ೧ ಮತ್ತು ೨ನೇ ಸಾಲಿನಲ್ಲಿ ಶ್ಲೋಕದ ಲಕ್ಷಣವಾದ ದ್ವಿಲಗು (∪–, ∪–) ಗಣಗಳು ಕಂಡು ಬಂದಿದೆ.

ಲೋಕಾಲೋಕದ್ವಯಾಧಾರಮ್ ವಸ್ತು ಸ್ಥಾಸ್ನು ಚರಿಷ್ಣು ವಾ

ಸಂವಿದಾಲೋಕ ಶಕ್ತಿಃ ಸ್ವಾವ್ಯಶ್ನುತೇ ಯಸ್ಯ ಕೇವಲಾ[೩೯]

ಇಲ್ಲಿಯೂ ಕೂಡ ಶ್ಲೋಕದ ನಿಯಮದಂತೆ ಪ್ರತಿ ಸಾಲಿನಲ್ಲಿ ೧೬ ಅಕ್ಷರಗಳು ಬಂದಿವೆ. ಹಾಗೂ ೧ ಮತ್ತು ೨ನೇ ಸಾಲಿನ ಕೊನೆಯಲ್ಲಿ ದ್ವಿಲಗು (∪–, ∪–) ಗಣಗಳು ಬಂದಿವೆ.

ಅಹೋಬಹಿರ್ಗ್ಗಿರನ್ತ್ಯ ಕ್ತಾವ ಬಲದೇವ ಮುನಿಶ್ರೀಮಾನ್

ಆರಾಧನಮ್ಪ್ರ ಗೃಹೀತ್ವಾ ಸಿದ್ಧಲೋಕಂ ಗತಙ್ಪುನಃ[೪೦]

ಈ ಶಾಸನದಲ್ಲಿ ಪ್ರತಿಸಾಲಿನಲ್ಲಿ ೧೬ ಅಕ್ಷರಗಳಿದ್ದು, ೧ನೇ ಸಾಲಿನಲ್ಲಿ ದ್ವಿಲಗು ಗಣಗಳು ಬಂದಿಲ್ಲ. ಬದಲಾಗಿ (∪ – – –) ಗಣಗಳು ಬಂದಿವೆ. ೨ನೇ ಸಾಲಿನಲ್ಲಿ ದ್ವಿಲಗುಗಣಗಳು ಬಂದಿರಬಹುದು.

ಆಚಾರ್ಯ್ಯೋರಿಷ್ಟ ನೇಮೀಶಃ ಶುಕ್ಲಧ್ಯಾನೋರುವಾರಣಮ್

ಸಮಾರುಹ್ಯ ಗತಸ್ಸಿದ್ಧಿಮ್ ಸಿದ್ಧ ವಿದ್ಯಾಧರಾರ್ಚ್ಚಿತಃ[೪೧]

---

೩೮ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೦೧ ಪುಟ – ೦೩

೩೯ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೦೧ ಪುಟ – ೦೩

೪೦ E.C.02, ಶ್ರವಣಬೆಳಗೊಳ ಶಾಸನಸಂಖ್ಯೆ – ೦೨, ಪುಟ – ೦೫

೪೧ E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩ ಪುಟ – ೦೭

ಈ ಶಾಸನ ಪದ್ಯದಲ್ಲಿ ಶ್ಲೋಕದ ನಿಯಮದಂತೆ ಪ್ರತಿ ಸಾಲಿನಲ್ಲಿ ೧೬ ಅಕ್ಷರಗಳು ಬಂದು, ೧ ಮತ್ತು ೨ನೇ ಸಾಲಿನಲ್ಲಿ ದ್ವಿಲಗುಗಳು ಬಂದಿವೆ.

ಬೋಧ್ಯಾತಿರೇಚ್ಯ ಕೈವಲ್ಯ ಬೋಧ ಪ್ರಾರ್ದ್ವ ಮಹೌಜಸೇ

ಈಶಾನಾಯ ನಮೋ ಯೋಗಿನಿಷ್ಠಾಯಾ ಪ್ಪರಮೇಷ್ಠಿನೇ[೪೨]

ಇಲ್ಲಿಯೂ ಶ್ಲೋಕದ ನಿಯಮದ ಎಲ್ಲಾ ಲಕ್ಷಣಗಳಿದ್ದು ೧ ಮತ್ತು ೨ನೇ ಸಾಲಿನ ಕೊನೆಯಲ್ಲಿ ದ್ವಿಲಗುಗಣಗಳು ಬಂದಿವೆ.

ಮಯೂರ ಗ್ರಾಮ ಸಂಘಸ್ಯ ಸೌನ್ದರ್ಯ್ಯಾ ಆರ್ಯನಾಮಿಕಾ

ಕಟಪ್ರಗಿರಿ ಶೈಲೇ ಚ ಸಾಧಿತಸ್ಯ ಸಮಾಧಿತಃ[೪೩]

ಈ ಶಾಸನದಲ್ಲಿ ಶ್ಲೋಕದ ಎಲ್ಲಾ ನಿಯಮಗಳಿವೆ.

ಗ್ರಾಮೇ ಮಯೂರ ಸಂಘೇಸ್ಯ ಆರ್ಯಿಕಾದ ಮಿತಾಮತೀ

ಕಟ್ಟಪ್ರಗಿರಿ ಮಧ್ಯಸ್ಥಾ ಸಾಧಿತಾ ಚ ಸಮಾಧಿತಾ[೪೪]

ಈ ಶಾಸನ ಪದ್ಯದಲ್ಲಿಯೂ ಕೂಡ ಶ್ಲೋಕದ ನಿಯಮದಂತೆ ಪ್ರತಿಸಾಲಿನಲ್ಲಿ ೧೬ ಅಕ್ಷರಗಳು ಬಂದು, ೧ ಮತ್ತು ೨ನೇ ಸಾಲಿನ ಕೊನೆಯಲ್ಲಿ ದ್ವಿಲಗು ಗಣಗಳು ಬಂದಿವೆ.

ಮುಖ್ಯವಾಗಿ ಲಿಪಿಯ ಆಧಾರದ ಮೇಲೆ, ಕೆಲವೊಮ್ಮೆ ಐತಿಹಾಸಿಕ ಸಾಕ್ಷ್ಯಗಳ ಆಧಾರದ ಮೇಲೆ ಸು ೭-೮ನೇ ಶತಮಾನಗಳಿಗೆ ಸೇರಿದವೆಂದು ಗೊತ್ತು ಮಾಡಿರುವ ಶ್ರವಣಬೆಳಗೊಳದ ಶಾಸನ ಪದ್ಯಗಳು ಭಾಷೆ – ಛಂದಸ್ಸುಗಳ ದೃಷ್ಟಿಯಿಂದ ಈಚಿನ ವ್ಯಾಕರಣ ಛಂದಶಾಸ್ತ್ರಗಳ ಕಟ್ಟು ಕಟ್ಟಳೆಗಳಿಗೆ ಒಳಪಡುವ ರೀತಿಯ ರಚನೆಗಳನ್ನು ಅಲ್ಲಲ್ಲಿ ಮನಗಾಣಿಸುತ್ತವೆಯೆಂಬುದರಲ್ಲಿ ಸಂದೇಹವಿಲ್ಲ. ಪ್ರಯೋಗಶೀಲ, ಪರಿಣಿತಿ ಎರಡಕ್ಕೂ ನಿದರ್ಶನಗಳು ತೋರುತ್ತಿರುವುದನ್ನು ಗಮನಿಸಿದರೆ, ಪ್ರಾಯಶಃ ಪೂರ್ವದ ಹಳಗನ್ನಡ ಹಳಗನ್ನಡಕ್ಕೆ ತಿರುಗುತ್ತಿರುವ ಭಾಷಾ ಸ್ಥಿತಿಗೆ ಅನುಗುಣವಾಗಿ ಛಂದಃ ಪ್ರಯೋಗಗಳ ತೀರ ಪ್ರಾಚೀನ ಕಾಲದಲ್ಲಿ ಪರಿಷ್ಕೃತ ಛಂದಸ್ಸಿನ ಪರಿಣತಿಯ ಕಾಲದ ಕಡೆಗೆ ಸಾಗುವ ಯತ್ನದಲ್ಲಿದ್ದಿರಬಹುದೆಂದು ತೋರುತ್ತದೆ.

ಕ್ರಿ.ಶ. ೮೦೦ರ ವರೆಗೆ ತ್ರಿಪದಿ, ಪಿರಿಯಕ್ಕರ, ದ್ವಿಪದಿ, ಕಂದಗಳಿಗೆ ಸಂಬಂಧಪಟ್ಟ ಶಾಸನಗಳು ಸಿಕ್ಕಿವೆ.

ತ್ರಿಪದಿಗಳು – ೧೪

---

೪೨ **E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೯೧ ಪುಟ – ೭೮**

೪೩ **E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೨೩ ಪುಟ – ೭೬**

೪೪ **E.C.02, ಶ್ರವಣಬೆಳಗೊಳ ಶಾಸನ ಸಂಖ್ಯೆ – ೧೩೨ ಪುಟ – ೭೮**

ಬಾದಾಮಿ ಶಾಸನದಲ್ಲಿ – ೦೪ (I.A. X P .61)

ಹುಮ್ಮಚ ಶಾಸನದಲ್ಲಿ – ೦೫ (E.C.VIII, ನಗರ ೬೩ ಹುಮ್ಮಚ)

ಸೊರಬದ ಶಾಸನದಲ್ಲಿ – ೦೫/೧೪ (E.C.VIII, ಸೊರಬ ೨೨)

ಪಿರಿಯಕ್ಕರ – ೦೨

ಕರ್ನಾಟಕದ ಇತಿಹಾಸ ಸಾಂಸ್ಕೃತಿಕ ಚರಿತ್ರೆ : ಪು : ೧೨೩

ದ್ವಿಪದಿ – ೦೨

ಕುರುವಘಟ ಶಾಸನ – ೦೧ (ಆಂಧ್ರಪ್ರದೇಶ – ೩, ನಂ. ೨೯, ಪು. ೩೯)

ಬಾದಾಮಿ ಶಾಸನ – ೦೧ (ಕ.ಇ. ಪ್ರಥಮ ಸಂಪುಟ, ಸಾಂಸ್ಕೃತಿಕ ಚರಿತ್ರೆ ಪು – ೧೨೨)

ಕಂದ – ೦೬

ಸಿಂಗಣಗದ್ದೆ ತಾಮ್ರ ಶಾಸನದಲ್ಲಿ – ೦೨ (M.A.R. ೧೯೨೦ ಪು : ೨೩. ನರಸಿಂಹಾರಾಜಪುರ)

ಸೊರಬದ ಶಾಸನದಲ್ಲಿ – ೦೪ (E.C.VIII, –೧ ಸೊರಬ)

ಇಷ್ಟೇ ಅಲ್ಲದೆ ಇತ್ತರ ಶಾಸನ ಸಂಪುಟದಲ್ಲಿರುವ ಹಲವಾರುಗಳಿವೆ.

ಮತ್ತೇಭ – ೦೨

(ಸೌತ್ ಇಂಡಿಯನ್ ೯–೧, ನಂ. ೩೯೨, ಮಂಗಳೂರು)

(E.C.03, ಮೈಸೂರು – ೬ ಬೆಲವತ್ತೆ)

ಶಾರ್ದೂಲ – ೦೧ (ಸೌ.ಇ.ಇ. – ೭ ನಂ. ೨೯೧ ಉದಯವಾರ)

ಉತ್ಪಲಮಾಲೆ – ೦೧ (ಜಯಕರ್ನಾಟಕ ೯–೬ ಪು: ೪೩೧ ಪಟ್ಟದಕಲ್ಲು)

ಮಹಾಸ್ರಗ್ಧರೆ – ೦೧ (ಮೈ.ಆ.ರಿ. – ೧೯೨೦ ಪು : ೨೪ ನರಸಿಂಹರಾಜಪುರ)

ವರನ್ತೇಜಸ್ವಿನೋ ಮೃತ್ಯುರ್ನತು ಮಾನಾ
ವಖಣ್ಡನಮ್ ಮೃತ್ಯುಸ್ತತ್ಷಣಿಕೋ
ದುಃಖಮಾನ ಭಂಬನ್ದಿನೇ ದಿನೇ

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗೆ ವಿಪರೀತನ್
ಮಾಧವ ನೀತನ್ ಪೆಱನಲ್ಲ

ಒಳ್ಳಿತ್ತ ಕೆಯ್ವೊರಾ ಪೊರ್ಳಲ್ಲದು ಮದಱಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂದಿಕ್ಕು ಮದು ಬಂದು

ಕಟ್ಟಿದ ಸಿಂಗಮನ್ ಕೆಟ್ಟೊಡೇನೆ ಮಗೆಂದು
ಬಿಟ್ಟವೊಲ್ಕಲಿಗೆ ವಿಪರೀತಂಗ ಹಿತರ್ಕಳ್
ಕೆಟ್ಟರ್ ಮೇಣ್ ಸತ್ತರ ವಿಚಾರಮ್[೪೫]

ಈ ಶಾಸನದಲ್ಲಿ ೦೪ ತ್ರಿಪದಿಗಳಿವೆ. ಇವು ಕನ್ನಡ ಸಾಹಿತ್ಯದ ಮೊದಲ ಉಪಲಬ್ದ ತ್ರಿಪದಿಗಳಾಗಿವೆ. ಈ ನಾಲ್ಕು ತ್ರಿಪದಿಗಳಲ್ಲಿ ಮೊದಲ ಮತ್ತು ನಾಲ್ಕನೆಯ ಪದ್ಯಗಳು ತ್ರಿಪದಿಯಂತೆ ಕಂಡರೂ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿದಾಗ ತ್ರಿಪದಿಯ ನಿಯಮ ಪಾಲಿತವಾಗಿಲ್ಲ ಮತ್ತು ಎರಡನೆಯ ಪದ್ಯಗಳು ತ್ರಿಪದಿಯ ಎಲ್ಲಾ ಲಕ್ಷಣಗಳು ಕಂಡು ಬರುತ್ತವೆ. ಈ ಎರಡೂ ಪದ್ಯಗಳಲ್ಲಿ ತ್ರಿಪದಿಯ ಲಕ್ಷಣಗಳಾದ ಒಟ್ಟು ೧೧ ಗಣಗಳು ಬಂದಿದ್ದು, ೬ ಮತ್ತು ೧೦ನೇ ಸ್ಥಾನದಲ್ಲಿ ಬ್ರಹ್ಮ ಗಣಗಳು ಬಂದಿವೆ. ಎರಡನೆಯ ಪಾದದ ೩ನೇ ಗಣದಲ್ಲಿ ಯತಿ ಬಂದಿದೆ. ನಾಲ್ಕೂ ಪದ್ಯಗಳಲ್ಲಿಯೂ ಆದಿಪ್ರಾಸ ಬಂದಿರುವುದನ್ನು ಗಮನಿಸಬಹುದು ಹಾಗೂ ಉಪಮೆ ರೂಪಕಗಳೂ ಬಂದಿವೆ. ಕೊನೆಯ ಪದ್ಯದಲ್ಲಿ ಉತ್ಪ್ರೋಪಮೆ ಬಂದಿದೆ.

ಕನ್ನಡಿಗರ ಬಾಯಿಯಲ್ಲಿ ಕಂಬದಿಂದ ಚಿನ್ನದ ತಂತಿ ಎಳೆದಂತೆ ಸುಗಮವಾಗಿ ಬರಬೇಕಾಗಿದ್ದ ತ್ರಿಪದಿ ಇಲ್ಲಿ ಗಂಟುಗಂಟಾಗಿದೆ. ಜಯಕೀರ್ತಿ, ಶಾರ್ಙ್ಗದೇವ, ಸೋಮೇಶ್ವರ, ಹೇಳುವಂತೆ ಇದರ ಚರಣಗಳು ನಾಲ್ಕು ಎಂದು ಭಾವಿಸಿ.

೪೫ I.A.0X. ಪುಟ – ೬೧

ಸಾಧುಗೆ ಸಾಧು

ಮಾಧೂರ್ಯಂಗೆ ಮಾಧೂರ್ಯಂ

ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತ

ನ್ಮಾಧವನೀತನ್ಪಱನಲ್ಲ

ಎಂದು ಆದಿಪ್ರಾಸವನ್ನು ಲಕ್ಷಿಸಿ ಬಿಡಿಸಿ ಇಟ್ಟರೆ ಒಂದು ಮತ್ತು ಎರಡನೆಯ ಚರಣಗಳಿಗೆ ಎರಡೆರಡರಂತೆ ವಿಷ್ಣುಗಣ ಹೊರಡುವುದಿಲ್ಲ. ಹೊರಡಿಸಲು ಪ್ರಯತ್ನಿಸಿದರೆ (ಸಾಧುಗೆ ಸಾಧುಮಾರ್ಧೂರ್ಯ್ಯವೊ......) - ಆದಿಪ್ರಾಸ ಹೊಂದುವುದಿಲ್ಲ. ಇನ್ನು '∪-' ವಿನಿಂದ ಪ್ರಾರಂಭವಾಗುವ 'ಪ್ರಾಕೃತ'ದಲ್ಲಿ ಅಂಶಗಣದ ಮೂಲಭೂತತತ್ವ ಮುರಿದು ಬಿದ್ದಿದೆ. "ವಿಪರೀತಂಗ ಹಿತರ್ಕ್ಕೆಳ್ಕೆಟ್ಟಮ್ಮೇರ್ಣ್ಯತ್ತರ ವಿಚಾರಂ" ಎಂದು ವಾಕ್ಯ ಯೋಜನೆಯಲ್ಲಿ ಲಿಪಿ ಪ್ರಯೋಗದ ಹೊಸ ಅನುಭವ, ಸಂಸ್ಕೃತ ಕನ್ನಡಗಳ ಗೊಂದಲ ಎದ್ದು ಕಾಣುತ್ತದೆ. ಈ ಉಭಯ ಪರಿಶ್ರಮದ ಮೂಲಕ ಈ ತ್ರಿಪದಿಗಳ ಛಂದಸ್ಸಿಗೆ ಭಂಗ ಬಂದಿದೆ. ಕನ್ನಡಿಗರ ಉಸಿರಾದ ಈ ವೃತ್ತ ಕೆಲಮಟ್ಟಿಗೆ ತನ್ನ ಮುಗ್ಧತೆಯನ್ನು ಕಳೆದುಕೊಂಡಿದೆ.[೪೬]

ಭಾಷೆ ಛಂದಸ್ಸುಗಳ ದೃಷ್ಟಿಯಿಂದ ಕೆಲಮಟ್ಟಿಗೆ ವೈಲಕ್ಷಣ್ಯಗಳನ್ನು ತೋರಿಸುವ ಬಾದಾಮಿಯ ಶಾಸನದ ಪದ್ಯಗಳು ಒಟ್ಟಿನಲ್ಲಿ ಲಕ್ಷಣ ಬದ್ಧವಾದವು. ಗಣಗಳ ಸಂಖ್ಯೆ, ಗಣವಿನ್ಯಾಸ, ರಸದಶ ಸ್ಥಾನದ ಯತಿ ನಿಯಮ, ರೂಢಿಗತ ಹಾಡಿಕೆಯ ಪರಿಪಾಠಿಗೆ ಅನುಗುಣವಾಗಿ ಏರ್ಪಡುವ ನಿಲುಗಡೆಯ ಎಡೆಗಳು. ಪ್ರಾಸ ಒಳಪ್ರಾಸಗಳ ಕಟ್ಟಳೆಯ ಪಾಲನೆ ಈ ಅಂಶಗಳನ್ನು ಗಮನಿಸಿದರೆ ಅರ್ಥ ತಿಳಿಯುತ್ತದೆ. ಸ್ವಲ್ಪ ವಿವರದಲ್ಲಿ ನೋಡಿದಾಗ ವೈಲಕ್ಷಣ್ಯಗಳು ಕಾಣುತ್ತವೆ.

ಮೊದಲ ಪದ್ಯದ ಮೊದಲ ಪಾದದಲ್ಲಿ ೩ನೇಯ ವಿಷ್ಣುಗಣದೆಡೆ ಒಳಪ್ರಾಸವಿಲ್ಲ. ಆದರೆ ೩ನೆಯ ಗಣವನ್ನು ವಿಷ್ಣುವಿಗೆ ಪರ್ಯಾಯವಾಗಿ ತರಬಹುದಾದ ಬ್ರಹ್ಮನನ್ನಾಗಿ ಮಾಡಿಕೊಂಡರೆ, ೩ನೆಯ ಗಣದಲ್ಲಿ ಒಳಪ್ರಾಸ ಏರ್ಪಟಿರುತ್ತದೆ. ಆಗ ಈ ಗಣದ ಮೌಲ್ಯ ಒಂದಂಶದಿಂದ ಹಿಗ್ಗಿ ಇದೊಂದು ರುದ್ರಗಣವಾಗುತ್ತದೆ. ಲಯ ಕೃಷಿಯಿಂದ ಇಲ್ಲಿ ೨ನೆಯ ಗಣವನ್ನು ಹಿಗ್ಗಿದ ವಿಷ್ಣುವನ್ನಾಗಿ, ೩ನೆಯ ಗಣವನ್ನು ಕುಗ್ಗಿದ ವಿಷ್ಣುವನ್ನಾಗಿ ಮಾಡಿ ಕೊಳ್ಳಬಹುದೆಂದು ತೋರುತ್ತದೆ. ಈಗಲೂ ಪ್ರಚಲಿತವಿರುವ ತ್ರಿಪದಿಯ ನಾನಾ ವಾಚನ ವಿಧಾನಗಳಲ್ಲಿ ಯಾವ ಒಂದು ವಿಧಾನಕ್ಕೆ ಬಾದಾಮಿ ಶಾಸನದ ಪದ್ಯಗಳು ಅಳಪಡುತ್ತಿದ್ದವೊ. ಈಗ ತಿಳಿಯುವುದು ನಮಗೆ ಶಕ್ಯವಿಲ್ಲ.

ಇನ್ನು ಎರಡನೆಯ ಪದ್ಯದಲ್ಲಿ ಕುಳ ಆಕಾರ ದೇಶ್ಯ ಲಕಾರಗಳಿಗೆ ಪ್ರಾಸಮಾಡಿದಲ್ಲ (ಒಳಪ್ರಾಸವನ್ನು ಹೀಗೆಯೇ ಯೋಜಿಸಿದೆ) ಇದು ವೈಯಾಕರಣ ನಿಯಮದಂತೆ ದೋಷವಾಗಿದೆ. ಆದರೂ ಇಲ್ಲಿ ಇಂಥ ಪ್ರಾಸವನ್ನು ಪುರಸ್ಕರಿಸಿರುವುದು ನೋಡಿದರೆ, ಜನರೂಢಿಯ ಭಾಷೆ ಛಂದಸ್ಸುಗಳಲ್ಲಿ ಶಾಸ್ತ್ರ ನಿಯಮಗಳನ್ನು ಅಷ್ಟಾಗಿ ಲಕ್ಷಿಸುತ್ತಿರಲಿಲ್ಲವೆಂದೋ ಅಂಥ ನಿಯಮಗಳನ್ನು ಪರಿಸ್ಕರಿಸಿ ಈಚಿನ ಕಾಲದ ಕನ್ನಡ ಸಾಹಿತ್ಯವನ್ನು

---

೪೬ ಡಾ॥ ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಪುಟ – ೧೩೨ – ೩೩

ಲಕ್ಷಿಸಿ ಹೇಳಿರಬಹುದೆಂದರೆ ತಿಳಿಯಬೇಕಾಗುತ್ತದೆ. ಅದೇ ಪದ್ಯದಲ್ಲಿ ಕಾಣಲಿಲ್ಲ ಇನ್ನೊಂದು ವೈಲಕ್ಷಣ್ಯವೆಂದರೆ, ೨ನೆಯ ಪಾದದ ಕೊನೆಯ ಗಣ ಅಂಶಗಣದ ರಚನೆಗೆ ಒಗ್ಗದಿರುವುದು. ಆದರೆ ಇಂಥವು ಜನಪದ ಸಾಹಿತ್ಯದ ಪದ್ಯಗಳಲ್ಲಿ ಸಾಮಾನ್ಯವಾಗಿ ಬರುವುದು ರೂಢಿಯಾದ್ದರಿಂದ, ಇಲ್ಲಿಯೂ ಅದೇ ಕಾರಣದಿಂದಾಗಿ ಈ ಬಗೆಯ ಗಣರಚನೆ ಕಾಣಿಸಿಕೊಂಡಿದೆಯೆಂದು ಹೇಳಬಹುದು. ತ್ವರಿತೋಚ್ಚಾರದಿಂದ ಅದನ್ನೊಂದು ವಿಷ್ಣುಗಣವನ್ನಾಗಿ ಮಾಡಿಕೊಂಡು ಹಾಡುತ್ತಿದ್ದಿರಬಹುದೋ ಏನೋ ? ಕೊನೆಯದಾದ ೩ನೆಯ ಪದ್ಯದಲ್ಲಿ ವಿಚಾರಣೀಯವಾಗಿ ತೋರುವ ಒಂದೇ ವೈಲಕ್ಷಣ್ಯವೆಂದರೆ ೨ನೆಯ ಪಾದದ ೩ನೇ ಗಣಗಳ ಒಳಗೆ ತ್ರಿಪದಿಯ ಹಾಡಿಕೆಯ ಪರಿವಾರದಂತೆ ಬರಬೇಕಾದ ಸಹಜ ನಿಲುಗಡೆಗೆ ಅವಕಾಶವಾಗದಿರುವುದು. ಇದಕ್ಕೆ ಸಮರ್ಪಕವಾದ ಸಮಾಧಾನವನ್ನು ಕಂಡು ಕೊಳ್ಳುವುದು ಪದ್ಯದ ಸ್ಥಿತಿಯಲ್ಲಿ ಕಷ್ಟ. ಒಟ್ಟು ಬಂಧದ ಛಂದಸ್ಸಿನಿಂದ ಈ ಶಾಸನದ ತ್ರಿಪದಿಗಳಲ್ಲಿ ಕಂಡು ಬರುವ ವೈಲಕ್ಷಣ್ಯಗಳೇನೂ ಮುಖ್ಯವಾದುವಲ್ಲ ಎಂದು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೪೭]

ಹೊಂಬುಜದ ಶಾಸನದಲ್ಲಿ ೧೫ ತ್ರಿಪದಿಗಳಿದ್ದು ಒಂದು ತ್ರಿಪದಿ ಮಾತ್ರ ಸಂಪೂರ್ಣವಾಗಿ ಉಳಿದುಕೊಂಡಿದ್ದು, ಉಳಿದ ಪದ್ಯಗಳು ತ್ರುಟಿತವಾಗಿವೆ.

ಶಾಸನಪಾಠ (ಕ್ರಿ.ಶ. ೮೦೦)

.... ಮುಂ ಪಾಮಿಯು ಮನದ ನಿರ್ಮ್ಮಳಿ.... ಯು
ಮನಿತು ಯೊಳ್ಗಣ್ ಮುಮಟಿವು ಧರ್ಮ್ಮಮುಂ ಜಕ್ಕ
ನಿನಗಲ್ಲ ದಿಲ್ಲ ಭುವನದೊಳ್
ಬ್ರಹ್ಮನಿಂದಜೀವುಸು ಸರ್ಮ್ಮನಾರ್ಪ್ಪಿನೊಳ್ಳೊರೆ
ಧರ್ಮ್ಮದೊಳ್ಪಲಿಯ ಸಮನೆಂಬ ಜಕ್ಕಯ್ಯ
ನಿರ್ಮ್ಮಲ ಸುದ್ಧ ಭುವನದೊಳ್
ಮನ್ನೆಖೇಟದಿ ತೆಂಕ ನಿನ್ನ ದೇಗುಲ ಚಲ್ವು
.... ಲೆದಾರಿ ಜಕ್ಕಯ್ಯ
ನನ್ನ ರಾಧರ್ಮ್ಮದ ಜೀವಿನೊಳ್
ಮಾಸರ ಜಕ್ಕಯ್ಯ ಈರ್ಸವರಗತಿ ಭಕ್ತ
.... ನೊಳಗೆ ನೆಗಟ್ಟಿ ದೇಗುಲಕನ[೪೮]

೪೭ ಕನ್ನಡ ಸಾಹಿತ್ಯ ಚರಿತ್ರೆ – ೧೨, ಪುಟ ೪೬೯-೭೦
೪೮ E.C.IIX, ನಗರ, ೬೨, ಹೊಂಬುಜ

೫ ಪದ್ಯಗಳಲ್ಲಿ ಎಲ್ಲಾ ಪದ್ಯಗಳು ತ್ರುಟಿತವಾಗಿದ್ದು ೨ನೇ ಪದ್ಯದಲ್ಲಿ ತ್ರಿಪದಿಯ ಎಲ್ಲಾ ಲಕ್ಷಣವನ್ನು ಬಂದಿದೆ. ಮೊದಲನೆಯ ಪಾದ ೪ನೇ ಗಣದಲ್ಲಿ ಮೊದಲು ಒಂದು ಲಘು ನಂತರ ಒಂದು ಗುರು ಬಂದಿದೆ. ಇದು ಸಣ್ಣ ದೋಷ ಎನ್ನಬಹುದು. 'ಳ'ದ ಒತ್ತಕ್ಷರ ತೆಗೆದರೆ ವಿಷ್ಣು ಗಣ ಬರುತ್ತದೆ. ಉಳಿದಂತೆ ಒಟ್ಟು ೧೧ ಗಣಗಳಿದ್ದು ೬ ಮತ್ತು ೧೦ನೇ ಸ್ಥಾನದಲ್ಲಿ ಬ್ರಹ್ಮಗಣ ಬಂದಿದೆ. ಎರಡನೆಯ ಪಾದದ ೩ನೇ ಗಣದಲ್ಲಿ ಯತಿಬಂದಿದೆ.

ಮೊದಲನೆಯ ತ್ರಿಪದಿಯಲ್ಲಿ ಗಮನಿಸತಕ್ಕ ಒಂದು ವೈಲಕ್ಷ್ಯವಿದೆ. ೨ನೆಯ ಪಾದದ ೩-೪ನೆಯ ಗಣಗಳನ್ನು ಕ್ರಮವಾಗಿ ರುದ್ರ- ವಿಷ್ಣು ಎಂದಿಟ್ಟುಕೊಳ್ಳಬೇಕು. ಇಲ್ಲವೆ ಬಾದಾಮಿ ಶಾಸನದ ೨ನೆ ಪದ್ಯದ ತ್ರಿಪದಿಯಲ್ಲಿ ನೋಡಿದಂತೆ ತ್ವರಿತೋಚ್ಛಾರದಿಂದ ೪ನೆಯ ಗಣವನ್ನು ವಿಷ್ಣುವಿಗೆ ಹೊಂದಿಸಬೇಕು ಎಂದುದೇ ಅದು. ಲಯ ಸಾಮಂಜಸ್ಯ ದೃಷ್ಟಿಯಿಂದ ಪ್ರಾಯಃ ಮೊದಲನೆಯ ವಿಧಾನವೇ ರಚಿಸಿರುವವರಿಗೆ ಇಷ್ಟವಾಗಿದ್ದಿರಬಹುದು. ಎರಡನೆಯ ತ್ರಿಪದಿಯ ಮೊದಲನೆಯ ಪಾದದಲ್ಲಿ ಕೂಡ ೩-೪ನೆಯ ಸ್ಥಾನಗಳಲ್ಲಿ ಇದೇ ಬಗೆಯ ಗಣ ರಚನೆಯನ್ನು ನಾವು ಎದುರುಗೊಳ್ಳುತ್ತೇವೆ. ಇಲ್ಲಿ "ಸಮ್ಮನಾರ್ಪಿನೊ (ಳ್ಪೊ)ರೆ.... "ಎಂದೋ ತ್ವರಿತೋಚ್ಛಾರದಿಂದ" ರ್ಪಿನೊ[ಳ್ಪೊ]ರೆ" ಎಂಬುದನ್ನು ವಿಷ್ಣುವಿಗೆ ಹೊಂದಿಸಿಯೇ ಹಾಡಿಗೆ ಅನುಕೂಲ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿಯೂ ಪ್ರಾಯಃ ಮೊದಲ ವಿಧಾನವೇ ರಚಯಿತನ ದೃಷ್ಟಿಯಲ್ಲಿದ್ದಿರಬಹುದು. ಒಳಪ್ರಾಸದ ದೃಷ್ಟಿಯಿಂದ "ಬ್ರಹ್ಮಸರ್ಮ್ಮ" ವಿಸಂಗತವಾಗಿದೆ. ನಿಜ ಆದರೆ ಗ್ರಾಮ್ಯವಾದ ಆಡುನುಡಿಯಲ್ಲಿ 'ಬ್ರಹ್ಮ' ಶಬ್ದವು ಬ್ರಹ್ಮ ೭ ಬರ್ಮ್ಮ ಆಗಿ ನುಡಿಯುವುದು ಸಾಧ್ಯವಾದ್ದರಿಂದ ಆ ಪ್ರಾಸ ಸಹಜವೂ ಸರಿಯಾಗಿಯೂ ಆಗಿದೆಯೆನ್ನಬಹುದು : ರಚನೆಗೆ ಲಿಖಿತ ರೂಪವನ್ನು ಕೊಟ್ಟು ಶಾಸನಸ್ಥಗೊಳಿಸುವಾಗ, ಶುದ್ಧ ರೂಪದಲ್ಲಿ 'ಬ್ರಹ್ಮ' ಎಂದೇ ಶಬ್ದವನ್ನಿಟ್ಟಿರಬಹುದು. ಈ ಯಂಶವನ್ನು ೪ ತ್ರಿಪದಿಯ "ಮಾಸರ ಈಶ್ವರ (೭ ಈಸರ)" ಎಂಬ ಒಳಪ್ರಾಸವೂ ಪೋಷಿಸಬಹುದೆಂದು ತೋರುತ್ತದೆ. ಇನ್ನು ಕೆಲಮಟ್ಟಿಗೆ ತ್ರುಟಿತವಾದ ೩ನೆಯ ತ್ರಿಪದಿಯಲ್ಲಿ ಲೆಕ್ಕಿಸಬಹುದಾದ ವಿಶೇಷವೇನೂ ಇಲ್ಲ. ಉಳಿದವುಗಳ ವಿಷಯವೂ ಅಷ್ಟೆ. ತ್ರಿಪದಿಗಳಲ್ಲಿ ೨ನೆಯ ಪಾದಾಂಶದ ಪುನರಾವರ್ತನೆಯ ಬಳಿಕ, ಎಂದರೆ ಕೊನೆಯ ಗಣವಾಗಿ ಜಕ್ಕ, ಜಕ್ಕಯ್ಯ ಎಂಬುದಾಗಿ ವರ್ಣನೆಗೆ ವಿಷಯವಾದವನ ಹೆಸರು ಕಾಣಿಸಿಕೊಳ್ಳುವುದು ಜನಪದ ತ್ರಿಪದಿಗಳ ರಚನೆಯಲ್ಲಿ ಬಂಧಕ್ಕೆ ಸಂಬಂಧಿಸಿದ ಒಂದು ಅನುಸರಣೆಯ ಒಂದು ಸಾಮಾನ್ಯಾಂಶವೇ ಆಗಿದೆ? ಸಾಮಾನ್ಯಾಂಶದ ಅನುಸರಣೆಯೇ ಆಗಿದೆ. ಇದನ್ನು ಗಮನಿಸಿದಾಗ ಆದಿಪ್ರಾಸ ನಿಯಮವನ್ನಿಟ್ಟು ಈ ತ್ರಿಪದಿಗಳು ಲಕ್ಷಣದಲ್ಲಿ ಕೆಲಮಟ್ಟಿಗೆ ಜಾನಪದೀಯ ಕೂಡ ಆಗಿವೆಯೆಂದು ಹೇಳಬಹುದು ಎಂದು ವಿದ್ವಾಂಸರು ಗುರ್ತಿಸಿದ್ದಾರೆ.[೪೯]

---

೪೯ ಕನ್ನಡ ಸಾಹಿತ್ಯ ಚರಿತ್ರೆ – ೦೨, ಪುಟ ೪೭೦-೭೧.

ಸೊರಬದ ಶಾಸನದಲ್ಲಿ ೦೫ ತ್ರಿಪದಿಗಳಿವೆ

ಶಾಸನ ಪಾಠ

ಅನ್ದು ಕೇಚರಂ ಸಾರ್ಚ್ಚಿ ತನ್ದ ವಿಮನಮಂ
ಇನ್ದ್ರನವೆನಾದಿ ಸುರವದು ಅರ್ಕ್ಕಳು
ವನ್ದರ ಅಜ್ಜ..........
.... ನಯ ನೀನೇ ಭೂರ್ಮಗ್ಗ್ನಲದೊಳಾಗೆ ವಿ
ಲ್ದಣ್ಡ ಮನಣಿಯ ತುರಗಮ ನಾಜ್ಗರ
ಭಣ್ಡಣಚ್ಚಾಣದೊಳಗಿತ್ತಿ........
.... ವಳಸ ವಮಿ ಜಮ್ಬೂದ್ವೀಪ ಸೂರ್ಜ್ಯ
ಬಿಮ್ಬ ಪನ್ನೆರಡಱೊಳಗೆಲ್ಲ ಮಾರ್ಗ್ಗರ
ನಾಜ್ಗಜ ಕೊಮರಜ್ಗ.......
.... ತಿರತನಜ್ಞನೆ ಸುತನನ್ನ
ಅನ್ದು ಕೇಸಿನಿಯ ಎವಿದಾತ ನನ್ನನೆ
ಬನ್ದಂ ನುರ್ಮ್ಮಸಿಲ ವಿರಹಿ
.... ರಮಿಗಿ ವೆಳಿಯಂಮ್ಬಿ ನೆಱಗಿ ಕಟ್ಕದೆ ತಳ್ತು
ಮಱುವಕ್ಕಮಾದ ನೃಪರ್ಕ್ಕಳಾನಾಜ್ಗರ
ನಜಿವೆ ನಾರದ.......[೫೦]

ಇವುಗಳಲ್ಲಿಯೂ ಅನೇಕ ಕಡೆ ಅಕ್ಷರಗಳು ಅಳಿಸಿ ಹೋಗಿ, ಪದ್ಯಗಳ ಸ್ವರೂಪ ಸ್ಪಷ್ಟವಾಗದೆ ಹೋಗಿದೆ. ಬರಹಗಾರ – ಕೊರೆಹಗಾರರ ಸ್ಖಾಲಿತ್ಯಗಳನ್ನು ಸರಿಪಡಿಸಿಕೊಂಡು ಓದಿದರೆ. ಇವು ಸಾಧಾರಣ ತ್ರಿಪದಿಯ ಲಕ್ಷಣಕ್ಕೆ ಸರಿ ಬರುವಂತೆ ರಚಿತವಾಗಿದೆ ಎನ್ನಬಹುದು. ಮೊದಲ ತ್ರಿಪದಿಯ ಆದಿಗೆ ರುದ್ರ, ವಿಷ್ಣು ಎಂದು ಕ್ರಮವಾಗಿ ಗಣಗಳನ್ನಿಟ್ಟು ಕೊಳ್ಳಬೇಕಾಗಬಹುದು. ಕೆಲವೆಡೆ ಪ್ರಾಸಸ್ಥಾನದಲ್ಲಿ ವರ್ಗ ಪಂಚಮಾಕ್ಷರಗಳನ್ನು ಅಭೇದದಿಂದ ಬೆಳಸಿದೆ.[೫೧]

ಕೊನೆಯದಾಗಿ ಹೇಳುವುದಾದರೆ ಆರಂಭದಿಂದ ಕ್ರಿ.ಶ. ೮೦೦ರ ವರೆಗೆ ೧೪ ತ್ರಿಪದಿಗಳು ದೊರೆತಿದ್ದು ಅಂಶಗಣ ಸ್ಥಿತಿಸ್ಥಾಪಕತ್ವಗುಣವುಳ್ಳದ್ದು ಎಂಬ ದೃಷ್ಟಿಯಿಂದ ಅವುಗಳಲ್ಲಿ ತೋರುವ ಗಣವ್ಯತ್ಯಾಸವನ್ನು ಮನ್ನಿಸಬಹುದು. ಆದರೆ 'ಮರಾಕ್ಕತ' ಮೊದಲಾದುವು ಮೂಲಭೂತ ಛಂದೋದೋಷಗಳು. 'ಒಳ್ಳಿತ್ತು' 'ಬಲ್ಲಿತ್ತು' 'ಬ್ರಹ್ಮ-ಧರ್ಮ' ಎಂಬುವು ಗಮನಿಸಬಹುದಾದ ವ್ಯಾಸ

---

೫೦ E.C.VIII, ಸೊರಬ – ೨೨
೫೧ ಕನ್ನಡ ಸಾಹಿತ್ಯ ಚರಿತ್ರೆ–೦೨. ಪುಟ – ೪೭೧, ಮೈಸೂರು ವಿಶ್ವವಿದ್ಯಾನಿಲಯ

ದೋಷಗಳು. ಒಟ್ಟಿನಲ್ಲಿ ಬಾದಾಮಿ ತ್ರಿಪದಿಗಿಂತ ಸೊರಬ, ಸೊರಬ ತ್ರಿಪದಿಗಿಂತ ಹುಮ್ಮಚ ತ್ರಿಪದಿಗಳೂ ಹೆಚ್ಚು ಮಧುರವಾಗಿವೆ. ಹೆಚ್ಚು ಶುದ್ಧವಾಗಿವೆ ಎಂದು ಡಾ॥ ಎಂ.ಎಂ. ಕಲಬುರ್ಗಿ ಅಭಿಪ್ರಾಯಪಟ್ಟಿದ್ದಾರೆ.[೫೨]

ಪಿರಿಯಕ್ಕರ

ಕ್ರಿ.ಶ. ೮೦೦ರ ಪೂರ್ವದ ಶಾಸನಗಳಲ್ಲಿ ಒಂದೇ ಒಂದು ಸಲ ಬಳಕೆಯಾಗಿರುವ ಪಿರಿಯಕ್ಕರದ ಶಾಸನ ಪಾಠ ಈ ರೀತಿಯಿದೆ.

ಬ್ರ ವಿ ವಿ ವಿ ವಿ ವಿ ರು
ಪುಟ್ಟಿಮಣಿ ನಾಕಿಗಂ ಭಂಗ ಜಗತುಂಗ ನೆಲದನಿ ದನ್ತೆಯ್ದೆ, ಆಳ್ದೊನತಂ

ಗಿಷನಾ ಸಾಹಯ ನೆಜಿವೆ ಮಹಾ ಸಮನ್ತ ನುತ್ತ ವೆಂಗೆಳ್ಳಗೊಪ್ಪೆ

ಪುಟ್ಟಿದೊ ಬಿರಗ್ರ ಹಾರಮ್ ತಲವಿಡಿದು ಕಳೆದೆ

ಕಿರಿಟ್ಟಿ ಸಾಸಿರದೊಂಬಯಿನೂಜಿ ಅಜುಮತ ಅಜುವರ ನಿಜಿದೊಳ್ಪ ಪ್ರಕಪಿಸಿದಾನ್[೫೩]

ಆದಿಪ್ರಾಸವನ್ನು ಗಮನಿಸಿ, ಇದು ಪದ್ಯವಾಗಿರಬಹುದೆಂದು ಶ್ರೀ ಪಂಚಮುಖಿ ಹೇಳುತ್ತಾರೆ. ಪ್ರಥಮ ಚರಣದ ಲಯವನ್ನು ಲಕ್ಷಿಸಿ (ಶುದ್ಧ ಪಾಠ ನಿರ್ಣಯವಾಗುವವರೆಗೆ) ಇದನ್ನು ಪಿರಿಯಕ್ಕರವೆಂದು ಭಾವಿಸಬಹುದು. ಎಂದು ಕಲಬುರ್ಗಿ ಹೇಳಿದ್ದಾರೆ.[೫೪] ಆದರೆ ೧ನೇ ಸಾಲಿನಲ್ಲಿಯೇ ಪಿರಿಯಕ್ಕರದ ಲಕ್ಷಣಗಳು ಗುರ್ತಿಸಬಹುದು. ಒಂದು ಬ್ರಹ್ಮಗಣ, ೫ ವಿಷ್ಣುಗಣ, ಒಂದು ರುದ್ರಣ ಬಂದು, ೪ನೇ ಗಣದ ಮುಂದೆ ಯತಿ ಬಂದಿರುವುದನ್ನು ಕಾಣಬಹುದು. ಉಳಿದ ೩ ಸಾಲುಗಳ ಪದ್ಯದ ಛಂದಸ್ಸು ಹದಗೆಟ್ಟಿರುವಂತೆ ಕಾಣುತ್ತದೆ.

ಇನ್ನೊಂದು ಕುರು ವಗಟ್ಟಶಾಸನ ಕ್ರಿ.ಶ. ಸು. ೮೦೦

ಅ ವಿ ವಿ ವಿ ವಿ ವಿ ವಿ ವಿ ರು
ಇನ್ತನಪ್ಪಾತನೂಜಿಯ್ವತ್ತೊಬ್ಬರ ಕಳಿತಲೆ ಯೊಳಿಜಿದ ಯ್ವತ್ತಜು ವರಸುರಿ ಗೆಯೊಳಿಜಿದೋನ್

ಇನ್ತವೋನೆತಾನುಂ ಸಾಹಸಂಗಳಗೆಯ್ದ ಬೀರಗ್ರಿ ಹಮೆನೆಲ್ಸ ಮಾನವುಳ್ಳದೆ ಇಲ್ಲಿ ಸಾಹಸಂ[೫೫]

ಈ ಶಾಸನ ಪದ್ಯವನ್ನು ಎಂಬಿ. ನೇಗಿನಹಾಳ ಅವರು ದ್ವಿಪತಿಯೆಂದು ಗುರ್ತಿಸಿದ್ದಾರೆ.[೫೬]

---

೫೨ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೪

೫೩. ಆರ್. ಎಸ್. ಪಂಚಮುಖಿ, ಕರ್ನಾಟಕ ಇತಿಹಾಸ, ಸಂ–೦೧, ಸಾಂಸ್ಕೃತಿಕ ಚರಿತ್ರೆ, ಪುಟ – ೧೨೩

೫೪. ಡಾ॥ ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೪

೫೫ ಆಂಧ್ರಪ್ರದೇಶ – ೦೩, ನಂ. ೨೯, ಪುಟ – ೩೯

೫೬ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪುಟ – ೮೬

ಆದರೆ ಇದು ದ್ವಿಪದಿಯಾಗಿರದೆ ಪಿರಿಯಕ್ಕರದ ಮೊದಲ ಎರಡು ಪಾದಗಳಾಗಿವೆ. ಮೊದಲನೆಯ ಸಾಲಿನಲ್ಲಿ ಒಂದು ಬ್ರಹ್ಮಗಣ ೩ ವಿಷ್ಣುಗಣ, ಕೊನೆಯಲ್ಲಿ ಒಂದು ರುದ್ರಗಣ ಬಂದಿದೆ. ೨ನೇ ಪಾದದಲ್ಲಿ ನೇಗಿನಾಳ ಅವರು 'ಬ್ರಹ್ಮ ೩ ವಿಷ್ಣು ೧ ರುದ್ರ ಎಂದು ಗುರ್ತಿಸಿದ್ದಾರೆ. ಆದರೆ ಬ್ರಹ್ಮಗಣದ ನಂತರ 'ವೋನೆತಾನುಂ' ಎಂಬುದನ್ನು ವಿಷ್ಣುಗಣ ಎಂದು ಗುರ್ತಿಸಿದ್ದಾರೆ. ಇಲ್ಲಿ (–υ—) ೩ ಮಾತ್ರೆಗಳು ಬರುವುದರಿಂದ ಇದು ರುದ್ರ ಗಣವಾಗುತ್ತದೆ. ಆದ್ದರಿಂದ ೨ನೇ ಪಾದದ ಛಂದಸ್ಸು ಹದಗೆಟ್ಟಿದೆ.

ದ್ವಿಪದಿ

ಬಾದಾಮಿ ಶಾಸನದಲ್ಲಿ ದೊರೆತಿರುವ ಕನ್ನಡ ಶಾಸನದಲ್ಲಿಯೇ ಉಪಲಬ್ಧ ಪ್ರಾಚೀನ ದ್ವಿಪದಿಯಾಗಿದ್ದು, ಇದರ ಪಾಠ ಈ ರೀತಿಯಿದೆ.

ಕಪ್ಪೆ ಅರಭಟ್ಟನ್ ಶಿಷ್ಟ ಜನ ಪ್ರಿಯನ್
ಕಷ್ಟ ಜನ ವರ್ಜಿತನ್ ಕಲಿಯುಗ ವಿಪರೀತನ್[೩೭]

(ಡಾ। ಆರ್. ಎಸ್. ಪಂಚಮುಖಿ.ಕರ್ನಾಟಕ ಇತಿಹಾಸ. ಪು. : ೧೨)

ಡಾ॥ ಎಂ.ಎಂ. ಕಲಬುರ್ಗಿಯವರು ಆದಿಪ್ರಾಸವಿಲ್ಲವೆಂದು ಹೇಳಿದ್ದಾರೆ. ಇಲ್ಲಿ ಆದಿಪ್ರಾಸವಿದೆ. ಮುಂದುವರೆದು ಅವರು 'ಶ್ರೀ ಪಾಂಡ್ಯವಿಲ್ಲದ ಸರಾಮನ್ ದೇವು ಸಾಧು ಪ್ರಿಯನ್, ಅಸಾಧು ಜನ ವರ್ಜಿತನ್, ಪ್ರಿಯ ಚೆಲ್ವ ಸಂಪನ್ನ ಖಲಜನವರ್ಜಿತನ್'ಗಳಂತೆ ಕೇವಲ ವಿಶೇಷಣ ಮಾಲೆಯಾಗಿರಬಹುದು.

ಒಟ್ಟಿನಲ್ಲಿ ಪ್ರಾಚೀನ ಕರ್ನಾಟಕದ ಬದುಕಿನ ಮೌಲ್ಯಗಳು ಕಪ್ಪೆ ಅರಭಟ್ಟನ ಅಪ್ರತಿಹತ ಸ್ವಾಭಿಮಾನ, ಜಕ್ಕನ ಅಮೋಘ ದೈವಭಕ್ತಿ ಅಂಗರನ ವೀರಮರಣಗಳ ಮೂಲಕ. ಇಲ್ಲಿ ಅಭಿವ್ಯಕ್ತಗೊಂಡಿವೆ. ಶಾಸನ ಬರೆದ ಕವಿಯ ಪ್ರತಿಭೆ ಬರೆಯಿಸಿದ ಜನತೆಯ ಗುಣ ಪಕ್ಷಪಾತಗಳು ಇಲ್ಲಿ ಪ್ರಕಟಗೊಂಡಿವೆ ಎಂದು ಕಲಬುರ್ಗಿಯವರು ಗುರ್ತಿಸಿದ್ದಾರೆ.[೩೮]

---

೩೭ ಡಾ॥ ಆರ್.ಎಸ್. ಪಂಚಮುಖಿ ಕರ್ನಾಟಕ ಇತಿಹಾಸ ಪುಟ – ೧೨
೩೮ ಡಾ॥ ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೩೩

ಕಂದ

ಸಿಂಹನಗದ್ದೆ ಅಥವಾ ನರಸಿಂಹರಾಜಪುರ ಶಾಸನದಲ್ಲಿ ೨ ಕಂದ ಪದ್ಯಗಳಿವೆ. ಈ ಶಾಸನಗಳ ಕಾಲ ಕ್ರಿ.ಶ. ಸು. ೭೮೦ ರ ಕಾಲದಾಗಿದೆ.

ಶಾಸನಪಾಠ

ನಿರ್ಮಲ ಕೋಶಿಕ ವಂಶನ್
ಧರ್ಮಪರಮ್ ಚಾರು ಮಣಲಿ ಮನೆ ಒಡೆಯಾನ್ ವಲಂ
ತಮ್ಮಾಕ್ಷೇತ್ರೋ ಚಿತಮಾನ್
ಸಮ್ಯಗ್ದರ್ಶನ ವಿರುದ್ಧನುವಮಿಗಿತ್ತಾನ್
ಮುಖಮಾಗೆ ತೊಳ್ಳರೊಡೆಬ
ಸುಖಾಧ್ಯರೆ ವ್ರಿತ್ತಿಱು ಪ್ರಧಾನರು ಮೊದಾನೆ
ನಿಖಿಳ ಸಾಕ್ಷಿಗಳ ವರೇ
ಸುಕರದೆ ನರಶಾಸನಂ ಗಳಾಯ್ದೋರೆಸ್ದುಮ್[೭೯]

ಭಾಷೆಯ ದೃಷ್ಟಿಯಿಂದ ಸಾಕಷ್ಟು ಹಳತನದ ಲಕ್ಷಣಗಳು ಇದ್ದರೂ ಛಂದಸ್ಸಿನ ದೃಷ್ಟಿಯಿಂದ ಉತ್ತರಕಾಲೀನ ಕಂದ ಪದ್ಯಗಳ ಹಾಗೆ ಸಲಕ್ಷಣಗೊಳ್ಳುತ್ತಿದ್ದು, ಛಂದಸ್ಸಿನ ದೃಷ್ಟಿಯಿಂದ ಉತ್ತರಕಾಲೀನ ಕಂದ ಪದ್ಯಗಳ ಹಾಗೆ ಸಲಕ್ಷವಾಗಿದೆ. ಮೊದಲ ಪದ್ಯದಲ್ಲಿ ಯತಿ ಬಂದಿದೆ. ೨ನೇ ಪದ್ಯದಲ್ಲಿ ಯತಿ ಬಂದಿಲ್ಲ.

ಇದಕ್ಕೆ ಒಂದೇ ಅಪವಾದವೆಂದರೆ ೧ನೇಯ ಕಂದದ ೨ನೇಯ ಪಾದದ ಕೊನೆಯ ಗಣ ಪಂಚ ಮಾತ್ರಕವಿರುವುದು. ಮಿಶ್ರಪ್ರಾಸದ ಒಂದಂಶದಲ್ಲಿ ಇಲ್ಲಿಯೂ ಕೆಲಮಟ್ಟಿನ ಹಳತನವಿದೆ. ಮಾತ್ರಾಕ್ಷರದ ಗಣನೆಯಲ್ಲಿ ಅಷ್ಟೊಂದು ನಿಷ್ಠುರ ನಿಲುವು ತೋರುವುದಿಲ್ಲ ಎಂಬ ಗಮನಿಕೆಯನ್ನು ಇಲ್ಲಿಯ ಕಂದ ಪದ್ಯ ಮತ್ತು ಶ್ರವಣಬೆಳಗೊಳದ ಕೆಲವು ವೃತ್ತ ಜಾತಿಗಳನ್ನು ನೋಡಿ ಒಪ್ಪಬಹುದೆಂದು ತೋರುತ್ತದೆ.[೮೦]

ಸೊರಬದ ಶಾಸನದಲ್ಲಿ ೦೪ ಕಂದ ಪದ್ಯಗಳಿವೆ. ಈ ನಾಲ್ಕೂ ಪದ್ಯಗಳು ತ್ರುಟಿತ ಕಂದಪದ್ಯಗಳಿವೆ. ಇವು ಅಸ್ಪಷ್ಟವಾಗಿರುವುದರಿಂದ ಸರಿಯಾಗಿ ಗುರ್ತಿಸಲು ಸಾಧ್ಯವಾಗುತ್ತಿಲ್ಲ. ಇದರ ಕಾಲ ಕ್ರಿ.ಶ. ೭೯೭ ಎಂದು ವಿದ್ವಾಂಸರು ಗುರ್ತಿಸಿದ್ದಾರೆ.

---

೭೯ MAR. ೧೯೨೦, ಪುಟ – ೨೩, ನರಸಿಂಹರಾಜಪುರ
೮೦ ಕನ್ನಡ ಸಾಹಿತ್ಯ ಚರಿತ್ರೆ – ೦೨, ಪುಟ – ೪೬೮–೬೯, ಮೈಸೂರು ವಿಶ್ವವಿದ್ಯಾನಿಲಯ

ಶಾಸನ ಪಾಠ

.... ಅದು ಧರ್ಮ್ಮಸಾಗರಣೆ
ವದಿತರ್ಕ ನಾವೊಲೆ ಬೆಳಪುದಾಕೆಯ ಕೈಯ್ಯು
ಳ್ಳಿದಜಿಸೊರ್ಪ್ಪಟ್ಟುಗಮನೆಯ
ಬದೆಗಸ......... ಣ ಪ್ಪೋರ್[೬೧]

ಕ್ರಿ.ಶ. ೭೫೪ರ ಗುಂಡ್ಲಹಳ್ಳಿ ಶಾಸನದಲ್ಲಿ ಒಂದು ವೃತ್ತವಿದೆ.

ಶಾಸನ ಪಾಠ

ಬಿಸಿಯ ಸತ್ತಿಕುಮಾರವಸುನ್ಧರಾ ಪತಿತ ನಯ ಪಟುಕ್ಕ
ಇಸತ್ತಿಯಾಪುತ್ರ ನತಿಪ್ರ ಸಿದ್ಧ ಘನ ನಿರ್ಮ್ಮಲ ಮಾಗ ತವ್ಯೆ
ರಸತ್ತಿ ಯಾಸತ್ಕುಲ ಗೊಪ್ಪೆಯ ಸುತನೆ ಪರಮೇಶ್ವರದೇ
ವಶಕ್ತಿ ಯಾಕ್ಷತ್ರಣಿಯಾತಟಂಕಮಿದು ತಿಂಕಚಿರನೇಬುದ[೬೨]

ಇದರ ಎರಡು ಮತ್ತು ಮೂರನೆಯ ಪಾದಗಳಲ್ಲಿ ಜತಜಭಜಜಲಗಣಗಳು ಸಾಮಾನ್ಯವಾಗಿ ಕಂಡು ಬರುತ್ತದೆ. ೪ನೇ ಪಾದದ ಅಂತ್ಯ ಭಾಗವನ್ನು 'ಚಿರನ್ನೆಜಿದಂ' ಎಂದು ತಿದ್ದಿದರೆ ಅದರಲ್ಲಿಯೂ ಈ ಗಣಗಳು ದೊರೆಯುತ್ತದೆ. ಆದರೆ ಮೊದಲ ಪಾದದಲ್ಲಿ ಹೆಚ್ಚಿನ ತಿದ್ದುಪಡಿಗೆ ಅವಕಾಶವಿಲ್ಲ. 'ವಸುಂಧ' ಎಂದಿದೆರುವುದನ್ನು 'ವಸುಂಧರಾ' ಎಂದು ಮಾರ್ಪಡಿಸಿದರೆ ಒಟ್ಟು ಇಪ್ಪತ್ತು ಅಕ್ಷರಗಳಾಗುತ್ತವೆಯಾದರೂ ಗಣಗಳ ಮುಂದಿನ ೩ ಪಾದಗಳಿಗಿಂತ ತೀರಭಿನ್ನವಾಗುತ್ತದೆ. ಇದರ ಬದಲು ಮಾತ್ರಾಗಣದಂತೆ ಪ್ರಸ್ತರಿಸಿದರೆ ಏಳೇಳು ಚತುರ್ಮಾತ್ರಾಗಣಗಳು ಪ್ರತಿಪಾದದಲ್ಲಿರುವುದು ಎದ್ದು ತೋರುತ್ತದೆ. ಆದುದರಿಂದ ಇದು ಮಾತ್ರಾವೃತ್ತವಾಗಿದ್ದು ಕವಿ ಇದರಲ್ಲಿ ಅಕ್ಷರಗಳನ್ನು ಸರಿ ಹೊಂದಿಸುವ ಪ್ರಯತ್ನ ಮಾಡಿರುವಂತೆ ಕಾಣುತ್ತದೆ. "ಕನ್ನಡ ಛಂದೋಗ್ರಂಥಗಳಲ್ಲಿ ಈ ಮಾತ್ರಾ ವೃತ್ತದ ಪ್ರಸ್ತಾಪವಿಲ್ಲ. ಪ್ರಾಕೃತದಲ್ಲಿ ಇವರ ನಿರ್ಬಂಧಗಳಿಲ್ಲದೆ ಪ್ರತಿಪಾದದಲ್ಲಿ ೭ ಚತುರ್ಮಾತ್ರಾಗಣಗಳಿರುವ ವೃತ್ತಕ್ಕೆ 'ಲಯ' ಎಂಬ ಹೆಸರಿದ್ದುದು ಕಂಡು ಬರುತ್ತದೆ. ಆದುದರಿಂದ ಇದನ್ನು 'ಲಯವೃತ್ತ' ವೆಂದು ಹೇಳಬಹುದು".[೬೩]

ಕ್ರಿ.ಶ.ಸು. ೮ನೆಯ ಶತಮಾನದ್ದೆಂದು ಹೇಳಲಾದ ಬಾದಾಮಿ ಶಾಸನದಲ್ಲಿ ಒಂದು ವೃತ್ತವಿದೆ.

---

೬೧ E.C.VIII, ಸೊರಬ – ೦೧

೬೨ E.C.16, ಪಾವಗಡ – ೧೨

೬೩ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯ ಅಧ್ಯಯನ ಪುಟ – ೮೦-೮೧

ಅನೇಕ ತರಸ ಕಳಪ್ರವರತುಂ ಗಶೈಲಂಗಳಿಂ

ನಯ ನಹಾರಿ ಯುಡುವೆಲನಿನಿರ್ಯಕೋ....... ದಳ

ವಿನಯ ಕಫಣೇನ್ದ್ರರೀ ಕುಶಲ ಧರ್ಮ್ಮೇ ಸ್ಥಪಿತಮ್

ನಕ್ಕಲ್ ವಿನಾಸಿಗಳ್ಮು ದದೇಲೇಖನಾಮಾತ್ರದೆ.[೬೪]

ಇದರ ೧ನೇ ಪಾದದಲ್ಲಿ ಜನಜಸಯಲಿಗೆ ಎಂಬ ವ್ಯವಸ್ಥಿತವಿದೆ. ಎರಡನೆಯ ಪಾದ ಹೆಚ್ಚು ತ್ರುಟಿತ ಮತ್ತು ತಪ್ಪುಗಳುಳ್ಳದ್ದಾಗಿದೆ. ೩ನೇ ಪಾದ ಜನಸಜಸಯಲಗ ಎಂದಿದೆ. ೪ನೇ ಪಾದದ ಪ್ರಥಮಾಕ್ಷರವಾಗಿದ್ದು ಉಳಿದೆರಡು ಅಕ್ಷರಗಳು 'ಲ' ಎಂದಿವೆ. ಇದು ಜಗಣವಾಗಿರುವ ಸಂಭವ ಹೆಚ್ಚಾಗಿದೆ. ಹಾಗಾದಲ್ಲಿ ೪ನೇ ಪಾದ ಜಸಜಸಯಲಲ ಅಥವಾ ಲಗ ಎಂದಾಗುತ್ತದೆ. ಎಂದರೆ ಇದು ಜಸಜಸಯಲಗವೆಂಬ ಪ್ರಸ್ತಾರವುಳ್ಳ ಪ್ರಥ್ವೀ ವೃತ್ತವೆಂದು ಹೇಳಬಹುದು ಎಂಬುದಾಗಿ ಎಂ.ಬಿ. ನೇಗಿನಹಾಳ ಅಭಿಪ್ರಾಯಪಟ್ಟಿದ್ದಾರೆ.[೬೫]

ಇಷ್ಟೆ ಅಲ್ಲದೆ ಕೆಲವು ಶಾಸನ ವೃತ್ತಗಳನ್ನು ನೋಡಬಹುದು.

೧) ಸೌ.ಇಂ.ಇ. ೯–೧ ನಂ. ೩೯೨ ಮಂಗಳೂರು (ಮತ್ತೇಭ)

೨) ಸೌ ಇಂ.ಇ. ೭ ನಂ. ೨೯೧ ಉದಯಾವರ (ಶಾರ್ದೂಲ)"

೩) E.C.03, ಮೈಸೂರು – ೦೬ ಬೆಲವತ್ತೆ (ಮತ್ತೇಭ)

೪) ಜಯಕರ್ನಾಟಕದ ೯.೬. ಪು : ೪೩೧ ಪಟ್ಟದಕಲ್ಲು (ಉತ್ತಲಮಾಲೆ)

೫) ಮೈ.ಆ.ರಿ. ೧೯೨೦ ಪು : ೨೪, ನರಸಿಂಹರಾಜಪುರ (ಮಹಾಸ್ರಗ್ಧರೆ)

ಇಂತಹ ವೃತ್ತಗಳಲ್ಲಿಯೂ ಖ್ಯಾತ ಕರ್ನಾಟಕದ ಲಕ್ಷಣಗಳನ್ನು ನೋಡಬಹುದು.

ಇಷ್ಟೇ ಅಲ್ಲದೆ ಇನ್ನೂ ಮುಂತಾದ ಶಾಸನಗಳನ್ನು ಛಂದಸ್ಸಿನ ನಿಯಮಕ್ಕೆ ಒಳಪಡಿಸಬಹುದು ಆದರೆ ಅವು ಸ್ಪಷ್ಟವಾಗಿ ಕಾಣದೆ ಇರುವುದರಿಂದ, ತ್ರುಟಿತವಾಗಿರುದರಿಂದ ಅವುಗಳನ್ನು ಗುರ್ತಿಸಲು ಸಾಧ್ಯವಾಗುತ್ತಿಲ್ಲ.

---

೬೪ ಕ.ಇಂ. – ೦೧, ಸಂ – ೦೬

೬೫ ಡಾ॥ ಎಂ.ಬಿ. ನೇಗಿನಹಾಳ, ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯದ ಅಧ್ಯಯನ ಪುಟ – ೮೧

ಅಧ್ಯಾಯ – ಐದು

ಶಾಸನ ಕವಿಗಳು

ಶಾಸನ ಕವಿಗಳು

ಕ್ರಿ.ಶ. ೮೦೦ರ ವರೆಗಿನ ಸಾಹಿತ್ಯಕ ಅಂಶವುಳ್ಳ ಶಾಸನಗಳನ್ನು ಗಮನಿಸಿದಾಗ ಇಂತಹ ಉತ್ಕೃಷ್ಟ ಪದ್ಯ ರಚನೆ ಕವಿಗಳಿಂದಲ್ಲದೆ ಬೇರೆ ಯಾರಿಂದಲೂ ಸಾಧ್ಯವಿಲ್ಲನೆಂದು ತಿಳಿದು ಬರುತ್ತದೆ. ಪ್ರತೀ ಶಾಸನ ಪದ್ಯವನ್ನು ಗಮನಿಸಿದಾಗ ಈ ಅಂಶ ತಿಳಿಯುತ್ತದೆ. ಆದರೆ ಆ ಕವಿಗಳು ತಮ್ಮ ಹೆಸರುಗಳನ್ನು ಹೇಳಿಕೊಳ್ಳದೇ ಇರುವುದು ದೊಡ್ಡ ತೊಡಕಾಗಿದೆ. ಆದರೂ ಕೆಲವು ಕವಿಗಳು ತಮ್ಮ ಹೆಸರು ಇತಿವೃತ್ತವನ್ನು ಶಾಸನಗಳಲ್ಲಿ ಹೇಳಿಕೊಂಡಿರುವುದನ್ನು ಕಾಣಬಹುದು.

ಗೋವಿಂದ ಪೈ ಅವರು ಶ್ರವಣಬೆಳಗೊಳದ ಸಾಹಿತ್ಯ ಶಾಸನಗಳನ್ನು ಗಮನಿಸಿ "ಶ್ರವಣಬೆಳಗೊಳದ ಶಾಸನ ಪದ್ಯಗಳನ್ನು ಕಟ್ಟಿದವರು ಪ್ರೌಢ ಕವಿಗಳಾಗಿರಬೇಕೆಂದೂ, ಅವರು ಇವೊಂದೊಂದು ಪದ್ಯವನ್ನು ಮಾತ್ರವಲ್ಲ ಅದರಂತೆಯೇ ಕನ್ನಡ ಕಾವ್ಯಗಳನ್ನು ರಚಿಸಿರಬೇಕೆಂದು ಅಲ್ಲಗಳೆಯುಲಾಗುವುದಿಲ್ಲ[೧] ಎಂದು ಹೇಳಿದ್ದಾರೆ. ರಂ.ಶ್ರೀ ಮುಗಳಿಯವರು "ಇವುಗಳ (ಶಾಸನ) ರಚರಕರು ಬೇರೆ ಕನ್ನಡ ಕಾವ್ಯಗಳನ್ನು ರಚಿಸಿರಬೇಕೆಂದು ನಿರ್ಧರಿಸುವಷ್ಟು ಕಾವ್ಯಗುಣವು ಪ್ರಕರ್ಷದಲ್ಲಿ ಕಂಡುಬರುವುದಿಲ್ಲ"[೨] ಎಂದು ವಾದಿಸಿದ್ದಾರೆ. ಇವರ ವಾದವನ್ನು ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಒಪ್ಪಿದ್ದಾರೆ.[೩] ಆದರೆ ಇಲ್ಲಿ ಗೋವಿಂದ ಪೈಗಳ ವಾದವೇ ಸರಿಯಾಗಿದೆ ಎನ್ನಬಹುದು. ಪ್ರಾಚೀನ ಶಾಸನ ಪದ್ಯಗಳನ್ನು ಗಮನಿಸಿದಾಗ ೧೦ನೇ ಶತಮಾನದ ನಂತರ ಬಂದ ಕಾವ್ಯಗಳಂತೆ ಉತ್ಕೃಷ್ಟ ಭಾಷೆಯನ್ನು ಬಳಸಿದ್ದಾರೆ. ಉದಾ: ಬಾದಾಮಿಯ ತ್ರಿಪದಿ ಶಾಸನವನ್ನು ಗಮನಿಸಿದರೆ ಪಂಪ, ರನ್ನ ಇತ್ಯಾದಿ ಕವಿಗಳ ಕೃತಿಯ ಪದ್ಯದಲ್ಲಿ ಬರುವ ತ್ರಿಪದಿಗಳಂತೆ ಪ್ರೌಢವಾಗಿವೆ. ಇವುಗಳನ್ನು ರಚಿಸಿದವರು ಕವಿಗಳೇ ಆಗಿದ್ದಾರೆ. ಹಾಗೂ ಈ ಕ್ರಿ.ಶ. ೮೦೦ರ ಪೂರ್ವದಲ್ಲಿ ಇವರು ಕನ್ನಡ ಕಾವ್ಯಗಳನ್ನು ಬರೆದಿರಬಹುದು. ಆದರೆ ಆ ಕವಿಗಳ ಕೃತಿಗಳು ನಮಗೆ ಉಪಲಬ್ಧವಾಗಿಲ್ಲ. ಇವರೂ ಸಹ ಜನ್ನ, ನಾಗಚಂದ್ರರಂತೆ ಮೊದಲು ಶಾಸನ ಕವಿಗಳಾಗಿದ್ದು ನಂತರ ಭಾಷೆಯನ್ನು ಪಳಗಿಸಿಕೊಂಡು ಕಾವ್ಯ ರಚನೆ ಮಾಡಿರಬಹುದು.

ಈ ನಾಡಿನ ಶಾಸನ ಕವಿಗಳು ಸಮಸ್ತ ಭಾರತದ ಶಾಸನ ಪ್ರಪಂಚದಲ್ಲಿ ಕನ್ನಡವನ್ನು ಸಂಸ್ಕೃತದ ಮಗ್ಗುಲಿಗೆ ನಿಲಿಸಿದರು. ಇವರನ್ನು ಗುರುತಿಸಿ ಒಂದು ವ್ಯವಸ್ಥಿತ 'ಶಾಸನ ಕವಿಚರಿತೆ'ಯನ್ನು ಬರೆಯ ಬೇಕಾಗಿರುವುದು ಇಂದಿಗೂ ಒಂದು ಕೊರತೆಯಾಗಿ ಉಳಿದಿದೆ. "ಈ ಕೊರತೆಯನ್ನು ಕೆಲಮಟ್ಟಿಗೆ ತುಂಬಿ ಕೊಡುವ ರೀತಿಯಲ್ಲಿ 'ಬರೆದಂ ಲೋಕಯ್ಯ, ಬೆಸಗೆಯ್ವೊಂ ಕೊಯತೂರ ವಿಕ್ರಮಾದಿತ್ಯನ್', ಬರೆದೊಂ ಲೋಕಯ್ಯ, ದಿನಕರಯ್ಯ ಸೆಟ್ಟಿಯ ಲಿಖಿತಂ ಎಂದು ಶಾಸನದ ಕೆಳತುದಿಯಲ್ಲಿ ಸೂಚಿತವಾದ ಕವಿ, ಲಿಪಿಕಾರ, ರೂವಾರಿಗಳಿಂದ ಶಾಸನ ಕವಿಯನ್ನು ಹುಡುಕುವುದು ದೊಡ್ಡ ತೊಡಕಾದರೂ ಇದನ್ನು

---

೧ ಎಂ. ಗೋವಿಂದಪೈ, ಪೂರ್ವೋಕ್ತ, ಪುಟ – ೧೨೩

೨ ಕನ್ನಡ ಸಾಹಿತ್ಯ ಚರಿತ್ರೆ –೦೨ ಪುಟ –೧೨, ಮೈಸೂರು ವಿಶ್ವವಿದ್ಯಾನಿಲಯ

೩ ಅದೇ ಪುಟ – ೪೬೪

ಅರ್ಥಮಾಡಿಕೊಂಡು ಇಲ್ಲಿ ಕವಿಗಳನ್ನು, ತಪ್ಪಿದರೆ ಸಾಕ್ಷರಿಗಳನ್ನು ಹೆಸರಿಸುವ ಪ್ರಯತ್ನ ಮಾಡಬಹುದು" ಎಂದು ಕಲಬುರ್ಗಿ ಅಭಿಪ್ರಾಯಪಟ್ಟಿದ್ದಾರೆ.[೪]

ಕ್ರಿ.ಶ. ೮೦೦ ರ ವರೆಗೆ ಇದ್ದ ಶಾಸನ ಕವಿಗಳ ಬಗೆ ಮಾಹಿತಿ ಸಿಗುವುದಿಲ್ಲ. ಸಿಕ್ಕಿದರೂ ಕೇವಲ ಮೂರ್ನಾಲ್ಕು ಜನ ಮಾತ್ರ. ಅವುಗಳಲ್ಲಿ ಪ್ರಮುಖರಾದವರೆಂದರೆ ದಿವ್ಯ ಭಾಷಾಕಲನ್, ಅಚಲನ್, ಮ(ಮಾ)ರಮ್ಮ ಪ್ರಮುಖ ಕವಿಗಳಾಗಿದ್ದಾರೆ.

ದಿವ್ಯ ಭಾಷಾಕಲನ್ (ಕ್ರಿ.ಶ. ೭೫೪)

ಗುಂಡ್ಲುಹಳ್ಳಿ ಶಾಸನದಲ್ಲಿ "ಲಿಖಿಚ್ಚಿದೋನ್ ದಿವ್ಯ ಭಾಷಾ ಕಲನ್ ತ್ರಿಣ್ಯ ನಾಮಗಿರಿ ಗ್ರಾಮ ಸೂಳ್ದೋನ್" ಎಂದಿದೆ.[೫] ಇಲ್ಲಿ ಬಂದಿರುವ 'ದಿವ್ಯ ಭಾಷಾ ಕಲನ್' ಎಂಬುದು ಈ ಶಾಸನ ರಚಕನ ಬಿರುದಾಗಿದ್ದು ಈ ಬಿರುದಿನಿಂದಲೇ ಆತ ಪ್ರಸಿದ್ಧನಾಗಿರಬೇಕು. ಶಾಸನದಲ್ಲಿ ತನ್ನ ಮೂಲ ಹೆಸರನ್ನೀಯದೆ (ದಿವ್ಯ ಭಾಷಾಕಲನ್) ಎಂಬ ಬಿರುದನ್ನು ಮಾತ್ರ ಕೊಟ್ಟಿದ್ದಾನೆ. ಪ್ರಸ್ತುತ ಶಾಸನ ಸಂಪಾದಕರು ಈ ಶಾಸನದ ಕಾಲ ಕ್ರಿ.ಶ. ಸು. ೭೫೪ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಚಲನು ಬರೆದ ಪಟ್ಟದಕಲ್ಲು ಪದ್ಯ ಶಾಸನವು ೮ನೇ ಶತಮಾನದ ಕೊನೆಯ ಭಾಗಕ್ಕೆ ಸೇರಿದೆಂದು ಮಧುರಚನ್ನರು ಅಭಿಪ್ರಾಯಪಟ್ಟಿದ್ದಾರೆ. ಇವೆರಡು ಅಭಿಪ್ರಾಯಗಳು ನಿರ್ದುಷ್ಟವೆಂಬಾದರೆ ಈಗಿನ ಮಟ್ಟಿಗೆ ಈ ದಿವ್ಯ ಭಾಷಾ ಕಲನ್ ಕನ್ನಡ ಶಾಸನ ಸಾಹಿತ್ಯದ ಪ್ರಶಸ್ತಿ ನಾಮವನ್ನು ಘೋಷಿಸಬಹುದಾದ ಪ್ರಥಮ ಕವಿಯೆನಿಸುತ್ತಾನೆ.[೬]

ಅಚಲನ್ (೮ನೇ ಶತಮಾನ)

ಪಟ್ಟದಕಲ್ಲು ವಿರೂಪಾಕ್ಷ ದೇವಾಲಯದ ಈಶ್ಯಾನ ಕಂಬದ ಮೇಲೆ ಸಂಸ್ಕೃತದಲ್ಲಿ. ದಕ್ಷಿಣದ ಒಳಮಗ್ಗಲು ಗೋಡೆಯ ಮೇಲೆ ಕನ್ನಡದಲ್ಲಿ 'ನಟಸೇವ್ಯನ್' ಎಂಬುವನ ನರ್ತನ ಸಿದ್ಧಿಯನ್ನು, 'ಅಚಲನ್' ಎಂಬ ಕವಿ ಬಾಯ್ತುಂಬ ಬಣ್ಣಿಸಿದ್ದಾನೆ. ಈ ಶಾಸನದ ಕಾಲವನ್ನು ಮಧುರಚೆನ್ನರು ೮ನೇ ಶತಮಾನವೆಂದು ಊಹಿಸಿದ್ದಾರೆ.[೭]

ಈ ಶಾಸನದ ಕೊನೆಯಲ್ಲಿ "ದೇವಯ್ಯಗಳಾ ಮಗ ಅಚಲನ್" ಎಂಬ ಉಲ್ಲೇಖವಿರುವುದರಿಂದ ಇದನ್ನು ಅಚಲನ್ ಬರೆದನೆಂದು ಸ್ಪಷ್ಟವಾಗುತ್ತದೆ.

"ಈ ಶಾಸನಗಳು ದೇವಯ್ಯಗಳ ಮಗ ಅಚಲನ್‌ನ ಉಭಯಭಾಷಾ ಕವಿತ್ವಕ್ಕೆ ಕನ್ನಡಿಯೆನಿಸಿದ. ಸಂಸ್ಕೃತ ಪದ್ಯಗಳಲ್ಲಿಯ ಪ್ರಾಸ ಯೋಜನೆ ಈತನ ಕನ್ನಡತನದ ಕುರುಹು ಭಾವದೀಪ್ತಿ ಭಾಷಾ ಶುದ್ಧಿಗಳಲ್ಲಿ ವಿಶೇಷ ಸಿದ್ಧಿಯನ್ನು ಸಾಧಿಸಿದ ಇದು ಪಂಪ ಪೂರ್ವಯುಗದ ವಿಶಿಷ್ಟ ಶಾಸನ".[೮]

---

೪ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜ ಮಾರ್ಗ ಪರಿಸರ ಕನ್ನಡ ಸಾಹಿತ್ಯ, ಪುಟ – ೧೪೨

೫ E.C. – 16 ಪಾವಗಡ – ೧೨

೬ ಡಾ॥ ಎಂ.ಬಿ. ನೇಗಿನಹಾಳ ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪುಟ – ೭೨

೭ ಜಯಕರ್ನಾಟಕ ೯–೬, ಪುಟ – ೪೩೧

೮ ಡಾ॥ ಎಂ.ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ – ೧೪೩,

"ಇದು ಬರಿಯ ಲಿಪಿಕಾರನ ಹೆಸರು ಆಗಿರದೆ ಈ ಶಾಸನ ಕವಿ ಹೆಸರಾಗಿದ್ದಾರೆ ಶಾಸನ ಸಾಹಿತ್ಯದಲ್ಲಿ ಹೆಸರು ತಿಳಿದ ಪ್ರಥಮ ಉಭಯ ಭಾಷಾ ಕವಿ ಈತನಾಗಿದ್ದಾನೆ".[೯]

ಮ(ಮಾ)ರಮ್ಮ

ಅಂಗರನನ್ನು ಕುರಿತ ೫ ತ್ರಿಪದಿಗಳುಳ್ಳ ಸೊರಬ ಶಾಸನದ ಅಂತ್ಯ ಭಾಗದಲ್ಲಿ "ಅರವಡ್ಡಗಿರಿಯದ ವದರ್ಪುಲಿ ಮಾಡಿದ ಸಿಲಾಕರ್ಮ್ಮ ಮಲಗಾರರ ಕುಂದ ವಾಸಿಯ ಮಗಂ ಮರಮ್ಮ ವರೆದೆ (ದ) ಲಿಕಿತನ್" ಎಂದಿದೆ.

ಇಲ್ಲಿ ಶಿಲಾಕರ್ಮ ಮಾಡಿರುವವ ಬೇರೆ ಲೇಖಕ ಬೇರೆ ಎಂಬುದು ಸ್ಪಷ್ಟ. ಮರಮ್ಮ ಅಥವಾ ಮಾರಮ್ಮ ಬೇರೊಬ್ಬನು ಬರೆದ ಶಾಸನವನ್ನು ಶಾಸನ ಶಿಲೆಯ ಮೇಲೆ ಬಳಪದಿಂದ ಬರೆದವನೇ ಅಥವಾ ಶಾಸನದ ಕವಿಯೆ ಎಂದು ಹೇಳುವುದು ಕಷ್ಟ. ಶಾಸನವನ್ನು ಒಬ್ಬನು ರಚಿಸಿ, ಒಬ್ಬನು ಬಳಪದಿಂದ ಬರೆದು ಮತ್ತೊಬ್ಬನು ಕಂಡಿರಿಸುತ್ತಿದ್ದ ಪದ್ಧತಿ ಮುಂದಿನ ಕಾಲದಲ್ಲಿ ಕಂಡು ಬರುತ್ತದೆ".[೧೦]

"ಇಲ್ಲಿ ಮರಮ್ಮ ಕವಿಯೇ ಆಗಿದ್ದ ಪಕ್ಷದಲ್ಲಿ ಈ ಅವಧಿಯಲ್ಲಿ ಹೆಸರು ದೊರೆಯುವ ೩ನೇ ಕವಿ ಈತನಾಗುತ್ತಾನೆ ಎಂದು ರೂಢಿ ನೇಗಿನಹಾಳ ಅಭಿಪ್ರಾಯ".[೧೧]

ಈ ರೀತಿ ಶಾಸನಗಳಲ್ಲಿ ಕ್ರಿ.ಶ.ದ ಆರಂಭದಿಂದ ಕ್ರಿ.ಶ. ೮೦೦ರ ವರೆಗೆ ಮೂರುಜನಗಳು ದೊರೆಯುತ್ತಾರೆ. ಇಷ್ಟು ಮಾಹಿತಿಯಿಂದ ಶಾಸನ ಕವಿಗಳ ಚರಿತ್ರೆ ದೊರೆಯಲಾರದು. ಇದರ ಬಗ್ಗೆ ಇನ್ನೂ ಸಂಶೋಧನೆಯಾಗಬೇಕಾಗಿದೆ.

೯ ಡಾ॥ ಎಂ.ಬಿ. ನೇಗಿನಹಾಳ, ಪೂ. ಹ. ಶಾ. ಸಾ ಅಧ್ಯಯನ, ಪುಟ – ೭೨
೧೦ ಡಾ॥ ಎಂ. ಚಿದಾನಚಿದಮೂರ್ತಿ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ ೫೮–೫೯
೧೧ ಡಾ॥ ಎಂ.ಬಿ. ನೇಗಿನಹಾಳ ಪೂ. ಹ. ಶಾ.ಸಾ. ಅಧ್ಯಯನ, ಪುಟ – ೭೩

ಅಧ್ಯಾಯ – ಆರು

ಸಮಾರೋಪ

ಸಮಾರೋಪ

ಪ್ರಾಚೀನ ಕನ್ನಡ ಶಾಸನಗಳನ್ನು ಸಾಹಿತ್ಯಕ ದೃಷ್ಟಿಯಿಂದ ಅಧ್ಯಯನ ಮಾಡಿರುವ ಈ ಸಪ್ರಬಂಧದಲ್ಲಿ ಕ್ರಿ.ಶ. ೫೦೦ ರಿಂದ ೮೦೦ರ ವರೆಗೆ ಬರುವ ಶಾಸನ ಪದ್ಯಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಈ ಅವಧಿಯಲ್ಲಿ ಸುಮಾರು ೫೦ ಶಾಸನಪದ್ಯಗಳನ್ನು ಕಾಣಬಹುದು. ಇವುಗಳಲ್ಲಿ ತ್ರುಟಿತವಾಗಿರುವ ಕೆಲವು ಶಾಸನಗಳನ್ನು ಕೈಬಿಡಲಾಗಿದೆ. ಅಧ್ಯಾಯ ಒಂದರಲ್ಲಿ ಶಾಸನಗಳ ಅಧ್ಯಯನ ಆರಂಭ ಕಾಲವನ್ನು ವಿವರಿಸಿ, ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಹೇಳಲಾಗಿದೆ. ಈ ವಿಷಯದ ಬಗ್ಗೆ ನಡೆದಿರುವ ಅಧ್ಯಯನವನ್ನು ಹೇಳಲಾಗಿದೆ. ಈ ಕೃತಿಗಳಲ್ಲಿ ಡಾ|| ಎಂ.ಎಂ. ಕಲಬುರ್ಗಿಯವರ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ', ಡಾ|| ಎಂ.ಬಿ. ನೇಗಿನಹಾಳ ಅವರ 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಕ ಅಧ್ಯಯನ', ಡಾ|| ಬಿ.ವಿ. ಶಿರೂರ ಅವರ 'ಶ್ರವಣಬೆಳಗೊಳ' ರಾಜಕೀಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮಹತ್ವ ಇಂತಹ ಕೃತಿಗಳ ಮಹತ್ವವನ್ನು ಕುರಿತು ಹೇಳಲಾಗಿದೆ ಮತ್ತು ಪ್ರಸ್ತುತ ಸಪ್ರಬಂಧದಲ್ಲಿ ಮೇಲಿನ ಕೃತಿಗಳಿಗಿಂತ ಹೇಗೆ ಭಿನ್ನವಾಗಿ ಚರ್ಚಿಸಬಹುದು ಎಂದು ಹೇಳಲಾಗಿದೆ.

ಆಕರ ಸಾಮಗ್ರಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯ ಶಾಸನ ಸಂಪುಟಗಳನ್ನು ಅದರಲ್ಲೂ ವಿಶೇಷವಾಗಿ ಶ್ರವಣಬೆಳಗೊಳ ಶಾಸನ ಸಂಪುಟವನ್ನು ಬಳಸಿಕೊಂಡಿದೆ. ಹಂಪಿ ವಿಶ್ವವಿದ್ಯಾನಿಲಯದ ಶಾಸನ ಸಂಪುಟಗಳನ್ನು ಬಳಸಿಕೊಂಡಿದೆ. ಇಷ್ಟೇ ಅಲ್ಲದೆ ಕರ್ನಾಟಕೇತರ ರಾಜ್ಯಗಳಲ್ಲಿಯೂ ದೊರೆತ್ತಿರುವ ಕನ್ನಡ ಶಾಸನ ಪದ್ಯಗಳನ್ನು ಬಳಸಿಕೊಂಡಿದೆ. ಹಾಗೂ ಪ್ರಮುಖ ನಿಯತ ಕಾಲಿಕೆಗಳಾದ ಇತಿಹಾಸದರ್ಶನ ಜಯ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಾಧನೆ ಮುಂತಾದ ಪತ್ರಿಕೆಗಳಲ್ಲಿ ಬಂದಿರುವ ಶಾಸನಗಳನ್ನು ತೆಗೆದುಕೊಂಡು ಸಂಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಆರಂಭ ಕಾಲಘಟ್ಟದ ಶಾಸನಗಳನ್ನು ಅಂದರೆ ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನ ಸಿಗುವವರೆವಿಗೂ ದೊರೆತಿರುವ ಹಲವಾರು ಶಾಸನಗಳನ್ನು ಚರ್ಚಿಸಲಾಗಿದೆ. ಅವುಗಳಲ್ಲಿ ಅಶೋಕ ಬ್ರಹ್ಮಗಿರಿಶಾಸನ, ನಿಟ್ಟೂರು ಶಾಸನವನ್ನು ಹಾಗೂ ಈ ಶಾಸನಗಳಲ್ಲಿ ಬರುವ ಕನ್ನಡ ಶಬ್ದಗಳನ್ನು ಚರ್ಚಿಸಲಾಗಿದೆ. ನಂತರ ಕನ್ನಡ ಶಾಸನಗಳೇ ಆದ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನ, ಅದಕ್ಕೂ ಮುಂಚೆ ಡಾ|| ಎಂ.ಜಿ. ಮಂಜುನಾಥ ಪತ್ತೆ ಹಚ್ಚಿರುವ ಕ್ರಿ.ಶ. ೪೦೦ರ ಗುಣಭೂಷಿತ ಮುನಿಯ ಶಾಸನವನ್ನು ಚರ್ಚಿಸಲಾಗಿದೆ. ಈ ಮಧ್ಯದಲ್ಲಿ ಗೋವಿಂದಪೈಗಳು ಗಟ್ಟವಾಡಿ ಶಾಸನ, ನಂಜನಗೂಡಿನ ತಾಮ್ರ ಶಾಸನ, ಮುಂತಾದ ಶಾಸನಗಳನ್ನು ಕ್ರಿ.ಶ. ೧-೨ ಶತಮಾನದವಾಗಿದ್ದು ಇವೇ ಪ್ರಾಚೀನ ಕನ್ನಡ ಶಾಸನಗಳೆಂದು ಗುರ್ತಿಸಿರುವ ಹಲವಾರು ಶಾಸನಗಳನ್ನು ವಿದ್ವಾಂಸರು

ಒಪ್ಪಿಕೊಂಡಿಲ್ಲದಿರುವುದನ್ನು ಚರ್ಚಿಸಲಾಗಿದೆ. ಇಷ್ಟೇ ಅಲ್ಲದೆ ಗದ್ದೆಮನೆ ಶಾಸನ, ಮಂಗಳೇಶನ ಬಾದಾಮಿ ಶಾಸನ, ಜಲಗಾರ ದಿಬ್ಬದ ಶಾಸನವನ್ನು ಚರ್ಚಿಸಲಾಗಿದೆ. ಬಾದಾಮಿ ಶಾಸನವು ಕ್ರಿ.ಶ. ೫೭೮ರ ಕಾಲವಾಗಿದ್ದರೂ ಹಲ್ಮಿಡಿ ಶಾಸನ ದೊರೆಯುವವರೆಗೂ ಈ ಶಾಸನವನ್ನೇ ಕನ್ನಡದ ಪ್ರಾಚೀನ ಶಾಸನವೆಂದು ಕರೆಯಲಾಗಿತ್ತು ಆದ್ದರಿಂದ ಈ ಶಾಸನವನ್ನು ಚರ್ಚೆ ಮಾಡಲಾಗಿದೆ. ಜಲಗಾರ ದಿಬ್ಬದ ಶಾಸನವನ್ನು ಡಾ॥ ಎಚ್.ಎಸ್. ಗೋಪಾಲರಾವ್ ಅವರು ಕ್ರಿ.ಶ. ೩೦೦ ಎಂದು ಗುರ್ತಿಸಿ ನಂತರ ಅವರೇ ೭ನೇ ಶತಮಾನವೆಂದು ಒಪ್ಪಿಕೊಂಡಿರುವುದನ್ನು ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಪ್ರಮುಖ ಶಾಸನ ಪದ್ಯಗಳನ್ನು ಕುರಿತು ಚರ್ಚಿಸಲಾಗಿದೆ. ಇದರಲ್ಲಿ ಪ್ರಾಚೀನ ಸಾಹಿತ್ಯಕ ಅಂಶವುಳ್ಳ ಮೊದಲ ಶಾಸನವೆಂದು ಕರೆದಿರುವ ತಮಟಕಲ್ಲು ಶಾಸನವನ್ನು ಸಂಪೂರ್ಣ ಚರ್ಚೆ ಮಾಡಲಾಗಿದೆ. ಇದೇ ರೀತಿ ಕ್ರಿ.ಶ. ೮೦೦ರ ವರೆಗೆ ಬರುವ ಬಾದಾಮಿ ಶಾಸನ, ನಂದಿಸೇನ ಪ್ರವರ ಮುನಿಯಶಾಸನ, ಹೊಂಬುಜ ಶಾಸನ ಹೀಗೆ ಇನ್ನೂ ಮುಂತಾದ ಪ್ರಮುಖ ಶಾಸನಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಶಾಸನ ಪದ್ಯಗಳ ಛಂದಸ್ಸನ್ನು ಚರ್ಚಿಸಲಾಗಿದೆ. ಇವುಗಳಲ್ಲಿ ಖ್ಯಾತ ಕರ್ಣಾಟಕಗಳೇ ಪ್ರಮುಖವಾಗಿವೆ ಎಂಬುದನ್ನು ನಿರೂಪಿಸಲಾಗಿದೆ ಹಾಗೂ ಇವುಗಳ ಜೊತೆಗೆ ಕಂದ, ತ್ರಿಪದಿ, ಪಿರಿಯಕ್ಕರ, ಶಾಸನ ಪದ್ಯಗಳನ್ನು ಗುರ್ತಿಸಿ ಅವುಗಳನ್ನು ಛಂದಸ್ಸಿನ ನಿಯಮಕ್ಕೆ ಒಳಪಡಿಸಿ ಚರ್ಚಿಸಿದೆ. ಅಷ್ಟೇ ಅಲ್ಲದೆ ಪ್ರತಿ ಶಾಸನ ಪದ್ಯದಲ್ಲಿ ಬಂದಿರುವ ಯತಿ, ಪ್ರಾಸ, ವಡಿಗಳನ್ನು ಕುರಿತು ಚರ್ಚಿಸಲಾಗಿದೆ. ಇತರ ಛಂದಸ್ಸುಗಳಾದ ಮಲ್ಲಿಕಾಮಾಲೆ, ವಸಂತ ತಿಲಕ, ವಂಶಸ್ಥ, ಮಂಗಳಾಮಾಲಾ ಇತ್ಯಾದಿ ವೃತ್ತಗಳನ್ನು ವಿವರಿಸಲಾಗಿದೆ.


ಅಧ್ಯಾಯ ಐದರಲ್ಲಿ ಕ್ರಿ.ಶ. ೮೦೦ರ ವರೆಗೆ ಬರುವ ಶಾಸನ ಕವಿಗಳನ್ನು ಕುರಿತು ಚರ್ಚಿಸಲಾಗಿದೆ. ಈ ಅವಧಿಯಲ್ಲಿ ಪ್ರಮುಖವಾಗಿ ಮೂರು ಜನ ಕವಿಗಳಾದ ದಿವ್ಯ ಭಾಷಾ ಕಲನ್, ಅಚಲನ್, (ಮ) ಮಾರಮ್ಮ ಇವರ ಬಗ್ಗೆ ಚರ್ಚಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಸಮಾರೋಪವನ್ನು ಬರೆಯಲಾಗಿದೆ. ಅನುಬಂಧದಲ್ಲಿ ಪ್ರಮುಖ ಛಾಯಾಚಿತ್ರಗಳಾದ ಅಶೋಕ ಶಾಸನ, ಗುಣಭೂಷಿತ ಮುನಿ ಶಾಸನ, ಹಲ್ಮಿಡಿ ಶಾಸನ, ತಮಟಕಲ್ಲು ಶಾಸನ, ಬಾದಾಮಿ ಶಾಸನ ಮುಂತಾದ ಶಾಸನ ಚಿತ್ರಗಳನ್ನು ಕೊಡಲಾಗಿದೆ. ಕೊನೆಯಲ್ಲಿ ಈ ಸಪ್ರಬಂಧಕ್ಕೆ ಬಳಸಿಕೊಳ್ಳಲಾದ ಗ್ರಂಥಗಳ ಸಂಪೂರ್ಣ ಮಾಹಿತಿಯನ್ನು ಕೊಡಲಾಗಿದೆ. ಇಂತಹ ಸಾಹಿತ್ಯಕ ಅಂಶವುಳ್ಳ ಶಾಸನಗಳಿಂದ ಕನ್ನಡ ಸಾಹಿತ್ಯ ಚರಿತ್ರೆಯನ್ನು ತಿಳಿಯಲು ಇವು ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ತಿಳಿಯಲಾಯಿತು. ಈ ಅಧ್ಯಯನದಿಂದ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕ್ರಿ.ಶ. ೫೦೦ರಿಂದ ಆರಂಭ ಮಾಡಬೇಕಾಗಿದೆ. ಎಂಬುದು ಮನದಟ್ಟಾಗಿದೆ. ಇನ್ನು ಮುಂದಕ್ಕೆ ಅಂದರೆ ಕ್ರಿ.ಶ.

೮೦೦ರಿಂದ ಮುಂದಕ್ಕೆ ಸಾಹಿತ್ಯಕ ಅಂಶಗಳ ಶಾಸನಗಳನ್ನು ಗಮನಿಸಿದಾಗ ಎರಡು - ಮೂರು ಪಿ.ಎಚ್‌ಡಿಗಳಿಗಾಗುವಷ್ಟು ವಿಷಯ ದೊರೆಯುತ್ತದೆ. ಅಂತಹ ಕಾರ್ಯಗಳು ಮುಂದಕ್ಕೆ ನಡೆಯಬೇಕಿದೆ.


ಅನುಬಂಧ

೧. ಶಾಸನ ಛಾಯಾಚಿತ್ರಗಳು


ಚಿತ್ರ - 1 : ಅಶೋಕನ ಗವಿಮಠ ಶಾಸನ. ಕೊಪ್ಪಳ. ಕ್ರಿ.ಪೂ. 3ನೆಯ ಶತಮಾನ




ಚಿತ್ರ - 2 : ಅಶೋಕನ ಶಾಬಾಸ್‌ಗಾರಿ ಶಾಸನ. ಖರೋಷ್ಠಿ ಲಿಪಿ. ಕ್ರಿ.ಪೂ. 3ನೆಯ ಶತಮಾನ




ಚಿತ್ರ - 3 : ಅಶೋಕನ ಶಾಸನ. ಬ್ರಹ್ಮಗಿರಿ. ಕ್ರಿ.ಪೂ. 3ನೆಯ ಶತಮಾನ




ಚಿತ್ರ - 4 : ಗೌತಮೀಪುತ್ರ ಶಿವಸ್ಕಂದವರ್ಮ ನಾಗಶ್ರೀಯ ನಾಗ ಶಿಲಾಶಾಸನ.
ಬನವಾಸಿ. ಕ್ರಿ.ಶ. 1ನೆಯ ಶತಮಾನ




ಚಿತ್ರ - 5 : ಪುಳುಮಾವಿಯ ಮಹಾದೇವಿಯ ಸ್ಮಾರಕ ಶಾಸನ. ಬನವಾಸಿ. ಕ್ರಿ.ಶ. 3ನೆಯ ಶತಮಾನ




ಚಿತ್ರ - 6 : ಶಕಕ್ಷತ್ರಪ ನಹಪಾನನ ಗುಹಾಶಾಸನ. ನಾಸಿಕ್. ಕ್ರಿ.ಶ. ಸು. 3ನೆಯ ಶತಮಾನ




ಚಿತ್ರ - 7 : ಮಯೂರಶರ್ಮನ ಶಾಸನ. ಚಂದ್ರವಳ್ಳಿ. ಕ್ರಿ.ಶ. ಸು. 350




ಚಿತ್ರ - 8 : ಗುಣಭೂಷಿತನ ನಿಸಿದಿ ಶಾಸನ. ಶ್ರವಣಬೆಳಗೊಳ ಕ್ರಿ.ಶ. ಸು. 400




ಚಿತ್ರ - 9 : ಇಮ್ಮಡಿ ಮಾಧವನ ತಾಮ್ರ ಶಾಸನ. ಮೆಳೆಕೋಟೆ. ಕ್ರಿ.ಶ. 400




ಚಿತ್ರ - 10 : ಮುಮ್ಮಡಿ ಮಾಧವನ ತಾಮ್ರಪಟ. ಪೆನುಗೊಂಡೆ. ಕ್ರಿ.ಶ. 450




ಚಿತ್ರ - 11 : ಹಲ್ಮಿಡಿ ಶಾಸನ. ಕ್ರಿ.ಶ. 450




ಚಿತ್ರ - 12 : ಕದಂಬ ಮೃಗೇಶವರ್ಮನ ಸ್ಥಂಭ ಶಾಸನ. ಬನವಾಸಿ. ಕ್ರಿ.ಶ. ಸು. 450




ಚಿತ್ರ - 13 : ಕದಂಬ ಶಾಂತಿವರ್ಮನ ಸ್ಥಂಭ ಶಾಸನ. ತಾಳಗುಂದ. ಕ್ರಿ.ಶ. ಸು. 450




ಚಿತ್ರ - 14 : ಕದಂಬ ಮೃಗೇಶವರ್ಮನ ತಾಮ್ರಶಾಸನ.
ಹಾರನಹಳ್ಳಿ. ಕ್ರಿ.ಶ. 457




ಚಿತ್ರ - 15 : ಕದಂಬ ದೊರೆ ಮಾಂಧಾತವರ್ಮನ ತಾಮ್ರಶಾಸನ. ಶಿವಮೊಗ್ಗ. ಕ್ರಿ.ಶ. ಸು. 490




ಚಿತ್ರ - 16 : ಗುಣಮಧುರನ ಪ್ರಶಸ್ತಿಶಾಸನ. ತಮಟಕಲ್ಲು. ಕ್ರಿ.ಶ. 500




ಚಿತ್ರ - 17 : ಒಂದನೇ ಪುಲಿಕೇಶಿಯ ಶಾಸನ. ಬಾದಾಮಿ. ಕ್ರಿ.ಶ. 543




ಚಿತ್ರ - 18 : ಮಂಗಳೇಶನ ಗುಹಾ ಶಾಸನ.
ಬಾದಾಮಿ. ಕ್ರಿ.ಶ. 598




ಚಿತ್ರ - 19 : ಪಾಂಡ್ಯವಿಲ್ಲರಸನ ಶಾಸನ.
ಉದ್ಯಾವರ. ಕ್ರಿ.ಶ. 650






ನಂದಿಸೇನ ಮುನಿಯ ನಿಸಿದಿಶಾಸನ,
ಶ್ರವಣಬೆಳಗೊಳ ಕ್ರಿ. ಶ. ಸು. ೭೦೦


ಚಿತ್ರ - 20 : ಕಪ್ಪೆ ಅರಭಟ್ಟನ ಶಾಸನ.
ಬಾದಾಮಿ. ಕ್ರಿ.ಶ. ಸು. 700



ಚಿತ್ರ - 21 : ಶ್ರೀಪುರುಷನ ಶಾಸನ.
ತಲಕಾಡು. ಕ್ರಿ.ಶ. 726



ಚಿತ್ರ - 22 : ಇಮ್ಮಡಿ ವಿಕ್ರಮಾದಿತ್ಯನ ಶಾಸನ.
ಕಂಚಿ. ಕ್ರಿ.ಶ. ಸು. 720



೨. ಆಕರ ಗ್ರಂಥಗಳು

೧) ಶಾಸನ ಸಂಪುಟಗಳು (ಪರಿಷ್ಕೃತ) : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೨) ಶಾಸನ ಸಂಪುಟಗಳು : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ

೩) ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ : ಡಾ॥ ಎಂ.ಎಂ. ಕಲಬುರ್ಗಿ, ಸಪ್ನ ಬುಕ್ ಹೌಸ್. ಬೆಂಗಳೂರು.

೪) ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ. ಮುಗಳಿ

೫) ಕನ್ನಡ ಸಾಹಿತ್ಯ ಚರಿತ್ರೆ ಸಂ: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೬) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂ: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು.

೭) ಡಾ॥ ಬಿ.ವಿ. ಶಿರೂರ, ಶ್ರವಣಬೆಳಗೊಳ ರಾಜಕೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮಹತ್ವ : ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೮) ಶ್ರವಣಬೆಳಗೊಳ ಒಂದು ಅಧ್ಯಯನ : (ಸಂ) ಜಿ.ಎಸ್. ಶಿವರುದ್ರಪ್ಪ, ಪ್ರಸಾರಾಂಗ ಬೆಂ.ವಿ.ವಿ. ಬೆಂಗಳೂರು

೯) ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಿಕ ಅಧ್ಯಯನ : ಡಾ॥ ಎಂ. ಬಿ. ನೇಗಿನಹಾಳ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦) ವೈಶಿಷ್ಟ್ಯ ಪೂರ್ವ ಕನ್ನಡ ಶಾಸನಗಳು : ಡಾ॥ ಎಂ.ಜಿ. ಮಂಜುನಾಥ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

೧೧) ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಕ ಅಧ್ಯಯನ : ಡಾ॥ ಎಂ.ಬಿ. ನೇಗಿನಹಾಳ ಪ್ರಸಾರಾಂಗ, ಕರ್ನಾಟಕ ವಿಶ್ವ ವಿದ್ಯಾನಿಲಯ, ಧಾರವಾಡ

೧೨) ಶಾಸನ ಪದ್ಯ ಮಂಜರಿ : (ಸಂ) ಆರ್. ನರಸಿಂಹಚಾರ್ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ೧೯೭೫.

೧೩) ಸಂಶೋಧನ ತರಂಗ – ೦೨ : ಡಾ॥ ಎಂ. ಚಿದಾನಂದಮೂರ್ತಿ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ೧೯೭೦.

೧೪) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಡಾ॥ ಎಂ. ಚಿದಾನಂದಮೂರ್ತಿ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ೧೯೬೬.

೧೫) ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂತಿ. ಮೈಸೂರು.

೧೬) ಇತಿಹಾಸ ದರ್ಶನ ಸಂಪುಟಗಳು : (ಸಂ) ಸೂರ್ಯನಾಥ ಕಾಮತ್ ಇತಿಹಾಸ ಅಕಾಡೆಮಿ ಬೆಂಗಳೂರು

೧೭) ಆದಿಪುರಾಣ ಸಂಗ್ರಹ : (ಸಂ) ಎಲ್. ಗುಂಡಪ್ಪ

೧೮) ಕನ್ನಡ ಲಿಪಿ ವಿಕಾಸ : ಡಾ॥ ಎಂ.ಜಿ. ಮಂಜುನಾಥ, ಜಿ.ಕೆ. ದೇವರಾಜಸ್ವಾಮಿ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠ. ಮಂತ್ರಾಲಯ. ೨೦೦೬.

೧೯) ಕನ್ನಡ ಗ್ರಂಥ ಸಂಪಾದನೆ: ಡಿ.ಎಲ್. ನರಸಿಂಹಚಾರ್ ೨೦೦೫.

೨೦) ವಡ್ಡಾರಾಧನೆ : (ಸಂ) ಡಿ.ಎಲ್. ನರಸಿಂಹಚಾರ್

೨೧) ಕರ್ಣಾಟಕ ಪಂಚತಂತ್ರ: (ಸಂ) ಎನ್. ಅನಂತರಂಗಾಚಾರ್ ೧೯೭೩

೨೨) ಅನಂತ ನಾಥ ಪುರಾಣ : (ಸಂ) ಡಿ. ಶ್ರೀನಿವಾಸಾಚಾರ್ ಎಚ್.ಆರ್. ರಂಗಸ್ವಾಮಿ ಅಯ್ಯಂಗಾರ್

೨೩) ಮೂರು ಉಪನ್ಯಾಸಗಳು : ಎಂ. ಗೋವಿಂದ ಪೈ

೨೪) ಸಮಾಧಿ ಬಲಿದಾನ – ವೀರ ಮರಣ ಸ್ಮಾರಕಗಳು – ಡಾ॥ ಎಂ.ಎಂ. ಕಲಬುರ್ಗಿ

೨೫) ಕರ್ನಾಟಕ ಇತಿಹಾಸ ಸಂಪುಟ – ೦೧ : ಆರ್.ಎಸ್. ಪಂಚಮುಖಿ

೨೬) ಮೌರ್ಯ ಮತ್ತು ಶಾತವಾಹನ ಯುಗ : ಪ್ರೊ ಲಕ್ಷ್ಮಣ್ ತೆಲಗಾವಿ. ಪ್ರಸಾರಾಂಗ ಕ.ವಿ.ವಿ. ಹಂಪಿ.

೨೭) ಶಾಸ್ತ್ರೀಯ. ಸಂ : ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ.

೨೮) ಕನ್ನಡ ಕೈಪಿಡಿ : (ಸಂ) ಬಿ.ಎಂ. ಶ್ರೀಕಂಠಯ್ಯ ಪ್ರಸಾರಾಂಗ ಮೈ ವಿ.ವಿ. ಮೈಸೂರು

೨೯) ಕನ್ನಡ ಛಂದಃಸ್ವರೂಪ : ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ

೩೦) ಛಂದೋರಚನಾ ಸಂಶೋಧನೆಗಳು : ಸೀತಾರಾಮ ಜಾಗೀರದಾರ್